ಮಾನವಿಕ ಕರ್ಣಾಟಕ

ಸಂಪುಟ ೬ ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೫

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಿಕೊಡಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ನಾಟಕ

ಸಂಪುಟ ೬ ಸಂಚಿಕೆ ೧

೨೧

ನವೆಂಬರ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೫

MANAVIKA KARNATAKA, Kannada quarterly of the University of Mysore. Volume 6, Number 1, November 1975. Edited by H. S Krishnaswamy Iyenger and Dr. A.V. Narasimha-Murthy

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಶ್ರೀ ವೀರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು

ವಿಷಯಸೂಚಿ

ಈ ಸಂಚಿಕೆಯ ಲೇಖನಗಾರರು

ಶ್ರೀಯುತರಾದ

೧ **ಪಿ. ಆರ್. ತಿಪ್ಪೇಸ್ವಾಮಿ**, ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತು ಸಂಗ್ರಹಾಲಯದ ಕ್ಯೂರೇಟರ್

೨ **ಎಡ್ವರ್ಡ್ ನೊರೋನ್ಹಾ**, ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರು

೩ **ಎನ್. ಎ. ಹನುಮಂತರಾವ್**. ಧಾರವಾಡದ ಕರ್ನಾಟಕ ಆರ್ಟ್ಸ್ ಕಾಲೇಜಿನಲ್ಲಿ ಮನಶ್ಶಾಸ್ತ್ರ ಪ್ರಾಧ್ಯಾಪಕರು, ವಿಭಾಗ ಮುಖ್ಯರು

೪ **ಬಾಲಕೃಷ್ಣ ಸಾಮಗ ಮಲ್ಪೆ**, ಸಂಶೋಧಕರು, ಇತಿಹಾಸ ಅಧ್ಯಯನ ಕೇಂದ್ರ, ಸಮಾಜ ವಿಜ್ಞಾನ ಶಾಲೆ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ,
ನವದೆಹಲಿ ೧೧೦ ೦೫೭

೫ **ಎಚ್. ಆರ್. ರಘುನಾಥ ಭಟ್**, ಮಾನಸಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಅಧ್ಯಾಪಕರು

೬ **ಕಂಠೀರಾವ್**, ಅಡಿಷನಲ್ ಡೈರೆಕ್ಟರ್, ಭಾಷಾ ನಿರ್ದೇಶನಾಲಯ, ಬೆಂಗಳೂರು

೭ **ವಿ. ಎನ್. ಶೇಷಗಿರಿರಾವ್**, ಮಾನಸಗಂಗೋತ್ರಿಯ ತತ್ತ್ವಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

೮ **ಡಾ. ಎಸ್. ಗುರುರಾಜಾಚಾರ್**, ಮಹಾರಾಜ ಕಾಲೇಜಿನಲ್ಲಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಮುಖ್ಯರು

೯ **ಎಚ್. ಎಂ. ನಾಗರಾಜು**, ಹೆಗ್ಗಡದೇವನಕೋಟೆಯ ಸರ್ಕಾರಿ ಕಿರಿಯ ಕಾಲೇಜಿನ ಪ್ರಿನ್ಸಿಪಾಲರು



ಸ್ವರ್ಣ ಕಲಾ ನಿಪುಣ ಸಿಂಗಣ್ಣಾಚಾರ್

ಪಿ. ಆರ್. ತಿಪ್ಪೇಸ್ವಾಮಿ

ಸ್ವರ್ಣಕಲಾನಿಪುಣ ಸಿಂಗಣ್ಣಾಚಾರ್ಯ

ಪ್ರತಿ ವರ್ಷವೂ ಮೈಸೂರು ನಗರದ ಪ್ರಮುಖ ಆಕರ್ಷಣೆಯೆಂದರೆ ದಸರಾಮಹೋತ್ಸವ. ಮಹಾರಾಜರ ಕಾಲದಲ್ಲಿ ಆರಂಭವಾದ ಈ ಉತ್ಸವದ ಅಂಗವಾಗಿ ವಿಜಯದಶಮಿಯ ದಿನದಂದು ಜರುಗುತ್ತಿದ್ದ ಜಂಬೂಸವಾರಿಯಲ್ಲಿ ಬಳಸಲಾಗುತ್ತಿದ್ದ ಅಂಬಾರಿಯ ಸೌಂದರ್ಯ ಅನುಪಮವಾದದ್ದು. ಆರುಸಾವಿರ ತೊಲೆ ಬಂಗಾರದ ತೆಳುವಾದ ತಗಡಿನ ಹೊದಿಕೆಯಿಂದ ಕೂಡಿದ ಈ ಅಂಬಾರಿ ಬಹಳ ಮನೋಹರವಾಗಿ ನಿರ್ಮಿತವಾಗಿದೆ. ನಾಲ್ಕು ಮೂಲೆಗಳಲ್ಲೂ ಮೂರು ಮೂರರಂತೆ ಸುಂದರವಾದ ಕೆತ್ತನೆ ಕೆಲಸದಿಂದ ಕೂಡಿರುವ ಹನ್ನೆರಡು ಕಂಬಗಳು, ಮೇಲುಭಾಗದಲ್ಲಿ ಭವ್ಯವಾದ ಕಿರೀಟದೋಪಾದಿಯ ಗೋಪುರ, ಅದರ ಮೇಲೆ ಪಂಚಕಲಶಗಳು, ಬಳ್ಳಿಯ ವರಸೆಯ ಕೆತ್ತನೆಯಿಂದ ಕಂಗೊಳಿಸುವ ಪೀಠ—ಇವು ಇದರ ವೈಶಿಷ್ಟ್ಯ. ಇದನ್ನು ನಿರ್ಮಿಸಿದವರು ಶಿಲ್ಪಕಲಾ ಪ್ರವೀಣ ಸಿಂಗಣ್ಣಾಚಾರ್ಯರು.

ಸಿಂಗಣ್ಣಾಚಾರ್ಯರು ಮೈಸೂರಿನವರೇ. ಇರ್ವಿನ್ ರಸ್ತೆಯಲ್ಲಿ ಚಾಮರಾಜೇಂದ್ರ ಕಲಾಶಾಲೆಯಿಂದ ಜನತಾ ಬಜಾರ್ ಕಡೆ ಸ್ವಲ್ಪ ಮುಂದೆ ಹೋದರೆ ರಸ್ತೆಯ ಎಡಭಾಗದಲ್ಲಿ ಉನ್ನತವಾದ ಸೌಧವೊಂದು ಕಣ್ಣಿಗೆ ಬೀಳುತ್ತದೆ. ಕರ್ನಾಟಕದ ಹೆಸರಾಂತ ಕಲಾವಿದರಾದ ಶ್ರೀ ಎಸ್. ಎನ್. ಸ್ವಾಮಿ (ನರಸಿಂಹಸ್ವಾಮಿ)ಯವರ ಸೌಧವೆಂದೇ ಅದು ಹೆಚ್ಚು ಜನರಿಗೆ ಪರಿಚಿತವಾಗಿತ್ತು. ಇವರ ತೀರ್ಥರೂಪರವರಾದ ಸಿಂಗಣ್ಣಾಚಾರ್ಯರ ಕಲಾಕೃತಿಗಳನ್ನು ಅನೇಕರು ನೋಡಿದ್ದಾರೆ. ಆದರೆ ಅವೆಲ್ಲ ಸಿಂಗಣ್ಣಾಚಾರ್ಯರೇ ರಚಿಸಿದವೆಂಬುದು ಭಹುಮಂದಿಗೆ ತಿಳಿಯದು. ಅಜ್ಞಾತ ತಪಸ್ವಿಯಂತೆ ಆಚಾರ್ಯರು ಕಲಾಸೇವೆ ನಡೆಸಿದವರು.

ತೊಂಬತ್ತು ವರ್ಷಗಳ ಗಡಿಯನ್ನು ದಾಟುತ್ತಿದ್ದಾಗಲೂ ಸಿಂಗಣ್ಣಾಚಾರ್ಯರು ತಮ್ಮ ಕಲೆಯನ್ನು ಕೈಬಿಟ್ಟಿರಲಿಲ್ಲ. ನಿತ್ಯವೂ ಸಂಜೆಯ ಸಮಯದಲ್ಲಿ ಚಾಮರಾಜೇಂದ್ರ ಕಲಾಶಾಲೆಯ ಹಿಂಚದಿಯ ರಸ್ತೆಯಲ್ಲಿ ಹೋಗಿ ನಿಂತವರಿಗೆ ಆಚಾರ್ಯರ ದರ್ಶನ ಸಿಗುತ್ತಿತ್ತು.

ಸಿಂಗಣ್ಣಾಚಾರ್ಯರಿಗೆ ಆರಮನೆ ಶಿಲ್ಪಕಲಾವೃತ್ತಿ ವಂಶಪಾರಂಪರ್ಯವಾಗಿ ಬಂದಿತ್ತು. ಇವರ ತಂದೆಯವರಾದ ನರಸಿಂಹಾಚಾರ್ಯರು ಮತ್ತು ದೊಡ್ಡಪ್ಪಂದಿರಾದ ಸಿಂಗಣ್ಣನವರು ಅರಮನೆಯ ಶಿಲ್ಪಿಗಳಾಗಿ ಸೇವೆ ಸಲ್ಲಿಸಿದ್ದವರೇ. ಸಿಂಗಣ್ಣನವರು ಮುಮ್ಮಡಿ ಕೃಷ್ಣರಾಜ ಒಡೆಯರ ಪ್ರತಿಮೆಯನ್ನು ಬೆಳ್ಳಿಯಲ್ಲಿ ನಿರ್ಮಿಸಿದರು. ನರಸಿಂಹಾಚಾರ್ಯರು ಮಾಡಿದ ಕುಸುರಿ ಕೆಲಸದ ಸ್ವರ್ಣಛತ್ರಿ ತಿರುಪತಿ ವೆಂಕಟರಮಣಸ್ವಾಮಿಯ ಪ್ರತಿಮೆಯನ್ನು ಅಲಂಕರಿಸಿದೆ. ಇವರು ತಮ್ಮ ಕಲಾಪ್ರೌಢಿಮೆಯಿಂದ ಮನೆತನದ ಕೀರ್ತಿಗೌರವಗಳನ್ನು ಅಚ್ಚಳಿಯದಂತೆ ಮಾಡಿದ್ದಾರೆ.

ಸಿಂಗಣ್ಣಾಚಾರ್ಯರು ಬಾಲ್ಯದಲ್ಲಿ ಕಲಾಸಂಪರ್ಕ ಪಡೆದರು. ಮೈಸೂರಿನಲ್ಲಿ ಈಗ ಚಾಮರಾಜೇಂದ್ರ ಕಲಾಶಾಲೆ ಇರುವ ಸ್ಥಳದಲ್ಲಿ ಹಿಂದೆ ಕಲೆಯನ್ನೇ ನಂಬಿ ಜೀವಿಸುತ್ತಿದ್ದ ವಿಶ್ವಕರ್ಮ ಜನಾಂಗದವರ ಕೇರಿಯಿತ್ತು. ಅಲ್ಲಿಯೇ ನರಸಿಂಹಾಚಾರ್ಯರ ಮನೆಯೂ ಇತ್ತು. ತಂದೆ ಮಗನನ್ನು ಉತ್ತಮ ಶಿಲ್ಪಿಯನ್ನಾಗಿ ಮಾಡಬೇಕೆಂದು ಮೊದಲಿನಿಂದಲೂ ಕನಸು ಕಂಡಿದ್ದರು. ಅವರ ತಾಯಿಯವರು ಮಗನ ಮನಃಪ್ರವೃತ್ತಿಗೆ ಅಡ್ಡಿಯನ್ನು ತಾರದೆ ಪ್ರೋತ್ಸಾಹಿಸುತ್ತಾ ಬಂದಿದ್ದರು. ಸಿಂಗಣ್ಣಾಚಾರ್ಯರು ಬಾಲ್ಯವನ್ನು ವ್ಯರ್ಥಗೊಳಿಸದೆ ಕಲಾಭ್ಯಾಸದಲ್ಲಿ ಸಾರ್ಥಕಗೊಳಿಸಿಕೊಂಡಿದ್ದರು,

ಇವರ ಮನೆಯ ಸುತ್ತಮುತ್ತಲೂ ಒಂದಲ್ಲ ಒಂದು ಬಗೆಯ ಕಲಾವಿದರು ಇದ್ದರು. ಈ ಕಲಾಜೀವಿಗಳ ಸ್ನೇಹ ಸಂಪರ್ಕ ಸಿಂಗಣ್ಣಾಚಾರ್ಯರಿಗೆ ದೊರಕಿತ್ತು.

ಸಿಂಗಣ್ಣಾಚಾರ್ಯರ ಎಂಟನೆಯ ವಯಸ್ಸಿನಲ್ಲಿ ಇವರ ಮನಸ್ಸು ನಾಟಕ ಕಲೆಯ ಕಡೆ ಹರಿಯಿತು. ಮೈಸೂರಿನ ದೊಡ್ಡಪೇಟೆಯಲ್ಲಿ ಅದೇ ತಾನೆ ನಾಟಕ ಕಲಾಸಂಘವೊಂದು ಸ್ಥಾಪಿತವಾಗಿದ್ದಿತು. ಸಿಂಗಣ್ಣಾಚಾರ್ಯರು ನಾಟಕದಲ್ಲಿ ಪಾತ್ರ ವಹಿಸುವ ಸಾಹಸ ಮಾಡಿದರು. ಇವರ ಅಭಿನಯ ಕಲೆಯನ್ನು ನೋಡಿದವರು ಮೆಚ್ಚಿದರು. ಆಗಿನ ಕ್ರೈಸ್ತ ಪತ್ರಿಕೆಯೊಂದು ಇವರ ಭಾವಚಿತ್ರವನ್ನು ಪ್ರಕಟಿಸಿ ಇವರ ಅಭಿನಯ ಕೌಶಲವನ್ನು ಪ್ರಶಂಸೆಮಾಡಿ ಬರೆದಿತ್ತು.

ಸಿಂಗಣ್ಣಾಚಾರ್ಯರ ಹತ್ತನೆಯ ವಯಸ್ಸಿನಲ್ಲಿ ತಂದೆಯವರಾದ ನರಸಿಂಹಾಚಾರ್ಯರು ಸ್ವರ್ಗಸ್ಥರಾಗಿ ಇಡೀ ಸಂಸಾರದ ಹೊರೆ ಶ್ರೀಯುತರ ತಲೆಯ ಮೇಲೆ ಬಿತ್ತು.

ತಾಯಿಯವರು ಲಾಭದಾಯಕವಲ್ಲದ ನಾಟಕ ಕಲೆಯಿಂದ ಮಗನನ್ನು ಬಿಡಿಸಿ ಶಿಲ್ಪಕಲೆಯ ಕಡೆಗೆ ಅವರ ಮನಸ್ಸು ಎಳೆದರು. ಇದರ ಜೊತೆಯಲ್ಲೇ ಬಿಡುವು ದೊರೆತಾಗ ಸಂಗೀತ ವಿದ್ವಾನ್ ಚನ್ನಂಜಪ್ಪನವರ ಬಳಿ ಇವರು ಸಂಗೀತಾಭ್ಯಾಸ ಮಾಡಿದರು. ಅಲ್ಲದೆ, ತಂಜಾವೂರಿನ ಕೃಷ್ಣಸ್ವಾಮಿಯವರಲ್ಲಿಯೂ ಕೊಂಚ ಕಾಲ ಈ ಅಭ್ಯಾಸ ಸಾಗಿತು. ಆದರೆ ಕ್ರಮೇಣ ಈ ಕಡೆಯೂ ಅಭಿರುಚಿ ತಗ್ಗುತ್ತಾ ಬಂದು ಅಧ್ಯಾತ್ಮದ ಕಡೆ ಮನಸ್ಸು ಹರಿಯಿತು. ಜೊತೆಜೊತೆಯಲ್ಲೇ ಶಿಲ್ಪಕಲೆಯಲ್ಲಿ ಆಸಕ್ತಿ ಬೆಳೆಯಿತು. ಆಧ್ಯಾತ್ಮಿಕ ಜೀವನ ಆರಂಭವಾದ ಮೇಲೆ ಇವರು ಹೊರಗಿನ ಸಂಪರ್ಕಗಳನ್ನು ಕಡಿಮೆಮಾಡಿಕೊಂಡರು. ಪುರಾಣಶ್ರವಣ, ಏಕಾಂತತೆಯಲ್ಲಿ ಕುಳಿತು ಶಿಲ್ಪಕಲಾಭ್ಯಾಸ ಇವುಗಳಲ್ಲಿ ತೊಡಗುತ್ತಿದ್ದರು.

ಆಚಾರ್ಯರ ತಂದೆಯವರು ತೀರಿಕೊಂಡ ಮೇಲೆ ಇವರ ನೆರವಿಗೆ ಬಂಧುಗಳಾದ ಚಲುವಾಚಾರ್ಯರು ಮುಂದೆ ಬಂದರು. ಅರಮನೆ ಶಿಲ್ಪಿಗಳಾಗಿದ್ದ ತಮ್ಮ ದೊಡ್ಡಪ್ಪನವರೊಡನೆ ಇವರು ಹನ್ನೆರಡನೆಯ ವರ್ಷದಲ್ಲಿಯೇ ಅರಮನೆಗೆ ಹೋಗಿ ಕೆಲಸಮಾಡಿ ಬರುತ್ತಿದ್ದರು. ಆದ್ದರಿಂದ ಇವರ ತಂದೆಯವರಿಗೆ ಸಲ್ಲುತ್ತಿದ್ದ ವೇತನ ಇವರಿಗೆ ಖಾಯಂ ಆಯಿತು. ಬಾಲ್ಯದಿಂದಲೇ ಅರಮನೆ ಸಂಪರ್ಕವನ್ನಿಟ್ಟುಕೊಂಡು ಬಂದುದರಿಂದ ಶಿಲ್ಪಕಲೆಯಲ್ಲಿ ಶ್ರದ್ಧಾಪೂರ್ಣ ಅಭ್ಯಾಸವನ್ನು ನಡೆಸಲು ಅನುಕೂಲವಾಯಿತು. ಆಗ ಅರಮನೆಯಲ್ಲಿ ಬೆಳ್ಳಿಯ ಬಾಗಿಲುವಾಡವನ್ನು ಮಾಡಿಸಬೇಕಾದ ಸಂದರ್ಭ ಬಂದಿತು. ಮೈಸೂರಿನ ಅಗ್ರಗಣ್ಯ ಶಿಲ್ಪಿಗಳ ಜೊತೆಯಲ್ಲಿ ಸಿಂಗಣ್ಣಾಚಾರ್ಯರೂ ಕೆಲಸಮಾಡುವ ಸದವಕಾಶ ದೊರೆತು ಹೆಚ್ಚಿನ ಪರಿಶ್ರಮ ಪಡೆಯಲು ಅನುಕೂಲವಾಯಿತು. ಈ ಮಧ್ಯೆ ಆಚಾರ್ಯರಿಗೆ ಹದಿನಾರನೆಯ ವಯಸ್ಸಿನಲ್ಲಿಯೇ ಲಗ್ನವೂ ಆಯಿತು.

ಆಚಾರ್ಯರ ತಾಯಿಯವರಿಗೆ ವೇದಾಂತ ಪುರಾಣಗಳಲ್ಲಿ ಮೊದಲಿನಿಂದಲೂ ಹೆಚ್ಚಿನ ಆಸಕ್ತಿಯಿತ್ತು. ಇವರ ಮನಸ್ಸನ್ನು ಅಧ್ಯಾತ್ಮ ಜೀವನದತ್ತ ತಿರುಗಿಸಲು ಅವರೇ ಮುಖ್ಯ ಕಾರಣರಾಗಿದ್ದರು. ೧೯೦೦ರ ಸಮಯದಲ್ಲಿ ಕಾರ್ಯಾರ್ಥವಾಗಿ ಮೈಸೂರಿಗೆ ಬಂದು ನಜರ್‌ಬಾದಿನ ಕಾಳಪ್ಪನವರ ಮಠದಲ್ಲಿ ತಂಗಿದ್ದ ಬೆಂಗಳೂರಿನ ಸುಪ್ರಸಿದ್ಧ ವೇದಾಂತಿ ಸಹಜಾನಂದ ಸ್ವಾಮಿಗಳ ಬಳಿಗೆ ಹೋಗಿ ವೇದಾಂತ ವಿಷಯದಲ್ಲಿ ಆಗಾಗ ಚರ್ಚೆ ನಡೆಸಿ ಬರುತ್ತಿದ್ದರಂತೆ. ಹೀಗೆ ತಮ್ಮ ಮಾತೃಶ್ರೀಯವರಿಂದಲೂ ಇತರ ಹಿರಿಯರಿಂದಲೂ ವೇದಾಂತವನ್ನು ತಮ್ಮ ಬಾಳಿನ ಒಂದು ಮುಖ್ಯ ಸಾಧನೆಯನ್ನಾಗಿ ಇಟ್ಟುಕೊಂಟು ಬಂದಿದ್ದರು. ಆಚಾರ್ಯರು ಬದುಕಿದ್ದಾಗ ಇವರನ್ನು ನೋಡಲು ಇರ್ವಿನ್ ರಸ್ತೆಯಲ್ಲಿದ್ದ ಇವರ ಮನೆಗೆ ಹೋದವರು ಇವರ ಕೊಠಡಿಯಲ್ಲಿ ನೂರಾರು ವೇದಾಂತ ಗ್ರಂಥಗಳನ್ನು ಕಾಣಬಹುದಿತ್ತು. ಇಂಥ ಸನ್ನಿವೇಶದಿಂದ ಇವರ ಜೀವನ ನಿಷ್ಠಾಪೂರ್ಣವಾಗಿದ್ದಿತು. ಶಿಲ್ಪಕಲೆಯಲ್ಲಿ ಶ್ರದ್ಧಾಭಕ್ತಿಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ತಮ್ಮ ಈ ಆಧ್ಯಾತ್ಮಿಕ ಸಂಪರ್ಕವೇ ಕಾರಣವೆಂದು ಆಚಾರ್ಯರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು.

ಆಚಾರ್ಯರ ಇಪ್ಪತ್ತೆಂಟನೆಯ ವಯಸ್ಸಿನಲ್ಲಿ ಇವರ ತಾಯಿಯವರು ಸ್ವರ್ಗಸ್ಥರಾದರು. ಇದರಿಂದ ಇವರಿಗೆ ಜೀವನದಲ್ಲಿ ಜಿಗುಪ್ಸೆ ತಲೆದೋರಿ, ದೇಶಾಟನೆಯಿಂದ ನೆಮ್ಮದಿ ದೊರಕಿಸಿಕೊಳ್ಳಬಹುದೆಂದು ಇದ್ದಕ್ಕಿದ್ದಂತೆಯೇ ಮೈಸೂರನ್ನು ಬಿಟ್ಟು ಹುಬ್ಬಳ್ಳಿಯ ಶ್ರೀ ಸಿದ್ಧಾರೂಢಸ್ವಾಮಿಗಳ ಸನ್ನಿಧಿಯಲ್ಲಿ ಆಚಾರ್ಯರು ನಿಂತುಬಿಟ್ಟರು. ಈ ವಿಷಯವನ್ನು ತಿಳಿದ ಇವರ ಬಂಧುಗಳು ಹುಬ್ಬಳ್ಳಿಗೆ ಹೋಗಿ ಸಿಂಗಣ್ಣಾಚಾರ್ಯರನ್ನು ಸಮಾಧಾನಗೊಳಿಸಿ ಬಹಳ ಕಷ್ಟದಿಂದ ಕರೆತಂದರು. ಈ ವೇಳೆಗಾಗಲೇ ಅರಮನೆಯ ಕೆಲಸಕ್ಕೆ ಹೋಗಿ ಎರಡು ಮೂರು ತಿಂಗಳು ಕಳೆದುಹೋಗಿತ್ತು. ಇವರ ಹಿತೈಷಿಗಳಾದ ಅರಮನೆಯ ಖಜಾನೆ ಪ್ರೊಫೆಸರರು ಇವರ ವೃತ್ತಿಗೆ ಲೋಪ ಬಾರದಂತೆ ಕ್ರಮ ತೆಗೆದುಕೊಂಡಿದ್ದರಿಂದ ಅರಮನೆ ಕೆಲಸ ಉಳಿದುಕೊಂಡಿತು.

ಹುಬ್ಬಳ್ಳಿಯಿಂದ ಮರಳಿ ಮೈಸೂರಿಗೆ ಬಂದ ಮೇಲೆ ಆಚಾರ್ಯರ ಜೀವನದ ಅಧ್ಯಾಯ ಮಾರ್ಪಟ್ಟಿತು. ಒಂದೆಡೆ ನೆರವಾಗಿ ನಿಂತು ಕಲೆಯಲ್ಲಿ ತೊಡಗುವ ಮನಸ್ಸು ಬಂತು. ಸಾಂಸಾರಿಕ ಜೀವನದಲ್ಲಿ ನೆಮ್ಮದಿ ನೆಲೆಸಿತ್ತು. ಮದರಾಸಿನ ಕಲಾಶಾಲೆಯಲ್ಲಿ ಆಕೃತಿ ರಚನೆಯಲ್ಲಿ ಹೆಚ್ಚಿನ ಪರಿಶ್ರಮ ಪಡೆದು ಬರಲು ಅರಮನೆಯಿಂದ ಇವರನ್ನು ಕಳುಹಿಸಲಾಗಿತ್ತು. ಆದರೆ ಅಲ್ಲಿ ಇವರು ಹೊಸದಾಗಿ ಕಲಿಯಬೇಕಾದುದು ಏನೂ ಇದ್ದಂತೆ ತೋರಲಿಲ್ಲ. ಅಲ್ಲಿಯ ಅಂದಿನ ಮುಖ್ಯಾಧಿಕಾರಿಗಳು ಇವರ ಕಲಾಪ್ರತಿಭೆಗೆ, ಕೈಚಳಕಕ್ಕೆ ಬೆರಗಾಗಿ, ಪ್ರೋತ್ಸಾಹಿಸುವುದಕ್ಕೆ ಬದಲಾಗಿ, ಅಸೂಯೆಯನ್ನು ವ್ಯಕ್ತಪಡಿಸತೊಡಗಿದರಂತೆ. ಇದರಿಂದಾಗಿ ಕೆಲವೇ ತಿಂಗಳುಗಳಲ್ಲಿ ಆಚಾರ್ಯರು ಮೈಸೂರಿಗೆ ಹಿಂದಿರುಗಬೇಕಾಯಿತು.

ಮದರಾಸಿನಿಂದ ಮೈಸೂರಿಗೆ ಬಂದ ಮೇಲೆ ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಾಲಯದ ಗರ್ಭಗುಡಿಯ ಹಿಂಭಾಗದ ಮೂಲೆಯಲ್ಲಿರುವ ಶ್ರೀ ಗಣಪತಿ ವಿಗ್ರಹಕ್ಕೆ ಬೆಳ್ಳಿಯ ಕವಚವನ್ನು ಮಾಡುವ ಕೆಲಸ ಆಚಾರ್ಯರ ಪಾಲಿಗೆ ಬಂದಿತು. ಬೆಳ್ಳಿಯ ಬಾಗಿಲವಾಡ, ಚಿನ್ನದ ಕಿರೀಟ ಮುಂತಾದುವನ್ನು ಬಹಳ ಸುಂದರವಾಗಿ ಇವರು ರಚಿಸಿಕೊಟ್ಟರು. ಇದರಿಂದ ಇವರ ಕೀರ್ತಿ ಹೆಚ್ಚಿತು. ಒಮ್ಮೆ ಒಂದು ಪ್ರಸಂಗ ನಡೆಯಿತು. ಅರಮನೆಗೆ ಒಂದು ಸುವರ್ಣದ ಆಭರಣದ ಅಗತ್ಯ ಇತ್ತು. ಸಿಂಗಣ್ಣಾಚಾರ್ಯರು ಕಾಲವಿಳಂಬ ಮಾಡಬಹುದೆಂದು ತಿಳಿದು ಅದನ್ನು ಬೆಂಗಳೂರಿನ ಪ್ರಸಿದ್ಧ ವರ್ತಕರೊಬ್ಬರ ಕಡೆಯಿಂದ ಮಾಡಿಸಿ ತರಿಸಲಾಯಿತು. ಆದರೆ ನಾಲ್ಮಡಿ ಕೃಷ್ಣರಾಜ ಒಡೆಯರು ಆ ಆಭರಣವನ್ನು ಒಪ್ಪದೆ ಮತ್ತೆ ಅದನ್ನು ಕರಗಿಸಿ ಸಿಂಗಣ್ಣಾಚಾರ್ಯರಿಂದಲೇ ಮಾಡಿಸಿದರು. ಈ ಕೆಲಸವನ್ನು ಮೆಚ್ಚಿದ ಮಹರಾಜರು ಆಚಾರ್ಯರ ಪುತ್ರರಾದ ಶ್ರೀ ಎಸ್. ಎನ್. ಸ್ವಾಮಿಯವರಿಗೆ (ನರಸಿಂಹಸ್ವಾಮಿ) ಕೈಖರ್ಚಿಗಾಗಿ ಐದುನೂರು ರೂಪಾಯಿಗಳನ್ನೂ ಬೊಂಬಾಯಿನಲ್ಲಿ ಚಿತ್ರಕಲಾಭ್ಯಾಸಕ್ಕೆ ಸಂಭಾವನೆಯನ್ನೂ ಕೊಟ್ಟು ಪ್ರೋತ್ಸಾಹಿಸಿದರು.

ಭಾರತದ ಖ್ಯಾತ ಕಲಾವಿದರೆಂದು ಹೆಸರು ಪಡೆದಿರುವ ರಾಜಾ ರವಿವರ್ಮರು ಒಮ್ಮೆ ಅರಮನೆಯಲ್ಲಿ ಕೆಲವು ಚಿತ್ರಗಳನ್ನು ರಚಿಸಲು ಮೈಸೂರಿಗೆ ಆಗಮಿಸಿದ್ದರು. ಆಗ ಸಿಂಗಣ್ಣಾಚಾರ್ಯರಿಗೆ ಮೂವತ್ತು ವರ್ಷ ವಯಸ್ಸು. ಅರಮನೆಯ ಖಜಾನೆ ಆವರಣದಲ್ಲಿ ರಾರಾಜಿಸುತ್ತಿರುವ ನಾಗ ಗಣಪತಿಯ ಸೌಂದರ್ಯವನ್ನೂ ಅದರ ಕೆತ್ತನೆಯಲ್ಲಿನ ಕೌಶಲವನ್ನೂ ಕಂಡ ರವಿವರ್ಮರು ಅದರ ಶಿಲ್ಪಿಯಾದ ಸಿಂಗಣ್ಣಾಚಾರ್ಯರನ್ನು ಬಹುವಾಗಿ ಪ್ರಶಂಸಿಸಿದರು.

ಸಿಂಗಣ್ಣಾಚಾರ್ಯರ ಕೀರ್ತಿಯನ್ನು ಉಳಿಸಬಲ್ಲ ಬಹು ಮುಖ್ಯ ವಸ್ತುಗಳೆಂದರೆ ಮೈಸೂರು ಅರಮನೆಗೆ ಸೇರಿದ ಅಂಬಾರಿ, ಬೆಳ್ಳಿಯ ರಥ ಮತ್ತು ರತ್ನಸಿಂಹಾಸನ.

ಮೈಸೂರು ಅರಸರ ಸಿಂಹಾಸನ ನಾಲ್ಕು ಸಾವಿರ ತೊಲ ಚಿನ್ನದ ಹೊದಿಕೆಯಿಂದ ನಿರ್ಮಿಸಲಾದ ಒಂದು ಅಪೂರ್ವ ಕಲಾ ಕೃತಿ. ಒಳ್ಳೆಯ ಕೆತ್ತನೆ ಕೆಲಸದಿಂದ ರಂಜಿಸುವ ಹಿಂಬದಿಯ ಗೋಪುರ,

ಹಂತಗಳ ಎರಡು ಕಡೆಗಳಲ್ಲೂ ಚಂದನ ಗೊಂಬೆಗಳು, ಮೇಲುಭಾಗದಲ್ಲಿ ಒಳ್ಳೆಯ ಕುಸುರಿ ಕೆಲಸದಿಂದ ಕೂಡಿರುವ ಛತ್ರಿ. ಸಿಂಹಾಸನದ ಒಂದೊಂದು ಭಾಗವೂ ಕಲಾಪೂರ್ಣವಾಗಿದೆ.

ಮಹಾರಾಜರುಗಳು ವರ್ಧಂತಿಯ ಸಮಯದಲ್ಲಿ ಉಪಯೋಗಿಸುತ್ತಿದ್ದ ಬೆಳ್ಳಿಯ ರಥವೂ ಇಷ್ಟೇ ಕಲಾಪೂರ್ಣವಾದ್ದು. ಇವರು ಅರಮನೆಗೆ ಸಂಬಂಧಪಟ್ಟ ಅನೇಕ ಆಭರಣಗಳನ್ನು ಮಾಡಿ ಕೊಟ್ಟಿದ್ದಾರೆ. ಅವುಗಳಲ್ಲಿ ಪಪ್ಪರ್‌ದಾನ್ (ಜವಾಹಿರಿ ಕೆತ್ತನೆ ಕೆಲಸ) ಬಹು ಮುಖ್ಯವಾದುದು. ಇದನ್ನು ವಜ್ರ, ಪಚ್ಚೆ, ಕೆಂಪುಗಳಿಂದ ಮನೋಹರವಾಗಿ ರಚಿಸಲಾಗಿದೆ. ಸುಮಾರು ಎರಡು ಲಕ್ಷ ರೂಪಾಯಿ ಬೆಲೆ ಬಾಳುವ ಈ ಅಪೂರ್ವ ವಸ್ತುವನ್ನು ರಾಜರು ನವರಾತ್ರಿಯ ಸಮಯದಲ್ಲಿ ಮಾತ್ರ ಉಪಯೋಗಿಸುತ್ತಿದ್ದರು. ಇದೇ ರೀತಿ ಪಾನ್‌ದಾನ್, ಪನ್ನೀರ್‌ದಾನ್ ಮುಂತಾದುವನ್ನು ಮಾಡಿ ಕೊಟ್ಟಿದ್ದರು. ಇದೇ ಅಲ್ಲದೆ ಶ್ರೀ ಚಾಮುಂಡೇಶ್ವರಿ ವಿಗ್ರಹದ ಎಂಟು ಹಸ್ತಗಳಿಗೂ ಸುಮಾರು ಒಂದು ಲಕ್ಷ ರೂಪಾಯಿಗಳ ಬೆಲೆ ಬಾಳುವ ಹಸ್ತ ಮತ್ತು ಬಾಹುಗಳ ತೊಡಿಗೆಗಳನ್ನು ಕೆಂಪು ಪಚ್ಚೆ ವಜ್ರಾದಿಗಳಿಂದ ಬಹು ಆಕರ್ಷಕವಾಗಿ ರೂಪಿಸಿಕೊಟ್ಟಿದ್ದಾರೆ.

ಎಂಟು ಸಾವಿರ ತೊಲೆಯ ಸಿಂಹಾಸನವನ್ನು ಕರಗಿಸಿ ಕೇವಲ ಆರು ಸಾವಿರ ತೊಲೆಯ ಚಿನ್ನದಲ್ಲಿ ಇಬ್ಬರು ಕೂರುವಂತೆಯೂ ಹಗುರವಾಗಿಯೂ ಸಿಂಗಣ್ಣಾಚಾರ್ಯರು ಅದನ್ನು ಬಹು ಸಮರ್ಪಕವಾಗಿ ಮಾರ್ಪಡಿಸಿದುದನ್ನು ಕಂಡು ನಾಲ್ವಡಿ ಕೃಷ್ಣರಾಜ ಒಡೆಯರು ಬಹಳ ಮೆಚ್ಚಿದರು. ಅದೇ ಸಂದರ್ಭದಲ್ಲಿ ಶ್ರೀ ಪರಕಾಲಸ್ವಾಮಿ ಮಠದ ರಜತ ಮಂಟಪವನ್ನು ಇವರಿಂದ ಮಾಡಿಸಲಾಯಿತು.


ಮೈಸೂರಿನ ಶ್ರೀ ಶಂಕರಾನಂದ ಭಾರತಿ ಮಠಕ್ಕೆ ಒಂದು ಬೆಳ್ಳಿಯ ಪಾರ್ಥಸಾರಥಿ ರಥವನ್ನು ಇವರು ಮಾಡಿಕೊಟ್ಟಿದ್ದಾರೆ. ಇದು ನೋಡಲು ಸೊಗಸಾಗಿದೆ. ಎರಡು ಜೊತೆ ಕುದುರೆಗಳಿಂದ ಕೂಡಿರುವ ಈ ರಥ ಅಸಾಧಾರಣ ಸೌಂದರ್ಯದಿಂದ ಶೋಭಿಸುತ್ತಿದೆ. ಆಚಾರ್ಯರ ಅಪೂರ್ವ ಶಿಲ್ಪಕೃತಿಗಳಲ್ಲಿ ಇದೂ ಒಂದು. ಅಲ್ಲದೆ ಶ್ರೀ ಚಾಮುಂಡೇಶ್ವರಿ ದೇವಾಲಯದ ಗರ್ಭಗುಡಿಯ ಬೆಳ್ಳಿಯ ಬಾಗಿಲವಾಡವೂ ಆಚಾರ್ಯರ ಕಲಾನೈಪುಣ್ಯಕ್ಕೆ ನಿದರ್ಶನ. ಸುಪ್ರಸಿದ್ಧ ಸಂಗೀತಗಾರರಾದ ವಾಸುದೇವಾಚಾರ್ಯರ ವೀಣೆಯ ಮೇಲೆ ಇರುವ ಒಂದು ಅಂಗುಲ ಎತ್ತರದ ಸರಸ್ವತಿಯ ಪುಟ್ಟ ಸುವರ್ಣ ವಿಗ್ರಹವೂ ಆಚಾರ್ಯರ ಕೌಶಲವನ್ನು ಸಾರುತ್ತದೆ.

ಹೀಗೆಯೇ ಬಹುವಿಧವಾಗಿ ತಮ್ಮ ಜೀವಮಾನವನ್ನು ಕಲೆಗಾಗಿ ತೇದ ಆಚಾರ್ಯರಿಗೆ ಜಯ ಚಾಮರಾಜೇಂದ್ರ ಒಡೆಯರು ಸ್ವರ್ಣಕಲಾನಿಪುಣ ಎಂಬ ಬಿರುದನ್ನು ಹಲವು ವರ್ಷಗಳ ಹಿಂದೆ ನೀಡಿ ಗೌರವಿಸಿದರು. ಆಚಾರ್ಯರು ತಮ್ಮ ಮುಪ್ಪಿನಲ್ಲೂ ಸುಮ್ಮನೆ ಕೂತವರಲ್ಲ. ೧೯೫೭ರಲ್ಲಿ ಚಿನ್ನದ ಸುಂದರ ಉಮಾಮಹೇಶ್ವರ ವಿಗ್ರಹವನ್ನೂ, ೧೯೫೮ರಲ್ಲಿ ಚಕ್ರಪಾಣಿ, ನಾಗಭೂಷಣ ಸ್ವಾಮಿ ಮುಂತಾದ ಪ್ರತಿಮೆಗಳನ್ನೂ ೧೯೬೦ರಲ್ಲಿ ಭರತಪುರದ ರಾಜರಿಗಾಗಿ ರಾಮಲಕ್ಷ್ಮಣ ಸೀತಾದಿಗಳಿರುವ ಪ್ರತಿಮೆಯನ್ನೂ ನಿರ್ಮಿಸಿಕೊಟ್ಟಿದ್ದರು.

ತೊಂಬತ್ತು ವರ್ಷ ವಯಸ್ಸಿನಲ್ಲೂ ಆಚಾರ್ಯರ ದೃಷ್ಟಿ ಬಹು ಚುರುಕ್ಕಾಗಿತ್ತು. ಗಟ್ಟಿ ಪದಾರ್ಥಗಳನ್ನು ಅಗಿಯುವ ಸೌಭಾಗ್ಯವನ್ನು ಆಗಲೂ ಅವರು ಪಡೆದುಕೊಂಡಿದ್ದರು. ಆಚಾರ್ಯರು ಕಲೆಯ ಸೇವೆಗೆ ಆರೋಗ್ಯವೂ ಬಹಳ ಮುಖ್ಯ ಎಂಬಂತೆ ತಮ್ಮ ಶರೀರವನ್ನು ಕಾಪಾಡಿಕೊಂಡು ಬಂದಿದ್ದರು. ಆಧ್ಯಾತ್ಮ ವಿಚಾರದಲ್ಲಿ ಆಳವಾದ ಅನುಭವವನ್ನು ಪಡೆದುಕೊಂಡಿದ್ದರಲ್ಲದೆ ತುಂಬಾ ವಿಚಾರ ಶೀಲರೂ ವಿನಯಪರರೂ ಸತ್ಯಸಂಧರೂ ಆಗಿದ್ದರು. ಶಿಲ್ಪ ಕಲೆಯ ಬಗ್ಗೆ ಬಹು ಗಾಢವಾಗಿ ತಿಳಿದುಕೊಂಡಿದ್ದರು. ಯಾವ ವಿಚಾರವನ್ನೇ ಕುರಿತು ಮಾತನಾಡಲು ತೊಡಗಿದರೂ ತುಂಬಾ ಯೋಚಿಸಿ ವಿಮರ್ಶಿಸಿ ತೂಕಮಾಡಿ ಆಡುತ್ತಿದ್ದರು. ಸದಾ ನಗುಮೊಗದ ಇವರು ಯಾವ ಸಂಪರ್ಕವನ್ನೂ



ಮೈಸೂರರಮನೆಯ ಸಿಂಹಾಸನ
[ವೈ. ನಾಗರಾಜು ಅವರ ಚಿತ್ರ]



ಶ್ರೀ ಪರಕಾಲ ಮಠದ ಕುಸುರಿ ಕೆತ್ತನೆಯ ಬೆಳ್ಳಿಯ ಮಂಟಪ
ಸಿಂಗಣ್ಣಾಚಾರ್ಯ ಮತ್ತು ಅವರ ಶಿಷ್ಯವೃಂದ

ಹೆಚ್ಚಾಗಿ ಇಟ್ಟುಕೊಂಡಿರಲಿಲ್ಲ. ಆದರೆ ಕಾಣಬಂದವರನ್ನು ಸತ್ಕರಿಸುತ್ತಿದ್ದ ರೀತಿ ಇವರ ಹೃದಯ ವೈಶಾಲ್ಯವನ್ನು, ಸುಸಂಸ್ಕೃತಿಯನ್ನು ವ್ಯಕ್ತಪಡಿಸುತ್ತಿತ್ತು.

ಒಮ್ಮೆ (೧೯೫೭ರಲ್ಲಿ) ಸಿಂಗಣ್ಣಾಚಾರ್ಯರನ್ನು ನಾನು ಸಂದರ್ಶನ ಮಾಡಿದಾಗ ಇವರೊಡನೆ ಕಳೆದ ಸಮಯ ಮರೆಯುವಂತಹದಲ್ಲ. ಆಚಾರ್ಯರು ಮುಚ್ಚುಮರೆ ಇಲ್ಲದೆ ಸತ್ಯ ನುಡಿಯುವವರಾಗಿದ್ದರು. ತಮ್ಮ ಪುತ್ರ ಎಸ್. ಎನ್. ಸ್ವಾಮಿಗಳ ಕಲೆಯ ಬಗ್ಗೆ ಇವರ ಅಭಿಪ್ರಾಯವೇನೆಂದು ಕೇಳಿದಾಗ ಇವರು ನೀಡಿದ ಉತ್ತರ ಇದಕ್ಕೆ ನಿದರ್ಶನ. ಮೈಸೂರಿನಲ್ಲೇ ಇದ್ದ ಅದೇ ಹೆಸರಿನ ಇನ್ನೊಬ್ಬರು ಸ್ವಾಮಿಯನ್ನು ಇವರು ನೆನೆಸಿಕೊಂಡು ಅವರ ಚಿತ್ರಕಲೆಯನ್ನು ಮೆಚ್ಚಿಕೊಂಡರು. ಕಲಾವಿಮರ್ಶೆಯ ವಿಚಾರದಲ್ಲಿ ಇವರು ತಮ್ಮ ಮಗನನ್ನೇ ಆದರೂ ವಹಿಸಿಕೊಂಡು ಮಾತನಾಡಲಿಲ್ಲ.

ಕರ್ನಾಟಕದ ಕಲಾವಿದರಿಗೆಲ್ಲ ಆಚಾರ್ಯ ಪುರುಷರಂತಿದ್ದ ಸಿಂಗಣ್ಣಾಚಾರ್ಯರು ತಮ್ಮ ಶ್ರದ್ಧೆ ಕಲಾಸಕ್ತಿಗಳನ್ನು ಕೊನೆಯ ತನಕ ಉಳಿಸಿಕೊಂಡು ಬಂದು ಎಲ್ಲರಿಗೂ ಆದರ್ಶಪ್ರಾಯರಾಗಿದ್ದರು. ಇವರ ಕಲಾಸಾಧನೆ ಮತ್ತು ಕಲಾಸೇವೆ ಎಲ್ಲ ಕಲಾವಿದರಿಗೂ ಸ್ಫೂರ್ತಿದಾಯಕವಾಗಿದೆ.

ಭಾರತದ ಇತರ ಭಾಗಗಳಲ್ಲಿರುವಂತೆ ಕರ್ನಾಟಕದಲ್ಲೂ ಚಿತ್ರಕಲಾ ಸಂಪ್ರದಾಯ ಪ್ರಾಚೀನ ಕಾಲದಿಂದಲೂ ಬಂದಿದೆ. ಕನ್ನಡ ನಾಡಿನ ಚಿತ್ರಕಲೆಯ ಬಹುಭಾಗ ದೇವಾಲಯಗಳಿಗೆ ಸಂಬಂಧಿಸಿದ್ದು. ಮರದಲ್ಲಿ ದೇವಾಲಯಗಳನ್ನು ನಿರ್ಮಿಸುತ್ತಿದ್ದಾಗ, ಮರದಲ್ಲಿಯೇ ಮೂರ್ತಿಗಳನ್ನು ಕಡೆಯುತ್ತಿದ್ದಾಗ, ರಮ್ಯತೆಗಾಗಿ ಅವುಗಳ ಮೇಲೆ ಬಣ್ಣ ಮೂಡಿಸುತ್ತಿದ್ದರು. ಹಿಂದಿನ ದೇವಾಲಯಗಳಲ್ಲಿ ಉತ್ಸವ ಮೂರ್ತಿಯಲ್ಲದೆ ಮರದ ಮೂಲ ಮೂರ್ತಿಯಲ್ಲೇ ಎರಡು ಬಗೆ ಇರುತ್ತಿದ್ದುವು. ಧ್ರುವಬೇರ ಎನಿಸಿಕೊಳ್ಳುವ ಮೂಲವರಿಗೆ ಅಭಿಷೇಕವಿಲ್ಲ : ಅದರ ಮೇಲೆ ಸ್ಟಕ್ಕೋ ಲೇಪನ ಬಳಿದು ಬಣ್ಣಗಳಿಂದ ಅಲಂಕರಿಸುತ್ತಿದ್ದರು. ನಿತ್ಯದ ಅಭಿಷೇಕ ಕ್ರಿಯೆಗಳಿಗೆ ಸ್ನಪನಬೇರ ಎನಿಸಿಕೊಳ್ಳುವ ಮೂರ್ತಿಗಳು ಇರುತ್ತಿದ್ದುವು. ವರ್ಣಚಿತ್ರಕಲೆಯ ಉಗಮ ಧ್ರುವಬೇರ ಮೂರ್ತಿಗಳಲ್ಲಿ ಆಯಿತು. ಪ್ರಾಚೀನ ಚಿತ್ರಕಲೆ ದೇವಾಲಯದಲ್ಲೇ ಆರಂಭವಾಗಿ ಬಹುಕಾಲ ಶಿಲ್ಪಕ್ಕೆ ಸಹಕಾರಿ ಮಾತ್ರ ಆಗಿದ್ದಿತು.*

---

*ಕನ್ನಡ ವಿಶ್ವಕೋಶ, ಸಂ. ೪, ಪು. ೧೦೯

ಮೂಲ : ಜಾನ್ ಜಿ. ಗಾಡ್‌ಫ್ರಿ
ಅನುವಾದ : ಎಡ್ವರ್ಡ್ ನೊರೋನ್ಹಾ

ಸರ್ ವಿಲಿಯಮ್ ಜೋನ್ಸ್ ಮತ್ತು ಪೇರ್ ಕೋರ್ಡುರ್: ಒಂದು ಭಾಷಾಶಾಸ್ತ್ರೀಯ ಟಿಪ್ಪಣಿ

ಸರ್ ವಿಲಿಯಂ ಜೋನ್ಸ್ 1794ರಲ್ಲಿ ಕಾಲವಾಗುವ ವೇಳೆಗೆ ಇಡೀ ಯೂರೋಪ್ ಮತ್ತು ವಿಷ್ಯದಲ್ಲಿ ಪ್ರಸಿದ್ಧನಾಗಿದ್ದ. ಕಷ್ಟಪಟ್ಟುಗಳಿಸಿದ ಅವನ ಕೀರ್ತಿ ಅಮೆರಿಕದವರೆಗೂ ಹರಡಿತ್ತು. ಅತ್ಯಂತ ಶ್ರೇಷ್ಠ ಪಾಂಡಿತ್ಯ ಗಳಿಸಿದ ತನ್ನ ಕಾಲದ ವಿದ್ವಾಂಸರ ಪೈಕಿ ಒಬ್ಬನೆಂದೂ ಕಾವ್ಯ, ಸಸ್ಯ ವಿಜ್ಞಾನ, ಕಾನೂನು, ತೌಲನಿಕ ಮಾನವಶಾಸ್ತ್ರ, ಪೌರಸ್ತ್ಯಸಾಹಿತ್ಯ - ಇಷ್ಟೆಲ್ಲ ವಿಭಿನ್ನ ಕ್ಷೇತ್ರಗಳಿಗೆ ಗಮನಾರ್ಹವಾದ ಕೊಡುಗೆಯನ್ನು ನೀಡಿದ ವಿದ್ವಾಂಸನೆಂದೂ ಅವನು ಖ್ಯಾತನಾಗಿದ್ದ. ಇಂಗ್ಲೆಂಡಿನವರು ಕಳಿಸಿದ ಆಡಳಿತಾಧಿಕಾರಿಗಳಲ್ಲಿ ಅತ್ಯಂತ ನೀತಿವಂತ, ಮಾನವೀಯತೆಯುಳ್ಳವನು ಎಂಬುದಾಗಿ ಬ್ರಿಟಿಷರು ಹಾಗೂ ಭಾರತೀಯರು ಅವನನ್ನು ಮೆಚ್ಚಿದರು. ಇಂದಾದರೋ ಇಂಡೋ-ಯೂರೋಪಿಯನ್ ಭಾಷಾಶಾಸ್ತ್ರ ಮತ್ತು ತೌಲನಿಕ ಭಾಷಾಶಾಸ್ತ್ರದ ಆರಂಭಸ್ಥಾನವೆಂದು ಆಗಾಗ್ಗೆ ಉದ್ಧರಿಸಲಾದ "Third Anniversary Discourse to the Asiatic Society of Bengal" ಎಂಬ ಅವನ ಭಾಷಣದ ಒಂದು ಚಿಕ್ಕ ಭಾಗಕ್ಕೋಸ್ಕರವೇ ಅವನು ಸ್ಮರಣೀಯನಾಗಿದ್ದಾನೆ ಎಂದು ಹೇಳಬಹುದು.[1] ಲ್ಯಾಟಿನ್, ಗ್ರೀಕ್ ಮತ್ತು ಸಂಸ್ಕೃತ ಭಾಷೆಗಳ ಸಾಮಾನ್ಯ ಮೂಲವನ್ನು ಕಂಡುಹಿಡಿದ ಕಾಲದ ಕುತೂಹಲಕಾರಿ ಸನ್ನಿವೇಶಗಳನ್ನು ಕುರಿತ ಪ್ರಕೃತ ಲೇಖನದಲ್ಲಿ ಜೋನ್ಸನ, ಈಗಾಗಲೆ ಮಿತಿಮೀರಿದ ಅನಾದರಣೆಗೆ ಪಾತ್ರವಾಗಿದ್ದ, ಪ್ರಖ್ಯಾತಿಯನ್ನು ತಗ್ಗಿಸುವ ಉದ್ದೇಶವಿಲ್ಲ. ಜೋನ್ಸನ ಪ್ರತಿಭೆಯ ಪ್ರಭಾವಳಿಯಿಂದಾಗಿ ಅಪ್ರಸಿದ್ಧಿಯ ನೆರಳಲ್ಲೇ ಉಳಿದ ಇನ್ನೊಬ್ಬ ಪೌರಸ್ತ್ಯವಿಷಯ ವಿದ್ವಾಂಸನಿಗೆ ಸಲ್ಲಬೇಕಾದ ನ್ಯಾಯವನ್ನು ಕೊಡುವುದು, ಪಾಂಡಿತ್ಯದ ಚರಿತ್ರೆಯನ್ನು ಅದೆಷ್ಟೋ ಬಾರಿ ಗೊಂದಲಮಯಗೊಳಿಸುವಂಥ ಒಂದು ಅಣಕವನ್ನು ಬಯಲಿಗೆಳೆಯುವುದು ಇಲ್ಲಿಯ ಉದ್ದೇಶ.

ಬಂಗಾಳದ ಸುಪ್ರೀಂ ಕೋರ್ಟಿನ ಕಿರಿಯ ನ್ಯಾಯಾಧೀಶನಾಗಿದ್ದ ಜೋನ್ಸನಿಗೆ ಬ್ರಾಹ್ಮಣ ಕಾನೂನು ಕಾಯಿದೆಗಳ ಖಚಿತ ತಿಳಿವಳಿಕೆಯ ಆವಶ್ಯಕತೆ ಇದ್ದುದರಿಂದ 1785ರ ಬೇಸಗೆಯ ಕೊನೆಯಲ್ಲಿ ಅವನು ಸಂಸ್ಕೃತವನ್ನು ಕಲಿತುಕೊಳ್ಳುವುದು ಹೆಚ್ಚು ಕಡಿಮೆ ಅನಿವಾರ್ಯವಾಯಿತು. 1786ರ ಜನವರಿಯಲ್ಲಿ ಏಷಿಯಾಟಿಕ್ ಸೊಸೈಟಿಯ ಮೂರನೆಯ ಅಧ್ಯಕ್ಷ ಭಾಷಣವನ್ನು ಸಿದ್ಧಪಡಿಸಬೇಕು ಎನ್ನುವಷ್ಟರಲ್ಲಿ ಸಂಸ್ಕೃತದ ಅಧ್ಯಯನವನ್ನು (ಸಂಸ್ಕೃತ ಅವನು ಕಲಿಯುತ್ತಿದ್ದ

---

1. ಉದಾಹರಣೆಗೆ : Bloomfield, *Language* (1933), p. 12 ; Jespersen, *Language: its Nature, Development and Origin* (1922), pp. 33-34 ; ದ ಸಸೂರ್ : ಕರ್ ದೆ ಲಿಂಗ್ವಿಸ್ತಿಕ್ ಜೆನೆರಾಲ್ (1922), p.2; Pendersen, *The Discovery of Language* (1931), p. 18 ; ಮತ್ತಿತರ

ಇಪ್ಪತ್ತೆಂಟನೆಯ ಭಾಷಣವಾಗಿತ್ತು) ಕೆಲವೇ ತಿಂಗಳು ನಡೆಸಿದನಷ್ಟೆ. "On the Hindus' ಎಂಬ ಶಿರೋನಾಮೆಯುಳ್ಳ ಈ ಭಾಷಣದಲ್ಲಿ ಈಗ ಪ್ರಖ್ಯಾತವಾದ ಈ ಮಾತುಗಳಿದ್ದುವು :

"ಸಂಸ್ಕೃತ ಭಾಷೆಯು ಪ್ರಾಚೀನತೆ ಏನಿದ್ದರೂ, ಅದರ ರಚನಾವಿನ್ಯಾಸ ಅದ್ಭುತವಾಗಿದೆ ; ಲ್ಯಾಟಿನಿಗಿಂತ ಸಮೃದ್ಧ, ಗ್ರೀಕಿಗಿಂತ ಪರಿಪೂರ್ಣವಾಗಿದ್ದ ಈ ಭಾಷೆ ಇವೆರಡರಕ್ಕಿಂತಲೂ ಅತ್ಯಂತ ಸೂಕ್ಷ್ಮವೂ ನಯವೂ ಆಗಿದ್ದು ಧಾತುಗಳಲ್ಲಿ ಮತ್ತು ವ್ಯಾಕರಣರೂಪಗಳಲ್ಲಿ ಇವೆರಡು ಭಾಷೆಗಳಿಗೆ ರಚನಾದೃಷ್ಟಿಯಲ್ಲಿ ಸದೃಶವಾಗಿದೆ. ಈ ಸಾದೃಶ್ಯ ಆಕಸ್ಮಿಕವಾಗಿ ಯಾದೃಚ್ಛಿಕವಾಗಿ ಒದಗಿ ಬರಬಹುದಾದ ಸಾದೃಶ್ಯಕ್ಕಿಂತ ಹೆಚ್ಚು ಪ್ರಬಲವಾಗಿದೆ ; ಎಷ್ಟು ಪ್ರಬಲವೆಂದರೆ ಯಾವನೇ ಭಾಷಾ ಶಾಸ್ತ್ರಜ್ಞನಾಗಲಿ ಈ ಮೂರು ಭಾಷೆಗಳನ್ನು ಪರಿಶೀಲಿಸಿದ ಮೇಲೆ, ಇವು ಒಂದೇ ಸಾಮಾನ್ಯ ಮೂಲ ದಿಂದ ಹುಟ್ಟಿಬಂದಿವೆ ಎಂದು ನಂಬದಿರಲಾರ. (ಈ ಮೂಲ ಪ್ರಾಯಃ ಈಗ ಇಲ್ಲ.) ಬಹು ಭಿನ್ನವಾಗಿ ರುವ ನುಡಿಗಟ್ಟುಗಳೊಡನೆ ಸಂಯೋಜಿತವಾಗಿದ್ದರೂ ಗಾತಿಕ್ ಮತ್ತು ಕೆಲ್ಟಿಕ್ ಭಾಷೆಗಳು ಸಂಸ್ಕೃತ ಭಾಷೆಯೊಡನೆ ಅದೇ ಮೂಲದಿಂದ ಬಂದಿದ್ದುವು ಎಂದು ಊಹಿಸಲು ಇಂತಹದೇ, ಆದರೆ ಅಷ್ಟು ಪ್ರಬಲವಾಗಿರದ, ಇನ್ನೊಂದು ಕಾರಣವಿದೆ. ಪರ್ಷಿಯ ದೇಶದ ಹಳಮೆಗಳ ಯಾವುದೇ ಪ್ರಶ್ನೆ ಯನ್ನು ಚರ್ಚಿಸುವುದಕ್ಕೆ ಈ ಸಭೆ ಸೂಕ್ತ ಸ್ಥಾನವೆನಿಸಿದರೆ ಹಳೆಯ ಪರ್ಷಿಯನ್ ಭಾಷೆಯನ್ನು ಇದೇ ಕುಟುಂಬಕ್ಕೆ ಸೇರಿಸಬಹುದು."[2]

ಜೋನ್ಸನ ಭಾಷಣದ ವಿಶಾಲ ವ್ಯಾಪ್ತಿಯೊಳಗೆ ಈ ಹೇಳಿಕೆ "ತೌಲನಿಕ ಮಾನವಶಾಸ್ತ್ರದಲ್ಲಿ ಇವನು (ಜೋನ್ಸ್) ಕಲ್ಪಿಸಿದ ಗುರುತರ ಹಾಗೂ ಹೆಚ್ಚು ಗಮನಾರ್ಹ ಸಿದ್ಧಾಂತ ಮಂಡನೆಯ ತರ್ಕದಲ್ಲಿ ಒಂದು ಇಟ್ಟಿಗೆ," ಅಷ್ಟೆ ಎಂದು ಅವನ ಜೀವನ ಚರಿತ್ರೆಯನ್ನು ಬರೆದ ಗಾರ್ಲೆಂಡ್ ಕ್ಯಾನನ್ ಹೇಳಿದ್ದಾನೆ.[3] ಪ್ರಪಂಚದ ಪ್ರಮುಖ ಬುಡಕಟ್ಟುಗಳನ್ನು ಚರ್ಚಿಸಿ ಅವು ಗಳ ಉತ್ಪತ್ತಿಯ ಪ್ರಶ್ನೆಯನ್ನು ಉತ್ತರಿಸಿ ಮುಕ್ತಾಯಗೊಳ್ಳಲಿದ್ದ ಐದು ಭಾಷಣಗಳ ಮಾಲಿಕೆ ಯಲ್ಲಿ ಈ ಮೂರನೆಯ ಅಧ್ಯಕ್ಷ ಭಾಷಣ ಮೊದಲನೆಯದಾಗಿತ್ತು. ಹದಿನೆಂಟನೆಯ ಶತಮಾನದವರ ಮನೋಭಾವದ ವೈಜ್ಞಾನಿಕ ಆಶಾಭಾವನೆಯ ಫಲವಾಗಿ ಹುಟ್ಟಿದ, ಇಷ್ಟು ವ್ಯಾಪಕವಾಗಿ ಚಾಚಿದ್ದ ಯೋಜನೆಯಲ್ಲಿ ತನ್ನ ಭಾಷಾಶಾಸ್ತ್ರೀಯ ಸಿದ್ಧಾಂತ ಮಂಡನೆಗೆ ಬೇಕಾದ ಸಾಕ್ಷ್ಯಗಳನ್ನು ಸಂಗ್ರಹಿಸುವ ಗೋಜಿಗೆ ಜೋನ್ಸ್ ಹೋಗಲಿಲ್ಲ ಎಂದೆನಿಸುತ್ತದೆ–ಮುಂದೆ ನಡೆಸಬಹುದಾದ ತನ್ನ ಸ್ವಂತ ಅಧ್ಯ ಯನಕ್ಕೆ ಇದು ಸಾಕಷ್ಟು ಉಪಯುಕ್ತ ವಿಷಯವೆಂದೂ ಅವನು ಭಾವಿಸಲಿಲ್ಲ. ಹಾಗೆ ನೋಡುವು ದಾದರೆ ತಮ್ಮ ಹೊಸ ತೌಲನಿಕ ವಿಧಾನವನ್ನು ಉಪಯೋಗಿಸಿ 1816ರಲ್ಲಿ ಮೃತ ಮಾತೃಭಾಷೆಯನ್ನು ಅನುಮಿತಿಗೊಳಿಸಿದ ಫ್ರೀಡ್‌ರಿಚ್ ಫೋನ್ ಶ್ಲೆಗೆಲ್, ಫ್ರಾಂಜ್ ಬಾಪ್–ಇಂಥ ಉದಯೋನ್ಮುಖ ಜರ್ಮನ್ ಭಾಷಾಶಾಸ್ತ್ರ ಪರಿಣತರ ಸಾಧನೆಯನ್ನು ಮೊದಲೇ ತಿಳಿದುಕೊಳ್ಳುವುದು ಸಾಧ್ಯವಾಗಿದ್ದರೆ ಅದೊಂದು ವಿಶೇಷ ಸಾಧನೆ ಎಂದು ಜೋನ್ಸ್ ಆಶ್ಚರ್ಯ ಮೆಚ್ಚಿಕೆಗಳನ್ನು ಸೂಚಿಸುತ್ತಿದ್ದನೇ ಎಂಬುದು ಸಂದೇಹಾಸ್ಪದವಾಗಿದೆ. ಏಕೆಂದರೆ ಭಾಷೆಗಳನ್ನು ಭಾಷಗಳಿಗೋಸ್ಕರ ಮಾತ್ರ ಅಧ್ಯಯನ ಮಾಡುವಷ್ಟು ಯೋಗ್ಯತೆ ಅವಕ್ಕಿಲ್ಲ. ಅವಕ್ಕಿಂತ ಮೇಲ್ಮಟ್ಟದ ಉದ್ದೇಶಕ್ಕಾಗಿ ಮಾತ್ರ ಅವನ್ನು ಅಧ್ಯಯನ ಮಾಡಬೇಕು: ಇದು ಜೋನ್ಸ್ ಸದಾ ಸಮರ್ಥಿಸುತ್ತಿದ್ದ ಒಂದು ಅಭಿಪ್ರಾಯವಾಗಿತ್ತು.[4]

---

[2] *The Works of Sir William Jones*, ed. Lord Teignmouth (London, 1807), III, 34

[3] Garland Cannon, *Oriental Jones* (London, 1964), p. 142

[4] ಜೋನ್ಸನ ಮಾತುಗಳು ; "ಭಾಷೆಗಳೆಂದರೆ ನಿಜವಾದ ವಿದ್ವತ್ತನ್ನು ಪಡೆಯಲು ಬೇಕಾದ ಕೇವಲ ಉಪಕರಣಗಳು ಎಂದು ನಾನು ಯಾವಾಗಲೂ ಭಾವಿಸಿದ್ದೇನೆ ; ವಿದ್ವತ್ತಿಗೂ ಭಾಷೆಗಳಿಗೂ ಅಭೇದವನ್ನು ಕಲ್ಪಿಸುವುದು ತಪ್ಪು." *Works*, III, 7

ತನ್ನ ಜೀವಮಾನದುದ್ದಕ್ಕೂ ಪೌರಸ್ತ್ಯ ವಿಷಯಗಳ ಅಧ್ಯಯನವನ್ನು ಜೋನ್ಸ್ ಕೈಗೊಂಡಿದ್ದ ನಿಜ. ಆದರೆ ಸಾಂಸ್ಕೃತಿಕ ವಿನಿಮಯವನ್ನು ಬೆಳೆಸಿಕೊಳ್ಳುವುದು ಆ ಅಧ್ಯಯನದ ಸತತೋದ್ದೇಶವಾಗಿತ್ತು. ಅದರಲ್ಲೂ ಸಂಸ್ಕೃತವನ್ನು ಕಲಿಯುವುದಕ್ಕೆ ಬ್ರಿಟಿಷರ ಆಳ್ವಿಕೆಯಲ್ಲಿರುವ ಭಾರತೀಯರ ಬಗೆಗಿನ ಹಿತೈಷಿ ಮನೋಭಾವ ವಿಶೇಷ ಕಾರಣವಾಗಿತ್ತು.

"Third Anniversity Discoure" ಭಾಷಣಕ್ಕೆ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಕಲ್ಕತೆಯ ಕೆಳಗಡೆ ಭಾರತದ ಪೂರ್ವಕರಾವಳಿಯಲ್ಲಿರುವ ಪಾಂಡಿಚೆರಿ ಮತ್ತು ಫ್ರಾನ್ಸಿನ ಪ್ಯಾರಿಸ್—ಇವೆರಡು ಪಟ್ಟಣಗಳ ನಡುವೆ ತುಂಬ ವಿಳಂಬವಾಗಿ ಸಾಗುತ್ತಿದ್ದ ಕಡಲ ಅಂಚೆಯ ಮೂಲಕ ಒಂದು ಪತ್ರವ್ಯವಹಾರ ಆರಂಭವಾಯಿತು. ಇದು 1767ರ ಮಾತು. ಮಧುರೆಯ ಫ್ರೆಂಚ್ ಜೆಜ್ವಿಟ್ ಮಿಶನಿನ ಸುಪೀರಿಯರ್ ಆಗಿದ್ದ, ಎಪ್ಪತ್ತಾರು ವರ್ಷ ವಯಸ್ಸಿನಪೇರ್ ಗಾಸ್ತೊಂ ಕೋರ್ಡುರ್ ಎಂಬವನಿಗೂ ಕ್ರೈಸ್ತ ಸಂದೇಶವನ್ನು ಭಾರತೀಯ ಮನೋಭಾವಕ್ಕೆ ಸರಿಯಾಗಿ ವ್ಯಾಖ್ಯಾನಿಸುವ ಆವಶ್ಯಕತೆಯಿಂದಾಗಿ ಸಂಸ್ಕೃತವನ್ನು ಅಧ್ಯಯನ ಮಾಡುವ ಅನಿವಾರ್ಯತೆ ಬಂದೊದಗಿತು. ಫ್ರಾನ್ಸಿನ "ಅಕಾಡೆಮಿ ದೆ ಇನ್ಸ್‌ಕ್ರಿಪ್ಸಿಯೊಂ ಎ ಬೆಲ್‌ಲೆತ್ರ್" ಎಂಬ ವಿದ್ವತ್ ಪರಿಷತ್ತಿನ ಅಬ್ಬೆ ಬಾರ್ತೆಲೆಮಿ ಎಂಬವನು ಸಂಸ್ಕೃತ ಭಾಷೆಯನ್ನು ಕುರಿತಂತೆ ಮಾಹಿತಿಯನ್ನು ಮತ್ತು ಪಾಂಡಿತ್ಯಪೂರ್ಣ ಬರಹಗಳನ್ನು ಕಳಿಸಬೇಕೆಂದು ಕೇಳಿಕೊಂಡಾಗ, ಪೇರ್ ಕೋರ್ಡುರ್ ತನ್ನ ಉತ್ತರದ ಜತೆಯಲ್ಲಿ ಲ್ಯಾಟಿನ್ ಗ್ರೀಕ್‌ಗಳೊಡನೆ ಸಂಸ್ಕೃತ ಪಡೆದಿದ್ದ ಗಮನಾರ್ಹ ಸಾದೃಶ್ಯವನ್ನು ಕುರಿತು ಒಂದು ಸಂಕ್ಷಿಪ್ತ ಟಿಪ್ಪಣಿಯನ್ನು, ಅಡಿ ಟಿಪ್ಪಣಿಗಳನ್ನು ಸೇರಿಸಿ, ಅಕಾಡೆಮಿಯ ಪೌರಸ್ತ್ಯವಿಷಯಗಳ ವಿದ್ವಾಂಸರಿಗೋಸ್ಕರ ಕಳಿಸಿದ[5]. ಇದರಲ್ಲಿ ತನ್ನ ವಾದಕ್ಕೆ ನಿದರ್ಶನವಾಗಿ ಪದಗಳ ಪಟ್ಟಿಯನ್ನು ಇಟ್ಟ. ಈ ಪಟ್ಟಿಗೆ ಸಂಬಂಧಿಸಿದಂತೆ ವ್ಯಾಕರಣದ ಹಾಗೂ ಧ್ವನ್ಯಾತ್ಮಕ ಸಂಬಂಧಗಳನ್ನು ಚರ್ಚಿಸುವ ಹದಿನೆಂಟು ಸಂಶೋಧನಾತ್ಮಕ ಟಿಪ್ಪಣಿಗಳಿದ್ದುವು. ಕೊನೆಗೆ ಆತ ಒಂದು ಪ್ರಶ್ನೆಯನ್ನು ಕೇಳಿದ್ದ : "ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಅದರಲ್ಲೂ ಲ್ಯಾಟಿನ್ ಭಾಷೆಯಲ್ಲಿ ಸಂವಾದಿ ಪದಗಳನ್ನು ಪಡೆದಿರುವ ಅಷ್ಟೊಂದು ಪದಗಳು ಸಂಸ್ಕೃತದಲ್ಲಿ ಇರುವುದು ಹೇಗೆ?"[6] ತನ್ನ ಪ್ರಶ್ನೆಯನ್ನು ತಾನೇ ಉತ್ತರಿಸಿ ಆರು ಪರಿಹಾರಗಳನ್ನು ಸೂಚಿಸಿ ಅವುಗಳಲ್ಲಿ ಐದನ್ನು ನಿರಾಕರಿಸಿದ: ವಾಣಿಜ್ಯ, ವಿದ್ವಾಂಸರ ನಡುವಣ ಸಾಮಾಜಿಕ ಸಂಬಂಧ, ಜನತೆಗಳಿಗಿರುವ ಪರಸ್ಪರ ಸಾಮೀಪ್ಯ, ಧರ್ಮ ಮತ್ತು ಆಕ್ರಮಣ. ಆದುದರಿಂದ ಈ ಭಾಷೆಗಳಿಗೆ ಒಂದು ಸಾಮಾನ್ಯ ಮೂಲವಿರುವುದು ಸರಿಯಾದ ಪರಿಹಾರವೆಂದೆನಿಸುತ್ತದೆ ಎಂಬ ತೀರ್ಮಾನಕ್ಕೆ ಬಂದ.[7] ಒಂದು ಸಾಮಾನ್ಯ ಮೂಲ ಎಂಬ ಮಾತುಗಳನ್ನು ಅವನು ಹೇಗೆ ಅರ್ಥ ಮಾಡಿಕೊಂಡಿದ್ದ ಎಂಬುದನ್ನು ಕೆಳಗಿನ ಅವತರಣಿಕೆಯಿಂದ ತಿಳಿದುಕೊಳ್ಳಬಹುದು.

"ಜನರಿಗೆಲ್ಲ ಅಪ್ಪಣೆಯಾದಂತೆ, ಅವರು ಪ್ರಪಂಚದ ನಾನಾ ಭಾಗಗಳಿಗೆ ಹೋಗಿ ನೆಲಸುವಂತೆ ಅವರನ್ನು ನಿರ್ಬಂಧಪಡಿಸಲು ಅವರ ಭಾಷೆಯಲ್ಲಿ ಅವನು (ದೇವರು) ಉಂಟುಮಾಡಿದ ಗೊಂದಲದ ರೂಪದ ಒಂದು ಆಶ್ಚರ್ಯಕರ ಪವಾಡವೇ ಬೇಕಾಯಿತು. ಆದರೆ ಏಕರೂಪವುಳ್ಳ ಕೆಲವಾದರೂ ಪದಗಳೂ ಎಲ್ಲಾ ಹೊಸಭಾಷೆಗಳಲ್ಲಿ ಉಳಿಯದಷ್ಟು ಆ ಗೊಂದಲ ಪೂರ್ತಿಯಾಗಿತ್ತೆ? ಸೆನಾರ್ ತಪ್ಪಲಲ್ಲಿ ಸೇರಿರುವ ಜನಗಳು ಒಬ್ಬನ ಮಾತನ್ನು ಇನ್ನೊಬ್ಬ ಅರ್ಥಮಾಡಿಕೊಳ್ಳದ ಹಾಗೆ ಆಗಬೇಕಾದರೆ ಅಷ್ಟೆಲ್ಲ ಗೊಂದಲ ಅನಾವಶ್ಯಕವಾಗಿತ್ತು. ಫ್ರೆಂಚ್ ಮತ್ತು ಇಟಾಲಿಯನ್ ಭಾಷೆಗಳಲ್ಲಿ ಸದೃಶರೂಪ

---

5 (ಒಸ್ತುಅ ಎ) 'ಮೆಮುಆರ್ಸ್ ದೆ ಲಾ'ಕೆದ್‌ಮಿ ದೆ ಇನ್ಸ್‌ಕ್ರಿಪ್ಸಿಯೊಂ ಎ ಬೆಲ್‌ಲೆತ್ರ್"; XLIX (1784–1793), 647-697 - ಇಲ್ಲಿ ಈ ಪತ್ರ ವ್ಯವಹಾರವನ್ನು ನೋಡಬಹುದು.

6 ಅಲ್ಲಿಯೇ, p. 659

7 ಅಲ್ಲಿಯೇ, p. 660

ಗಳಿಲ್ಲವೆ ? ಇದ್ದರೂ ಹಠಾತ್ತನೆ ರೋಮ್ ನಗರಕ್ಕೆ ಸ್ಥಳಾಂತರಗೊಂಡ ಫ್ರೆಂಚ್ ಸಿಪಾಯಿ ಕಿವುಡನಾಗಿದ್ದಂತೆ, ಮೂಕನಾಗಿದ್ದಂತೆ ಇರುತ್ತಾನೆ. ಅವನು (ಅಲ್ಲಿಯ ಭಾಷೆಯನ್ನು) ಅರ್ಥಮಾಡಲಾರ, ಅವನನ್ನು (ಅವನ ಭಾಷೆಯನ್ನು) ಅಲ್ಲಿಯವರು ಅರ್ಥಮಾಡಲಾರರು.

"ಇಲ್ಲಿ ಕೇಳಿದ ಪ್ರಶ್ನೆಗೆ ಇದು ಸರಳವಾದ ಉತ್ತರವಾಗಲಾರದೆ ? ಹೊಸ ಭಾಷೆಗಳಲ್ಲಿ ಅನೇಕ ಸಂವಾದಿ ಪದಗಳು ಉಳಿದುವು ; ಕಾಲಕ್ರಮೇಣ ಬಹು ದೊಡ್ಡ ಸಂಖ್ಯೆಯಲ್ಲಿ ಇಂಥ ಪದಗಳು ನಷ್ಟವಾದುವು : ಇನ್ನು ಕೆಲವು ಗುರುತಿಸಲಾರದಷ್ಟು ವಿಕೃತಿಗೊಂಡುವು ; (ಭಾಷೆಗಳ) ಸಾಮಾನ್ಯ ಮತ್ತು ಪ್ರಾಚೀನ ಸೋದರತ್ವದ ಚಿರಸಾಕ್ಷಿಯಾಗುವಂತೆ ಕೆಲವು ಪದಗಳು ಈ ದುರ್ಗತಿಯಿಂದ ಪಾರಾಗಿ ಉಳಿದುವು"[8].

ಬೈಬಲಿನ ಜೆನೆಸಿಸ್ ಪುಸ್ತಕದ ಹೇಳಿಕೆಗಳೊಡನೆ ಪದಶಃ ಏಕಾಭಿಪ್ರಾಯವನ್ನು ಇಟ್ಟುಕೊಳ್ಳಬೇಕೆಂಬ ಆತಂಕದಲ್ಲಿ ಬೇಬಲ್ ಪ್ರಕರಣದ ಅನಂತರ ಅದು ವಿವಿಧ, ಪರಸ್ಪರ ಸಂಬಂಧವನ್ನು ಪಡೆದ, ಕಾಲಕಳೆದಂತೆ ಹೆಚ್ಚು ಹೆಚ್ಚಾಗಿ ದೂರ ಸರಿದ ಭಾಷೆಗಳಾಯಿತೆಂದೂ, ಇವುಗಳ ಪೈಕಿ ಲ್ಯಾಟಿನ್ ಗ್ರೀಕ್ ಸಂಸ್ಕೃತಗಳಿದ್ದುವೆಂದೂ ಕೋರ್ಡು ಸಿದ್ಧಾಂತವನ್ನು ಮಂಡಿಸಿದ. ಆ ಕಾಲದಲ್ಲಿ ಪ್ರಚಲಿತವಿದ್ದ ಮಾನವನ ಇತಿಹಾಸದ ಬಗೆಗಿರುವ ಕೆಲವು ವಿಜ್ಞಾನಪೂರ್ವ ಕಲ್ಪನೆಗಳಿಗೆ - ಜೋನ್ಸ್ ತನ್ನ "Discourse" ಗಳಲ್ಲಿ ಅನೇಕ ವೇಳೆ ಬಲಿಬಿದ್ದಂತೆ–ಪೇರ್ ಕೋರ್ಡು ಬಲಿ ಬಿದ್ದದ್ದು ಅವನು ಬೈಬಲ್ ಧರ್ಮಗ್ರಂಥವನ್ನು ಈ ರೀತಿಯಲ್ಲಿ ವ್ಯಾಖ್ಯಾನಿಸಿರುವುದಕ್ಕೆ ಒಂದು ಕಾರಣ. ಆದರೂ ಅವನ ಮೂಲಭೂತ ಒಳನೋಟ ಜೋನ್ಸನ ತಿಳಿವಳಿಕೆಯಷ್ಟೆ ಕ್ರಾಂತಿಕಾರಿಯಾಗಿತ್ತು ಎಂಬುದು ನಿಜ : ಇವು "ಭಗಿನಿ" ಭಾಷೆಗಳು ; ಯಾವುದೋ ಒಂದು ಸಾಮಾನ್ಯ ಪ್ರಾಕ್ ಮೂಲದಿಂದ ಏಕಕಾಲದಲ್ಲಿ ಪಕ್ಕ ಪಕ್ಕದಲ್ಲಿಯೇ–ಒಂದರಿಂದ ಇನ್ನೊಂದು, ಅದರಿಂದ ಮತ್ತೊಂದು ಹುಟ್ಟಿಬಂದದ್ದಲ್ಲ—ಬೆಳೆದುಬಂದವು.

ಜೋನ್ಸನ ಅಭಿಪ್ರಾಯ ಪ್ರಕಟವಾಗುವ ಇಪ್ಪತ್ತು ವರ್ಷಗಳ ಮೊದಲು ವ್ಯಕ್ತವಾದ ಮತ್ತು ಭಾಷಾಶಾಸ್ತ್ರದ ದೃಷ್ಟಿಯಲ್ಲಿ ಜೋನ್ಸನಿಗಿಂತ ಹೆಚ್ಚು ಖಚಿತವಾದ ಸಾಕ್ಷ್ಯ, ಪುರಾವೆಗಳನ್ನು ಒದಗಿಸಿದ ಈ ಅಭಿಪ್ರಾಯಕ್ಕೆ ಜೋನ್ಸನ ಹೇಳಿಕೆಗೆ ದೊರೆತಷ್ಟು ಸಾರ್ವಜನಿಕ ಮನ್ನಣೆ ಏಕೆ ಸಿಗಲಿಲ್ಲ ? ಲಭ್ಯ ದಾಖಲೆಗಳಿಂದ ಈ ವೃತ್ತಾಂತವನ್ನು ಹೀಗೆ ಪುನರ್ರಚಿಸಬಹುದು[9] :

ತಾನು ಆಗ ಕೈಗೊಂಡಿದ್ದ ಇತರ ಧಾರ್ಮಿಕ ಯೋಜನೆಗಳಲ್ಲಿ ವಿಶೇಷವಾಗಿ ಮಗ್ನನಾದ ಅಬ್ಬೆ ಬಾರ್ತೆಲೆಮಿ, ಕೋರ್ಡು ಪತ್ರಗಳನ್ನು ಅಂಕೆತಿ ದ್ಯುಪೆರೋಂ ಎಂಬವನ ವಶಕ್ಕೆ ಒಪ್ಪಿಸಿದ. ಇವನೂ ಅಕಾಡೆಮಿಯ ಸದಸ್ಯ. ಇಂಗ್ಲೆಂಡಿನಲ್ಲಿ ವಿಲಿಯಂ ಜೋನ್ಸ್ ಇದ್ದಂತೆ ಫ್ರಾನ್ಸಿನಲ್ಲಿ ದ್ಯುಪೆರೋಂ ಖ್ಯಾತನಾಗಿದ್ದ: ಮಾತ್ರವಲ್ಲ, ಜೋನ್ಸನ ತೀವ್ರ ಪ್ರತಿಸ್ಪರ್ಧಿಯೂ ಆಗಿದ್ದ. ಪೌರಸ್ತ್ಯ ವಿಷಯಗಳ

---

[8] ಅಲ್ಲಿಯೇ. p. 664

[9] "ಮೆಮುಆರ್ಸ್" ಗಳ ಪ್ರಕಟನೆಯ ಚರಿತ್ರೆಯನ್ನು "ಲೆ ತ್ರವೊ ದೆ ಲಾ' ಕೆದೆಮಿ ದೆ ಇನ್‌ಸ್ಕ್ರಿಪ್ಸಿಯೊಂ ಎ ಬೆಲ್ ಲೆತ್ರ್" (Paris. 1947) – ಇದರಲ್ಲಿ ನೋಡಬಹುದು : ದ್ಯುಪೆರೊನನ ಚಟುವಟಿಕೆಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು "ಬಯಾಗ್ರಫೀ ಯುನಿವರ್ಸೆಲ್" ಮತ್ತು ಕ್ಯಾನನ *Oriental Jones*- ಇವುಗಳಿಂದ ಸಂಗ್ರಹಿಸಲಾಗಿದೆ : ಕೋರ್ಡು ಮತ್ತು ಜೆಜ್ವಿಟರಿಗೆ ಸಂಬಂಧಪಟ್ಟ ವಿಷಯಗಳನ್ನು D. Ferroli, S.J., *The Jesuits in Malabar*, Vol. II (Bangalore, India, 1951), ಮತ್ತು Ludwig Koch. S. J., "ಜೆಜ್ವಿಟೆನ್ ಲೆಕ್ಸಿಕೊನ್" (Paderborn. Germany. 1934)–ಇವುಗಳಲ್ಲಿ ನೋಡಬಹುದು. "ಮೆಮುಆರ್ಸ್" ಗಳಲ್ಲಿದ್ದ ಪತ್ರಗಳ ನಡುವೆ ದ್ಯುಪೆರೊನನ ಸಂಪಾದಕೀಯ ಟಿಪ್ಪಣಿಗಳಿಂದ ಕೋರ್ಡು - ದ್ಯುಪೆರೊನ್ ಪತ್ರ ವ್ಯವಹಾರದ ತಾರೀಕುಗಳು ಮತ್ತು ಸಂದರ್ಭಗಳು ಗೊತ್ತಾಗುತ್ತವೆ.

ಅಧ್ಯಯನದಲ್ಲಿ ಮೊದಲಿಗನಾದ ಇವನು ಹಲವು ಪರ್ಷಿಯನ್ ಹಸ್ತ ಪ್ರತಿಗಳನ್ನು ಸಂಗ್ರಹಿಸಿ, ಸಂಪಾದಿಸಿ, ಭಾಷಾಂತರಿಸಿ ಶಾಶ್ವತವಾದ ಕೆಲಸ ಮಾಡಿದ್ದ. ಅತಿ ಅಹಂಭಾವವುಳ್ಳವನೆಂಬ ಅಪಖ್ಯಾತಿಗೂ ಪಾತ್ರನಾಗಿದ್ದ.[10] ಬಿಬ್ಲಿಯೊತೆಕ್ ರೊಯಾಲ್‌ನಲ್ಲಿ ತನ್ನದೇ ಆದ ಹಸ್ತಪ್ರತಿಗಳ ಕೆಲಸದಲ್ಲಿ ಎಡೆಬಿಡದೆ ಮಗ್ನನಾದ ಇವನು ಕೋರ್ಡುಗೆ ಬರೆದ ಪತ್ರಗಳಲ್ಲಿ ತನ್ನ ಅಧ್ಯಯನಕ್ಕೆ ಬೇಕಾದ ವಿಷಯಗಳನ್ನಷ್ಟೆ ಕೇಳಿದ. ಮೇಲೆ ಹೇಳಿದ 1767ರ ಪತ್ರ ಹಾಗೂ ಟಿಪ್ಪಣಿಗೆ ಉತ್ತರವಾಗಿ ದ್ಯುಪೆರೊ ಕೋರ್ಡುವಿಗೆ ಕಳಿಸಿದ್ದ ಮುಖ್ಯ ಜವಾಬು ಎಂದರೆ ತನಗೆ ಬೇಕಾದ ಪುಸ್ತಕಗಳ ಹಾಗೂ ಮಾಹಿತಿಯ ಒಂದು ಪಟ್ಟಿ! ಕೋರ್ಡುವಿನ ತೀರ್ಮಾನಗಳ ಬಗೆಗೆ ತನ್ನ ಒಪ್ಪಿಗೆಯನ್ನು ಸೂಚಿಸುವ ಕೆಲವು ಮಾತುಗಳನ್ನು ಮಹಾ ಅನುಗ್ರಹವೆಂಬ ಧಾಟಿಯಲ್ಲಿ ಸಾಂದರ್ಭಿಕವಾಗಿ ಸೇರಿಸಿದನಷ್ಟೆ. ದ್ಯೂಪರೊನನ ಮಾತಿನ ವಿಷಯ ಹಾಗೂ ಧಾಟಿಯನ್ನು ಅವನ ಪತ್ರದ ಈ ಭಾಗ ತಿಳಿಸುತ್ತದೆ:

"ಅದರ (ಕೋರ್ಡುವಿನ ಟಿಪ್ಪಣಿ) ವಿಷಯ ನನ್ನ ಅಭಿಪ್ರಾಯವೆಲ್ಲ ಏನೆಂದು ಈಗ ನಿಮಗೆ ಹೇಳಲು ನನಗೆ ಬಿಡುವಿಲ್ಲ. ಎಂದಾದರೂ ಒಂದು ದಿನ ನನ್ನ ಅಭಿಪ್ರಾಯಗಳನ್ನು ನಿಮಗೆ ತಿಳಿಸುತ್ತೇನೆ. ನಿಮ್ಮವು (ಅಭಿಪ್ರಾಯಗಳು) ಸೂಕ್ಷ್ಮವಾದವು, ಅನೇಕ ಅಂಶಗಳಲ್ಲಿ ಸರಿಯಾದವು ಮತ್ತು ಸೂಕ್ತ ನಿದರ್ಶನಗಳ ಆಧಾರವನ್ನು ಪಡೆದವು ಎಂದಷ್ಟೆ, ನನ್ನ ಪೂಜ್ಯ ಸ್ವಾಮೀ, ನಿಮಗೆ ಹೇಳುತ್ತೇನೆ. ಸ್ಥೂಲವಾಗಿ, ಕೆಲವು ಸಾದೃಶ್ಯಗಳು ಇದ್ದ ಮಾತ್ರಕ್ಕೆ ಅವು (ಪದಗಳು) ಎರವಲಾಗಿ ಬಂದವು ಎಂದು ಸ್ಥಾಪಿಸಲಾಗದೆಂದೂ ದೂರದೂರವಿರುವ ದೇಶಗಳಲ್ಲಿ ಜನರು ಮಾತನಾಡುವ ಭಾಷೆಗಳಲ್ಲಿದ್ದ ಏಕರೂಪದ ಪದಗಳು ಆ ಭಾಷೆಗಳಿಗೆ ಪೂರ್ವಜ ಭಾಷೆಯಾಗಿದ್ದ ಒಂದು ಪ್ರಥಮ ಭಾಷೆಯಿಂದ ಬಂದಿರುವುದು ಸಾಧ್ಯವೆಂದೂ ನೀವು ನಂಬಿದ ಹಾಗೆ ನಾನೂ ನಂಬುತ್ತೇನೆ."[11]

ಪೇರ್ ಕೋರ್ಡುವಿನ ಟಿಪ್ಪಣಿಯನ್ನು, ಅದಕ್ಕೆ ಉತ್ತರವಾಗಿ ದ್ಯುಪೆರೊಂ ಬರೆದ ಪತ್ರವನ್ನು ಮತ್ತು ಇದಕ್ಕೆ ಉತ್ತರವಾಗಿ 1771ರಲ್ಲಿ ಪೇರ್ ಕೋರ್ಡು ಬರೆದ ಪತ್ರವನ್ನು ಅಕಾಡೆಮಿಯ ಸದಸ್ಯರಿಗೆ ದ್ಯುಪೆರೊಂ ಓದಿ ಹೇಳಿದ. ಈ ವಿಷಯವನ್ನು ಪೇರ್ ಕೋರ್ಡುವಿಗೆ ಪ್ರಾಸಂಗಿಕವಾಗಿ ಇನ್ನೊಂದು ಪತ್ರದಲ್ಲಿ ತಿಳಿಸಿದ ದ್ಯುಪೆರೊನನ ಮಾತುಗಳನ್ನು ಗಮನಿಸಬಹುದು. "ಈ ವಿಷಯಗಳ ಯೋಗ್ಯತೆಗೆ ಸರಿಯಾದ ಸ್ವಾಗತವು (ಅಕಾಡೆಮಿಯಿಂದ) ಅವುಗಳಿಗೆ ಲಭಿಸಿದೆ"![12] ಈ ವ್ಯಂಗ್ಯ ಟೀಕೆಯೊಡನೆ ವೃದ್ಧ ಮಿಶನರಿ ಕೋರ್ಡುವಿನ ಸಂಶೋಧನೆಯನ್ನು ಇಪ್ಪತ್ತಕ್ಕಿಂತಲೂ ಹೆಚ್ಚು ವರ್ಷ ಕಾಲ ಅಜ್ಞಾತವಾಗಿ, ವಿಸ್ಮೃತವಾಗಿ ಅಕಾಡೆಮಿಯ ಫೈಲುಗಳಲ್ಲಿ ಸಮಾಧಿಗೊಳಿಸಿದಂತಾಯಿತು. ಅಂತಹ ವಿಷಯಗಳಲ್ಲಿ ಅಕಾಡೆಮಿಯ ತಜ್ಞನೆನಿಸಿದ ದ್ಯುಪೆರೊನನೇ ಅದರಲ್ಲಿ ಏನೇನೂ ಮಹತ್ವವನ್ನು ಕಾಣಲಿಲ್ಲವೆಂದಮೇಲೆ ಅಕಾಡೆಮಿಯ ಇತರ ಸದಸ್ಯರು ಆ ವಿಷಯವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಕೊನೆಗೊಳಿಸಬಹುದಿತ್ತು ಎಂದು ನಿರೀಕ್ಷಿಸುವುದು ಅಸಾಧ್ಯ. ಈ ಪತ್ರವ್ಯವಹಾರ 1784-93ರ "ಮೆಮುಅರ್ಸ್" ಸಂಪುಟದಲ್ಲಿ ಸೇರಿಕೊಂಡಿತ್ತು. ಅಲ್ಲಿಯ ವರೆಗೆ ಅದು ಪ್ರಕಟಣೆಗೆ ಯೋಗ್ಯವೆಂದು ಭಾವಿಸಿದಂತೆ ತೋರುವುದಿಲ್ಲ. ಅದರಲ್ಲೂ ಕ್ರಾಂತಿಯ ಕಾರಣವಾಗಿ 1808ರ ವರೆಗೆ ಈ ಸಂಪುಟ ಅಚ್ಚಾಗಲಿಲ್ಲ. ಪೇರ್ ಕೋರ್ಡುವಿನ ಮೊದಲ ಕೆಲವು ಪತ್ರಗಳನ್ನು ಖಾಸಗಿ ಸಂಚಾಲನೆಗೋಸ್ಕರ

---

10 ಕ್ಯಾನನ Oriental Jones, pp. 25-27–ಇಲ್ಲಿ ಜೋನ್ಸ್ (ಅನ್ಯಾಯವಾಗಿ) ದ್ಯುಪೆರೊನನನ್ನು ಟೀಕಿಸಿದ ಪ್ರಸಂಗ ಇದೆ. ಪರ್ಷಿಯನ್ "ಜೆಂಡ್-ಅವೆಸ್ತಾ"ದ ಒಂದು ಭಾಷಾಂತರದ ಮುನ್ನುಡಿಯಲ್ಲಿ ದ್ಯುಪೆರೊನ್ ತನ್ನ ಪ್ರತಿಭೆಯನ್ನೂ ಸ್ಫುರದ್ರೂಪವನ್ನೂ ತಾನೇ ಹೊಗಳಿದ್ದನೆಂದು ಹೇಳಲಾಗಿದೆ.

11 "ಮೆಮುಅರ್ಸ್", p. 671

12 ಅಲ್ಲಿಯೇ, p. 689

ಪ್ರಕಟಿಸಿದ ಜೆಜ್ವಿಟರು, ಬಹುಶಃ ಈ ಪತ್ರವ್ಯವಹಾರವನ್ನು ಅದೇ ಉದ್ದೇಶದಿಂದ ಖಂಡಿತವಾಗಿ ಪ್ರಕಟಿಸುತ್ತಿದ್ದರು ಆದರೆ 1762ರಿಂದ ಜೆಜ್ವಿಟ್‌ಸಂಸ್ಥೆಯನ್ನು ಫ್ರಾನ್ಸಿನಲ್ಲಿ ರದ್ದುಮಾಡಿದ್ದರು.

ಮೊದಲೇ ವಯಸ್ಸಾಗಿದ್ದ ಪೇರ್ ಕೋರ್ಡುರ್, 1773ರಲ್ಲಿ ಜೆಜ್ವಿಟ್ ಸಂಸ್ಥೆಯನ್ನು ಸಂಪೂರ್ಣವಾಗಿ ವಿಸರ್ಜಿಸಿದುದನ್ನು ತಿಳಿದು ಅತಿಯಾಗಿ ನೊಂದ. ಆಮೇಲೆ ಅವನಿಂದ ಯಾವ ಪತ್ರಗಳೂ ಬರಲಿಲ್ಲ. 1779ರಲ್ಲಿ ತನ್ನ ಎಂಬತ್ತೆಂಟನೆಯ ವಯಸ್ಸಿನಲ್ಲಿ ಪಾಂಡಿಚೆರಿಯಲ್ಲಿ ಇವನು ಕಾಲವಾದ. ಮ್ಯಾಕ್ಸ್ ಮುಲ್ಲರ್ ಹೇಳಿದಂತೆ ರೊಬೆರ್ಟೊ ದೆ ನೊಬಿಲಿ ಎಂಬ ಜೆಜ್ವಿಟ್ ಪಾದ್ರಿ "ಪ್ರಥಮ ಯೂರೋಪಿಯನ್ ಸಂಸ್ಕೃತ ವಿದ್ವಾಂಸ"ನಾಗಿದ್ದ. ದೆ ನೊಬಿಲಿಯ ಹೆಜ್ಜೆಗಳಲ್ಲಿ ಮುಂದುವರಿದ ಪೇರ್ ಕೋರ್ಡುರ್ ತನ್ನ ಭಾಷಾ ಶಾಸ್ತ್ರೀಯ ಮತ್ತಿತರ ಸಂಶೋಧನೆಗಳನ್ನು ಆ ಕೆಲಸಗಳಿಗಿಂತಲೂ ಹೆಚ್ಚು ಮುಖ್ಯವೆಂದು ತಾನು ಭಾವಿಸಿದ ಒಂದು ಉದ್ದೇಶಕ್ಕಾಗಿ ನಡೆಸಿದ್ದ. ಆದುದರಿಂದಲೇ ಇಷ್ಟು ಮುಖ್ಯವಾದ ಒಂದು ಒಳನೋಟವನ್ನು ಅದರ ಪರಿಸಮಾಪ್ತಿಗೆ ಒಯ್ಯಬೇಕೆಂದು ಯೋಚಿಸುವಷ್ಟು ವ್ಯವಧಾನವೇ ಅವನಿಗಿರಲಿಲ್ಲ.*

---

*Journal of the American Oriental Society, 87,1 (Jan–March 1967), pp. 57-59–ಇದರಲ್ಲಿ ಇಂಗ್ಲಿಷಿನಲ್ಲಿ ಮೊದಲ ಬಾರಿ ಪ್ರಕಟವಾದ್ದು.

ಎನ್. ಎ. ಹನುಮಂತರಾವ್

ಶೈಕ್ಷಣಿಕ ಅಭಿರುಚಿ ಮತ್ತು ಗಳಿಕೆ

ಪೀಠಿಕೆ

ಮನೋವಿಜ್ಞಾನ ವಿಶ್ಲೇಷಿಸುವ ಅನೇಕ ಸಮಸ್ಯೆಗಳಲ್ಲಿ ಅಭಿರುಚಿಯೂ ಒಂದು. ಅಭಿರುಚಿ ಆನುವಂಶಿಕವಾಗಿ ಬರುವ ಪ್ರವೃತ್ತಿಯಲ್ಲ. ಇದನ್ನು ಸಮಾಜ ಹಾಗೂ ಸಂಸ್ಕೃತಿಯ ಸಹಾಯದಿಂದ ಬೆಳೆಸಿಕೊಳ್ಳಬೇಕು. ಅಂದ ಮೇಲೆ ಯಾವುದೇ ಅಭಿರುಚಿಯನ್ನು ಬೆಳಸಿಕೊಳ್ಳುವುದಕ್ಕೆ ಸಮಾಜ ಮತ್ತು ಸಂಸ್ಕೃತಿ ವಸ್ತುವನ್ನು ಒದಗಿಸುತ್ತವೆ ಎಂದೂ ಅಭಿಪ್ರಾಯವಾಗುತ್ತದೆ. ಸಮಾಜ ಮತ್ತು ಸಂಸ್ಕೃತಿ ಬದಲಾದಂತೆಲ್ಲಾ ಅಭಿರುಚಿಗಳೂ ಬದಲಾಗುತ್ತಾ ಹೋಗುತ್ತವೆ. ಅಭಿರುಚಿಯನ್ನು ಒಂದು ಮೌಲ್ಯವಾಗಿ ಪರಿಗಣಿಸಿದ ಪಂಡಿತರೂ ಇದ್ದಾರೆ. ಅವರಲ್ಲಿ ಸ್ಪ್ರ್ಯಾಂಗರ್ ಅಭಿರುಚಿಯನ್ನು ಒಂದು ಮೌಲ್ಯವಾಗಿ ಪರಿಗಣಿಸಿ ಅದನ್ನು ವರ್ಗಗಳಾಗಿ ವಿಂಗಡಿಸಿದ್ದಾನೆ. ಆದರೆ ಒಂದು ಮಾತು ಮಾತ್ರ ಸತ್ಯ. ಅಭಿರುಚಿ ಮಾನವನ ಚೋದನೆ ಒಂದು ನಿರ್ದಿಷ್ಟವಾದ ದಿಕ್ಕಿನಲ್ಲಿ ಹೋಗುವಂತೆ ಪ್ರೇರೇಪಿಸುತ್ತದೆ. ಅಂದ ಮೇಲೆ ಅದು ಮಾನವನ ಶಕ್ತಿ (ಮಾನಸಿಕ ಅಥವಾ ದೈಹಿಕ) ನಷ್ಟವಾಗದಂತೆ ನೋಡಿಕೊಳ್ಳುತ್ತದೆ. ಅಭಿರುಚಿ ಇಲ್ಲದ ಮಾನವನೇ ಇಲ್ಲ. ಮಾನವ ಒಂದಲ್ಲ ಒಂದು ಅಭಿರುಚಿಯನ್ನು ಬೆಳಸಿಕೊಂಡು ಅದನ್ನು ಸಂಪೂರ್ಣವಾಗಿ ತನ್ನ ಪ್ರಭುತ್ವದಲ್ಲಿ ಇಟ್ಟುಕೊಳ್ಳಲು ಸತತವಾಗಿ ಪ್ರಯತ್ನಮಾಡುತ್ತಾನೆ. ಕಲೆಯಲ್ಲಿ ಅಭಿರುಚಿ ಉಳ್ಳವರು ಆ ಕ್ಷೇತ್ರದಲ್ಲಿ ಎಷ್ಟು ಪ್ರಭುತ್ವವನ್ನು ಸಾಧಿಸಲು ಸಾಧ್ಯವೊ ಅಷ್ಟನ್ನೂ ಸಾಧಿಸಲು ಪ್ರಯತ್ನಿಸುತ್ತಾರೆ. ಅಭಿರುಚಿಯೇ ಒಂದಲ್ಲ ಒಂದು ಕ್ಷೇತ್ರದಲ್ಲಿ ಪ್ರಭುತ್ವ ಪಡೆಯಲು ಮಾನವನನ್ನು ಪ್ರೇರೇಪಿಸುವುದು ಮತ್ತು ಆ ಕ್ಷೇತ್ರದಲ್ಲಿ ಪರಿಪೂರ್ಣತೆಯನ್ನು ಪಡೆಯಲು ವ್ಯಕ್ತಿ ಸತತವಾಗಿ ಪ್ರಯತ್ನ ಮಾಡುವಂತೆ ಸಹಾಯ ಮಾಡುವುದು. ಅಭಿರುಚಿಯನ್ನು ಬೆಳಸಿಕೊಳ್ಳುವುದಕ್ಕೆ ಬುದ್ಧಿಮತ್ತೆ ಮತ್ತು ಅದರ ಕಡೆಗೆ ಒಲವು ಅತ್ಯಾವಶ್ಯಕ. ಇವೆರಡರ ಬಲವಿಲ್ಲದಿದ್ದರೆ ಅಭಿರುಚಿಯನ್ನು ಬೆಳಸಿಕೊಳ್ಳಲು ಶಕ್ಯವಿಲ್ಲ. ಮಂದಬುದ್ಧಿ ಉಳ್ಳವರಲ್ಲಿ ಯಾವ ಅಭಿರುಚಿಯೂ ಇಲ್ಲದಿರುವುದು ಸುವ್ಯಕ್ತ.

ಅಭಿರುಚಿಯನ್ನು ಬಾಲ್ಯದಿಂದಲೇ ಶಾಲಾಕಾಲೇಜುಗಳ ಸಂಪರ್ಕಗಳಿಂದ, ಗ್ರಂಥಗಳನ್ನು ಅಧ್ಯಯನ ಮಾಡುವುದರಿಂದ, ಪತ್ರಿಕೆಗಳನ್ನು ಓದುವುದರಿಂದ ಮತ್ತು ಚಲನಚಿತ್ರಗಳನ್ನು ನೋಡುವುದರಿಂದ ಬೆಳಸಿಕೊಳ್ಳಬೇಕು. ವ್ಯಕ್ತಿ ಸತತವಾಗಿ ಪ್ರಯತ್ನಮಾಡಿ ಅಭಿರುಚಿಯನ್ನು ಹದ ಮಾಡಬೇಕಾಗುತ್ತದೆ. ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯುವಾಗ ವಿವಿಧ ಅಂಚೆ ಚೀಟಿಗಳನ್ನೂ ವಿವಿಧ ನಾಣ್ಯಗಳನ್ನೂ ವಿವಿಧ ಆಕಾರಗಳುಳ್ಳ ಶಂಖಗಳನ್ನೂ ವಿವಿಧ ಮುಖಗಳುಳ್ಳ ಶಿಲೆಗಳನ್ನೂ ಸಂಗ್ರಹಿಸುವುದನ್ನು ನಾವು ಕಾಣುತ್ತೇವೆ. ಈ ಪ್ರವೃತ್ತಿ ಅಭಿರುಚಿಯಲ್ಲದೆ ಮತ್ತೇನು? ಅಭಿರುಚಿಗಳ ಸ್ವರೂಪವನ್ನು ಪ್ರಾಯೋಗಿಕವಾಗಿ ಸ್ಟ್ರ್ಯಾಂಗರ್ ಮತ್ತು ಕೂಡರ್ ಪಂಡಿತರು ಸಮರ್ಥನೆ ಮಾಡಿದ್ದಾರೆ. ಸ್ಟ್ರ್ಯಾಂಗರ್ ಎಂಬ ಶ್ರೇಷ್ಠ ಮನೋವಿಜ್ಞಾನಿ ಸ್ತ್ರೀ ಮತ್ತು ಪುರುಷರ ಅಭಿರುಚಿಯನ್ನು ಕಂಡುಹಿಡಿಯಲು ಪ್ರತ್ಯೇಕ ಪ್ರಶ್ನಾವಳಿಗಳನ್ನು ತಯಾರುಮಾಡಿ ಅವರಲ್ಲಿ ಅಭಿರುಚಿಗಳ ಬಗ್ಗೆ ಇರುವ ವ್ಯತ್ಯಾಸವನ್ನು ಕಂಡುಹಿಡಿದಿರುವುದಲ್ಲದೆ, ತನ್ನ ಅಧ್ಯಯನದಿಂದ ಬಂದ ಸಮಗ್ರ ಫಲಿತಾಂಶವನ್ನು ಪ್ರಕಟ

ಮಾಡಿದ್ದಾನೆ. ಅವನು ಅಧ್ಯಯನ ಮಾಡಿರುವ ಅಭಿರುಚಿಗಳಲ್ಲಿ ಶಾಲೆಗಳಲ್ಲಿ ಕಲಿಸುವ ವಿಷಯಗಳ ಬಗ್ಗೆ ವಿದ್ಯಾರ್ಥಿಗಳು ತಾರತಮ್ಯವಾಗಿ ಪ್ರತಿಯೊಂದು ವಿಷಯದ ಬಗ್ಗೆಯೂ ತಮ್ಮ ಅಭಿರುಚಿಯನ್ನು ವ್ಯಕ್ತಮಾಡುವುದೂ ಒಂದು. ಪ್ರಸ್ತುತ ಅಧ್ಯಯನದಲ್ಲಿ ಶಾಲಾ ವಿದ್ಯಾರ್ಥಿಗಳು ತಾವು ವ್ಯಕ್ತಮಾಡುವ ಶೈಕ್ಷಣಿಕ ಅಭಿರುಚಿಗೂ ಶೈಕ್ಷಣಿಕ ಗಳಿಕೆಗೂ ಏನಾದರೂ ಸಂಬಂಧವಿದೆಯೇ ಎಂಬುದನ್ನು ಪ್ರಾಯೋಗಿಕವಾಗಿ ಸಮರ್ಥನೆಮಾಡಲು ಪ್ರಯತ್ನಿಸಲಾಗಿದೆ. ಈ ಸಂಶೋಧನೆಯನ್ನು ಒಂದು ಊಹೆಯಿಂದ ಪ್ರಾರಂಭಿಸಲಾಗಿದೆ. ಅದು ಯಾವುದೆಂದರೆ ಯಾವುದೊಂದು ವಿದ್ಯಾರ್ಥಿಗೆ ಯಾವುದೇ ವಿಷಯದಲ್ಲಿ ವಿಶೇಷ ಅಭಿರುಚಿ ಇರುತ್ತದೆಯೋ, ಆ ವಿದ್ಯಾರ್ಥಿ ಆ ವಿಷಯದಲ್ಲಿ ಇತರ ವಿಷಯಗಳಿಗಿಂತಲೂ ಪರೀಕ್ಷೆಯಲ್ಲಿ ಹೆಚ್ಚು ಅಂಕವನ್ನು ಗಳಿಸುತ್ತಾನೆ ಎಂಬುದು. ಅಂದರೆ ವಿದ್ಯಾರ್ಥಿ ವ್ಯಕ್ತಮಾಡುವ ಶೈಕ್ಷಣಿಕ ಅಭಿರುಚಿ ಮತ್ತು ಗಳಿಕೆಗೆ ನಿಕಟವಾದ ಸಂಬಂಧ ಇರಬೇಕೆಂಬ ಊಹೆಯಿಂದ ಈ ಸಂಶೋಧನೆಯನ್ನು ತೆಗೆದುಕೊಳ್ಳಲಾಗಿದೆ. ಇದು ತಾತ್ತ್ವಿಕವಾಗಿ ಸತ್ಯವಿದ್ದರೂ ಪ್ರಾಯೋಗಿಕವಾಗಿ ಈ ಸತ್ಯದ ಸಮರ್ಥನೆಯಾಗಬೇಕು. ಒಂದು ಕ್ಷೇತ್ರದಲ್ಲಿಯ ಅಭಿರುಚಿಯು ವ್ಯಕ್ತಿಗೆ ಆ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿಕೊಳ್ಳುವುದಕ್ಕೆ ಅನುವು ಮಾಡಿಕೊಡುತ್ತದೆ. ಈ ತಾತ್ವಿಕ ವಿಚಾರವನ್ನು ಪ್ರಾಯೋಗಿಕವಾಗಿ ಸಮರ್ಥನೆ ಮಾಡಬೇಕಾಗಿದೆ. ಇದರ ಸಮರ್ಥನೆಯನ್ನು ಶೈಕ್ಷಣಿಕ ಕ್ಷೇತ್ರದಿಂದ, ಅದರಲ್ಲೂ ವಿದ್ಯಾರ್ಥಿಗಳು ಶಾಲಾ ವಿಷಯಗಳಲ್ಲಿ ತೋರುವ ಅಭಿರುಚಿ ಮತ್ತು ಆಯಾ ವಿಷಯಗಳಲ್ಲಿ ಗಳಿಕೆಯನ್ನು ತುಲನಾತ್ಮಕ ದೃಷ್ಟಿಯಿಂದ ಸಮರ್ಥನೆ ಮಾಡಲು ಈ ಸಂಶೋಧನೆಯಲ್ಲಿ ಪ್ರಯತ್ನಿಸಲಾಗಿದೆ. ಶೈಕ್ಷಣಿಕ ಅಭಿರುಚಿ ಮತ್ತು ಶೈಕ್ಷಣಿಕಗಳಿಕೆಗೆ ಇರುವ ಸಂಬಂಧವನ್ನು ಕಂಡುಹಿಡಿಯುವುದೇ ಈ ಸಂಶೋಧನೆಯ ಗುರಿ.

ಈ ಸಂಶೋಧನೆಯಲ್ಲಿ ಬಳಸಿಕೊಂಡಿರುವ ಕ್ರಮ

ಅನುಕ್ರಮ ಸ್ಥಾನವಿಧಾನವನ್ನು ಈ ಸಂಶೋಧನೆಯಲ್ಲಿ ಬಳಸಿಕೊಳ್ಳಲಾಗಿದೆ. ಈ ವಿಧಾನದ ಪ್ರಕಾರ ತನ್ನ ಶಾಲೆಯಲ್ಲಿ ಕಲಿಸುವ ಹಾಗೂ ತಾನು ಆಯ್ದುಕೊಂಡ ವಿಷಯಗಳನ್ನು ವಿದ್ಯಾರ್ಥಿ ತನ್ನ ಅಭಿರುಚಿಗೆ ಅನುಗುಣವಾಗಿ ವರ್ಗೀಕರಣ ಮಾಡಬೇಕು.

ಪ್ರಾಥಮಿಕ ಶಾಲೆಯ ಒಂಬತ್ತನೆಯ ತರಗತಿಗೆ ಕಲಿಸುವ ವಿಷಯಗಳ ಪಟ್ಟಿಯೊಂದನ್ನು ತಯಾರು ಮಾಡಲಾಯಿತು. ಆ ವಿಷಯಗಳನ್ನೊಳಗೊಂಡ ಒಂದು ಪ್ರಶ್ನಾವಳಿಯನ್ನು ತಯಾರು ಮಾಡಲಾಯಿತು. ವಿದ್ಯಾರ್ಥಿಗಳು ತಮ್ಮ ಅಭಿರುಚಿಯನ್ನು ವ್ಯಕ್ತ ಮಾಡುವುದಕ್ಕೆ ಮುನ್ನ ಪ್ರಶ್ನಾವಳಿಯಲ್ಲಿ ಕೊಟ್ಟಿರುವ ನಿರ್ದೇಶನವನ್ನು ಓದಲು ಹೇಳಲಾಯಿತು. ಕೊಟ್ಟಿರುವ ವಿಷಯಗಳ ಪಟ್ಟಿಯಲ್ಲಿ (ತಾವು ಅಧ್ಯಯನ ಮಾಡಲು ಆಯ್ದುಕೊಂಡ) ತಮಗೆ ಅತ್ಯಂತ ಅಭಿರುಚಿಯುಳ್ಳ ವಿಷಯಕ್ಕೆ ಪ್ರಥಮ ಸ್ಥಾನವನ್ನು, ಅದಕ್ಕೂ ಕಡಮೆ ಅಭಿರುಚಿಯುಳ್ಳ ವಿಷಯಕ್ಕೆ ಎರಡನೆಯ ಸ್ಥಾನವನ್ನು, ಅದಕ್ಕೂ ಕಡಿಮೆ ಅಭಿರುಚಿಯುಳ್ಳ ವಿಷಯಕ್ಕೆ ಮೂರನೆಯ ಸ್ಥಾನವನ್ನು—ಹೀಗೆ ಕೊಟ್ಟಿರುವ ವಿಷಯಗಳಿಗೆ ಒಂಬತ್ತು ಸ್ಥಾನಗಳನ್ನು ಕೊಡಬೇಕು. ಯಾವ ವಿಷಯಕ್ಕೂ ಸ್ಥಾನವನ್ನು ಕೊಡದೆ ಹಾಗೇ ಬಿಡಬಾರದು. ತನ್ನ ಅಭಿರುಚಿಯನ್ನು ವ್ಯಕ್ತ ಮಾಡುವಾಗ ಮತ್ತೊಬ್ಬ ವಿಧ್ಯಾರ್ಥಿಯ ಸಲಹೆಯನ್ನು ಕೇಳಬಾರದು. ಮತ್ತೊಬ್ಬ ವಿದ್ಯಾರ್ಥಿ ಬರೆದುದನ್ನು ನೋಡಿಕೊಂಡು ಯಾರೂ ಬರೆಯಬಾರದು, ಎಂಬುದಾಗಿ ಹೇಳಲಾಯಿತು. ಈ ಪ್ರಶ್ನೆಯನ್ನು ಉತ್ತರಿಸುವುದರ ಜೊತೆಗೆ ಹೆಸರು, ಓದುತ್ತಿರುವ ತರಗತಿ, ಆಯ್ದುಕೊಂಡ ಐಚ್ಛಿಕ ವಿಷಯಗಳು, ಪೋಷಕರ ಹೆಸರು ಉದ್ಯೋಗ ವಾರ್ಷಿಕ ಆದಾಯ ಮತ್ತು ಜಗಿತಿಗಳ ಬಗ್ಗೆ ಮಾಹಿತಿಯನ್ನು ಬರೆಯಬೇಕಾಗಿ ಹೇಳಲಾಯಿತು. ಇನ್ನು ವಿದ್ಯಾರ್ಥಿಯ ಶೈಕ್ಷಣಿಕ ಗಳಿಕೆಯನ್ನು ಇತ್ಯರ್ಥ ಮಾಡುವ ಬಗೆಯಾದರೂ ಹೇಗೆ ? ಇದು ದೊಡ್ಡ ಸಮಸ್ಯೆ. ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆ

ಯಲ್ಲಿ ಪ್ರತಿಯೊಂದು ವಿಷಯದಲ್ಲಿ ಪಡೆದ ಅಂಕವನ್ನು ಶೈಕ್ಷಣಿಕ ಗಳಿಕೆ ಎಂದು ಪರಿಗಣಿಸಲಾಗಿದೆ. ಆಧುನಿಕ ಪರೀಕ್ಷೆಯ ದೋಷ ಮತ್ತು ಉತ್ತರಪತ್ರಿಕೆಗಳನ್ನು ಪರೀಕ್ಷಿಸುವಾಗ ಮನುಷ್ಯ ಸ್ವಭಾವ ದೋಷಗಳು ಸಂಶೋಧಕನಿಗೆ ತಿಳಿದಿದ್ದರೂ ಬೇರೆ ಯಾವ ಕ್ರಮವನ್ನು ಉಪಯೋಗ ಮಾಡಲೂ ಸಾಧ್ಯವಿಲ್ಲದೆ ಮೇಲಿನ ಕ್ರಮವನ್ನು ಆಧಾರವಾಗಿ ಇಟ್ಟುಕೊಳ್ಳಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರತಿಯೊಂದು ವಿಷಯದ ಬಗ್ಗೆ ತನ್ನ ಅಭಿರುಚಿಯನ್ನು ವ್ಯಕ್ತಮಾಡಿದ್ದನ್ನು ಅವನು ಆಯಾ ವಿಷಯದಲ್ಲಿ ವಾರ್ಷಿಕ ಪರೀಕ್ಷೆಯಲ್ಲಿ ಗಳಿಸಿದ ಅಂಕದೊಡನೆ ಹೋಲಿಸಿ ನೋಡಿ ಒಟ್ಟಿನ ಅವನ ಅಭಿರುಚಿಗೂ ಅವನ ಗಳಿಕೆಗೂ ಸಂಬಂಧವಿದೆಯೇ ಎಂಬುದನ್ನು ಸ್ಪಿಯರ್‌ಮನ್ನನ ಇಂಚು ಪಟ್ಟಿ ವರ್ಗೀಕರಣ ಕ್ರಮದ ಮೂಲಕ ನಿರ್ಧರಿಸಲಾಗಿದೆ.

ಈ ಸಂಶೋಧನೆಯಲ್ಲಿ ಪಾಲುಗೊಂಡ ವಿದ್ಯಾರ್ಥಿಗಳ ಸಂಖ್ಯೆ	104
ನಿರ್ದೇಶನದ ಪ್ರಕಾರ ಅಭಿಪ್ರಾಯವನ್ನು ವ್ಯಕ್ತಮಾಡದಿದ್ದ ವಿದ್ಯಾರ್ಥಿಗಳು	8
ವಿಜ್ಞಾನ ವಿಭಾಗ	64
ಕಲಾ ವಿಭಾಗ	30
ಬ್ರಾಹ್ಮಣರು	59
ಬ್ರಾಹ್ಮಣೇತರರು	34
ಬಾಲಕರು	73
ಬಾಲಕಿಯರು	20
ಅಲ್ಪ ಆದಾಯದವರು	49
ಹೆಚ್ಚು ಆದಾಯದವರು	41
ಆದಾಯವನ್ನು ನಮೂದಿಸದ ವಿದ್ಯಾರ್ಥಿಗಳು	4

ಪಟ್ಟಿ I

ಈ ಕೆಳಗೆ ಕೊಟ್ಟಿರುವ ಪಟ್ಟಿ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿರುಚಿ ಮತ್ತು ಶೈಕ್ಷಣಕ ಗಳಿಕೆಗೆ ಇರುವ ಸಂಬಂಧವನ್ನು ತೋರಿಸುತ್ತದೆ.

	ಹೆಸರು	ಸಂಬಂಧ
1	ಎಸ್.ಎಸ್. ಉಡಪ	0.09
2	ಎಂ.ವಿ. ಪೈ	–0.5
3	ಆರ್.ವಿ. ಕುಲಕರ್ಣಿ	0.38
4	ಮಾರುತಿ ಅರ್ಗೆ	0.67
5	ಎಂ.ವಿ. ಅಮ್ಮಿನಭಾವಿ	–0.3
6	ಡಿ. ಬಿ. ಹಸತಕರ್	0.11
7	ಸಿ.ಎಸ್. ಕುಲಕರ್ಣಿ	0.192
8	ಎಸ್.ಎಮ್. ದೇವಿದಾಸ	0.5
9	ಆರ್.ವಿ. ಅತ್ತೂರ	0.65
10	ಎಸ್ ಆರ್. ಸವಣೂರ	0.68
11	ಎನ್. ಎಲ್. ಕುಲಕರ್ಣಿ	0.21
12	ವಿ.ಎಮ್. ಪಾಟೀಲ	0.33
13	ಎಸ್.ಎಸ್. ಹಿರೇಮಠ	0.19

14	ಪಿ.ಕೆ. ಜೋಶಿ	....	....	....	0.22
15	ಎ.ಎನ್. ಸಿದ್ಧಾಂತಿ	....	....	....	0.7
16	ಜಿ.ಎಸ್. ಹುಯಿಲ್‌ಗೋಲ್	....	....	....	0.43
17	ಎ.ಎನ್. ಪುರಾಣಿಕ್	....	....	....	0.32
18	ಎಸ್.ಎಸ್ ಪಾಟೀಲ	....	....	....	0.29
19	ಕೆ.ಬಿ. ಜಹಗೀರ್‌ದಾರ್	....	....	....	0.57
20	ಹೆಚ್.ಎಸ್. ಪಾಟೀಲ	....	....	....	–0.13
21	ಎಂ.ವಿ. ಕುಲಕರ್ಣಿ	....	....	....	0.65
22	ಜಿ.ಪಿ. ಮೂರ್ಷಲೀನ್	....	....	....	0.36
23	ಎ.ಆರ್. ದೇಸಾಯಿ	....	....	....	0.13
24	ಎಸ್.ಆರ್. ಪರ್ವತಿಕರ್	....	....	....	0.60
25	ಎ.ಆರ್. ಅರ್ಲೆಮಟ್ಟಿ	....	....	....	0.77
26	ಎಮ್.ಎಸ್. ಕುಲಕರ್ಣಿ	....	....	....	0.55
27	ಆರ್.ಕೆ. ಜೋಶಿ	....	....	....	0.12
28	ಎ.ಬಿ. ಕಟ್ಟಿ	....	....	....	0.27
29	ಕೆ.ಎನ್. ಜೋಶಿ	....	....	....	0.04
30	ಎಸ್.ಡಿ. ಗುಂಜೀಕರ್	....	....	....	0.01
31	ಜಿ.ಎಸ್. ಬಿರೆದಾರ್	....	....	....	0.87
32	ಪಿ.ಜೆ. ಗುಜಾಳ	....	....	....	0.45
33	ಎಸ್.ಜಿ. ಹುಯಿಲ್‌ಗೋಳ್	....	....	....	0.25
34	ಎಸ್.ಎನ್. ಪರಾಂಡೆ	....	....	....	0.25
35	ಎಂ.ಕೆ. ಸೂರ್ಪಾಲಿ	....	....	....	–0.12
36	ಆರ್.ಎಲ್. ಬೀಳಗಿ	....	....	....	0.71
37	ಎಸ್.ವಿ. ಜೋಶಿ	....	....	....	0.5
38	ಎ.ಎಸ್. ದೇಶಪಾಂಡೆ	....	....	....	0.52
39	ಸಿ.ಎಸ್. ಮಾಳವಾಡ	....	....	....	–0.05
40	ಕೆ.ಎಲ್. ಪಾಟೀಲ್	....	....	....	0.19
41	ಜಿ.ಎನ್. ಶ್ರೀನಿವಾಸನ್	....	....	....	0.792
42	ಹೆಚ್.ಎಸ್. ಜ್ಯೋತಿ	....	....	....	–0.03
43	ಡಿ.ಎನ್. ರಾವ್	....	....	....	0.52
44	ಎ ಆರ್. ಬುರ್ಲಿ	....	....	....	0.74
45	ಬಿ. ಹೆಚ್. ಕರ್ಲಗಟ್ಟಿ	....	....	....	0.66
46	ಆರ್. ಆರ್. ಜಾದವ್	....	....	....	0.69
47	ಎಸ್.ಟಿ. ಪಾಟೀಲ	....	....	....	0.54
48	ಆರ್.ಎಂ. ಕೊಪ್ಪದ	....	....	...	0.37
49	ಎಂ.ಎನ್. ಕುಲಕರ್ಣಿ	....	....	....	0.12
50	ಆರ್.ಎನ್. ಬಾಗತ್	....	....	....	0.84

51	ಆರ್.ಎನ್. ಕುಲಕರ್ಣಿ	....	...	....	0.31
52	ಎಸ್.ಟಿ. ಹಡಲಗೇರಿ	....	....	....	0.62
53	ಬಿ.ಬಿ. ಬೆಂಡಿಗೇರಿ	....	...	....	-0.4
54	ಡಿ.ಎಸ್. ಪಾಟೀಲ	....	....	....	0.46
55	ಆರ್.ವಿ. ಜೋಶಿ	...	...	....	-0.4
56	ವಿ.ಕೆ ಪ್ರಭೋ	...	...	....	0.65
57	ಎಸ್. ಜಿ. ತಾವರ್‌ಗೇರಿ	....	....	...	0.34
58	ಆರ್.ವಿ. ಕುಲಕರ್ಣಿ	....	....	...	0.44
59	ಎಸ್.ಎಂ. ಏರಿ	...	....	...	0.55
60	ಯು.ಪಿ. ಇನಾಂದಾರ್	...	....	...	0.35
61	ಕೆ.ಎಸ್. ಕಮ್ಮಾರ	....	....	....	0.45
62	ಪಿ. ಎನ್. ಬಡಗೇರಿ	....	....	....	0.31
63	ಜಿ.ಎಂ. ಆಚಾರಿ	....	....	....	0.85
64	ಪಿ. ಜಿ. ನರಸಾಪುರ	....	....	...	0.74
65	ವಿ.ಪಿ. ಪತ್ರಾವಳಿ	....	....	....	0.5
66	ಎಸ್.ಟಿ. ಸವಣೂರು	....	....	....	0.59
67	ಎ.ಎಸ್. ಕಮನಹಳ್ಳಿ	....	....	....	0.03
68	ಎ.ಆರ್. ನಾಗನೂರು	....	....	....	0.05
69	ಬಿ.ಬಿ. ಕುಲಕರ್ಣಿ	....	...	...	0.18
70	ಸಿ. ಎಸ್. ಶೇಬಣ್ಣವರ್	....	....	....	0.03
71	ಕೆ.ವಿ.ವಿ. ಶ್ರಿಗಿಂಪುರು	....	....	....	0.25
72	ಎನ್.ಎಸ್. ಅಮ್ಮಣ್ಣಾ	....	....	....	0.49
73	ಕೆ.ಹೆಚ್. ಬಾಗೇವಾಡಿ	...	....	....	0.13
74	ಡಿ.ಆರ್. ಪರ್ವತೀಕರ್	....	....	....	0.52
75	ಎ.ಹೆಚ್. ಶಿಗ್ಗಾಂವ	....	....	....	0.67
76	ಎನ್. ನಾಗರತ್ನ	....	....	....	0.28
77	ಕು.ಪಿ.ಎಂ. ತಟ್ಟಿ	....	....	....	-0.06
78	ಕು.ಜಿ.ಜಿ. ಕುಲಕರ್ಣಿ	....	....	....	-0.03
79	ಎಂ.ಜಿ. ಹುಯಲಗೋಳಿ	....	....	....	0.05
80	ಎಂ.ಪಿ. ಕಿತ್ತೂರ್	....	....	....	0.09
81	ಆರ್.ವಿ. ಹೊಸೂರ	....	....	....	0.55
82	ಆ. ಎಚ್. ಕುಲಕರ್ಣಿ	....	....	....	0.43
83	ಕೆ.ಎಲ್. ಶೇಷಸಾಯಿ	....	....	....	0.65
84	ಎ.ಎಸ್. ಬಳ್ಳಾರಿ	....	....	....	0.63
85	ಬಿ.ಬಿ. ಬೆಸಕೊಪ್ಪನವರ್	....	...	....	0.29
86	ಕು.ಎಂ.ಆರ್. ಬೆಂದ್ರೆ	....	....	....	-0.4
87	ಕು.ಕೆ.ಎಚ್. ಜೋಶಿ	....	....	....	0.41

88	ಎ.ಕೆ. ಕೊಡನಳಿ	....	....	....	0.15
89	ಎಂ.ಜಿ. ಉಪ್ರೆ	....	....	....	–0.05
90	ಎ.ಎಸ್. ಸತೇಚ ಚಂದ್ರ	....	....	....	0.52
91	ವಿ.ಎಸ್. ಗಲಗಲಿ	....	....	....	0.35
92	ಸಿ.ಎಮ್. ಟೇಟಲಿ	....	....	....	0.12
93	ಎಸ್.ಎಸ್. ಪತ್ತಾರ	....	....	....	–0.1

ಮೇಲೆ ಕೊಟ್ಟಿರುವ ಪಟ್ಟಿ 93 ವಿದ್ಯಾರ್ಥಿಗಳ ಅಭಿರುಚಿ ಮತ್ತು ವಾರ್ಷಿಕ ಪರೀಕ್ಷೆಯಲ್ಲಿ ಅವರು ಪಡೆದುಕೊಂಡ ಅಂಕಗಳಿಗೆ ಇರುವ ಸಂಬಂಧವನ್ನು ವ್ಯಕ್ತಮಾಡುತ್ತದೆ. ಒಟ್ಟು 93 ವಿದ್ಯಾರ್ಥಿಗಳಲ್ಲಿ 16 ವಿದ್ಯಾರ್ಥಿಗಳು ತಾವು ವ್ಯಕ್ತಮಾಡಿರುವ ಅಭಿರುಚಿಗಳಿಗೆ ಮತ್ತು ಅವರು ವಾರ್ಷಿಕ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳಿಗೆ ಏನೂ ಸಂಬಂಧವಿಲ್ಲವೆಂಬುದು ವ್ಯಕ್ತವಾಗುತ್ತದೆ. ಇನ್ನು ಉಳಿದ ವಿದ್ಯಾರ್ಥಿಗಳು ಅಂದರೆ 76 ವಿದ್ಯಾರ್ಥಿಗಳು ವ್ಯಕ್ತಮಾಡಿರುವ ಅಭಿರುಚಿಗಳಿಗೂ ಅವರು ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳಿಗೂ ಸಂಬಂಧವಿದೆ ಎಂಬುದನ್ನು ಒಂದನೆಯ ಪಟ್ಟಿ ಸ್ಪಷ್ಟವಾಗಿ ವ್ಯಕ್ತಮಾಡುತ್ತದೆ. ಈ 76 ವಿದ್ಯಾರ್ಥಿಗಳಲ್ಲೂ ಮೂವತ್ತೊಂದು ವಿದ್ಯಾರ್ಥಿಗಳು ಆಯಾ ವಿಷಯಗಳಲ್ಲಿ ವ್ಯಕ್ತಮಾಡಿರುವ ಅಭಿರುಚಿ ಮತ್ತು ಆಯಾ ವಿಷಯಗಳಲ್ಲಿ ಪಡೆದ ಅಂಕಗಳಿಗೆ ನಿಚ್ಚಳ ಸಂಬಂಧವಿದೆ ಎಂಬುದನ್ನು ನಾವು ಕಾಣುತ್ತೇವೆ. ನಿಚ್ಚಳ ಸಂಬಂಧ ಬರುವುದಕ್ಕೆ ಸಂಬಂಧ ಸೂಚಿ 0.5 ಅಥವಾ 0.5 ಕ್ಕಿಂತಲೂ ಹೆಚ್ಚು ಇರಬೇಕು. ಈ ರೀತಿಯ ಸಂಬಂಧ ಮೂವತ್ತೊಂದು ವಿದ್ಯಾರ್ಥಿಗಳಲ್ಲಿ ಎದ್ದು ಕಾಣುತ್ತದೆ.

ಪಟ್ಟಿ 2

ವಿಜ್ಞಾನ ಮತ್ತು ಕಲಾ ವಿದ್ಯಾರ್ಥಿಗಳಲ್ಲಿರುವ ವ್ಯತ್ಯಾಸ

ಕೆಳಗಿನ ಪಟ್ಟಿ ವಿಜ್ಞಾನ ಹಾಗೂ ಕಲಾವಿಭಾಗದ ವಿದ್ಯಾರ್ಥಿಗಳ ಅಭಿರುಚಿ ಮತ್ತು ಗಳಿಕೆಗೆ ಇರುವ ಸಂಬಂಧವನ್ನು ವ್ಯಕ್ತ ಮಾಡುತ್ತದೆ.

ವಿಜ್ಞಾನ

	ಹೆಸರು	ಸಂಬಂಧ
1	ಡಿ.ಜಿ. ಹಸತಕರ್	0.11
2	ಸಿ.ಎಸ್. ಕುಲಕರ್ಣಿ	0.192
3	ಕು. ಎಸ್.ಎಂ. ದೇವದಾಸ್	0.5
4	ಅ.ವಿ. ಅತ್ತೂರು	0.65
5	ಎಸ್.ಆರ್. ಸವಣೂರು	0.68
6	ಎನ್.ಎಂ. ಕುಲಕರ್ಣಿ	0,33
7	ವಿ.ಎಂ. ಪಾಟೀಲ	0.21
8	ಎಸ್.ಎಸ್. ಹಿರೇಮಠ	0.19
9	ಪಿ.ಕೆ. ಜೋಶಿ	0.22
10	ಎಂ.ಎ. ಕುಲಕರ್ಣಿ	0.65
11	ಹೆಚ್.ಎಸ್. ಪಾಟೀಲ	–0.1

12	ಜಿ.ಪಿ. ಮೂರ್ಷರೀನ್	0.36
13	ಎ.ಆರ್. ಅರ್ಲಮಟ್ಟಿ	0.77
14	ಆರ್.ಕೆ. ಜೋಶಿ	0.12
15	ಎ.ಬಿ. ಕಟ್ಟಿ	0.27
16	ಕೆ.ಎನ್. ಜೋಶಿ	0.04
17	ಎಸ್.ಡಿ. ಗುಂಜೀಕರ್	–0.01
18	ಜಿ.ಎನ್. ಬಿರೇದಾರ್	0.87
19	ಕು. ಎ.ಜಿ. ಗುಂಜಾಲ್	0.45
20	ಎಸ್.ಜಿ. ಹುಯಿಲಗೋಳ	0.25
21	ಎಸ್.ಎನ್. ಪರಾಡೆ	0,25
22	ಕು. ಎಂ.ಕೆ. ಸೂರ್ಪಾಲಿ	–0.12
23	ಆರ್.ಜಿ. ಬೀಳಗಿ	0.71
24	ಎಸ್.ವಿ. ಜೋಶಿ	0.5
25	ಎ.ಎನ್. ದೇಶಪಾಂಡೆ	0.52
26	ಕೆ.ಎಲ್. ಪಾಟೀಲ	0.19
27	ಸಿ.ಎಸ್. ಮೂಲವಾಡ	0.05
28	ಜಿ.ಎನ್. ಶ್ರೀನಿವಾಸನ್	0.792
29	ಹೆಚ್.ಎನ್. ಜ್ಯೋತಿ	–0·3
30	ಡಿ.ಎಸ್. ರಾವ್	0.52
31	ತರ್ಲಗಟ್ಟಿ	0.66
32	ಆರ್.ಆರ್. ಜಾದವ್	0.09
33	ಆರ್.ಎಚ್. ಕೊಪ್ಪರ್	0.37
34	ಎಸ್.ಟಿ. ಪಾಟೀಲ	0.54
35	ಎಂ.ಎಸ್. ಕುಲಕರ್ಣಿ	–0.12
36	ಆರ್.ಎ. ಬಾಗಲ್	0.84
37	ಆರ್.ಎಸ್. ಕುಲಕರ್ಣಿ	0.31
38	ಎಸ್.ಟಿ. ಹಡಗೇರಿ	0.62
39	ಬಿ.ಬಿ, ಬೆಂಡಿಗೇರಿ	–0.4
40	ಡಿ.ಎಸ್. ಪಾಟೀಲ	0.46
41	ಆ.ವಿ. ಜೋಶಿ	–0.4
42	ವಿ.ಕೆ. ಪ್ರಭು	0.65
43	ಎಸ್.ಜಿ. ತಾವರೆಗೆರೆ	0.34
44	ಆರ್.ಬಿ. ಕುಲಕರ್ಣಿ	0.44
45	ಎಸ್.ಎಂ. ಏರಿ	0.55
46	ಯು.ಪಿ. ಇನಾಂದಾರ್	0.35
47	ಕೆ.ಎಸ್. ಕಮ್ಮಾರ	0.45
48	ಕು॰ ಪಿ.ಎಸ್. ಬಡಿಗೇರ್	0,31

49	ಜಿ.ಎಂ. ಆಚಾರಿ	0.85
50	ವಿ.ಪಿ. ಪತ್ರಾವಳಿ	0.5
51	ಕು. ಪಿ.ಎಂ. ಕಟ್ಟಿ	-0.06
52	ಎಂ.ಜಿ. ಹಂದಿಗೋಳ	0.05
53	ಆರ್.ವಿ. ಹೊಸೂರ	0.55
54	ಎಂ.ಪಿ. ಕಿತ್ತೂರ	0.09
55	ಆರ್.ಎಚ್. ಕುಲಕರ್ಣಿ	0.43
56	ಕೆ.ಎಂ.ಆರ್. ಬೆಂದ್ರೆ	-0.4
57	ಆರ್ ಎನ್. ಬಳ್ಳಾರಿ	0.63
58	ಕೆ.ಎಲ್. ಶೇಷಶಾಯಿ	0.65
59	ಜಿ.ಆರ್. ಬೆನಕೊಪ್ಪನವರ್	0.29
60	ಎಸ್.ಹೆಚ್. ಜೋಶಿ	0.41
61	ವಿ.ಕೆ. ಕೊಡಗಲಿ	0.15
62	ಎಂ.ಜಿ. ಉಪ್ರೆ	-0.05
63	ಎ.ಎಸ್. ಸತೀಷಚಂದ್ರ	0.52

ಕಲೆ

	ಹೆಸರು	ಸಂಬಂಧ
1	ಎಸ್.ಎಸ್. ಉಡುಪ	0.09
2	ಎಂ.ಪಿ. ಪೈ	-0.5
3	ಆ.ವಿ. ಕುಲಕರ್ಣಿ	0.38
4	ಮಾರುತಿ ಆಗ್ರೆ	0.67
5	ಎ.ಎಸ್. ಅಮ್ಮಿನಭಾವಿ	-0.3
6	ಎ.ಎ. ಸಿದ್ಧಾಂತಿ	0.7
7	ಜೆ.ಎಸ್. ಹುಯಿಲ್‌ಗೋಳ್	0.43
8	ವಿ.ಎಸ್. ಪುರಾಣಿಕ	0.32
9	ಎಸ್.ಎಸ್. ವಾಟೀಡಿ	0.29
10	ಕೆ.ಬಿ. ಜಹಗೀರ್‌ದಾರ್	0.32
11	ಎ.ಜಿ. ದೇಸಾಯಿ	0.13
12	ಎಸ್.ಆರ್. ಪರ್ವತೀಕರ್	0.6
13	ಎಂ.ಎಸ್. ಕುಲಕರ್ಣಿ	0.55
14	ಎಂ.ಎಸ್. ಬುರ್ಲಿ	0.74
15	ಪಿ.ಎಸ್. ನರಸಾಪುರ	0.74
16	ಎಸ್.ಜಿ. ಸವಣೂರ	0.59
17	ಎ.ಎಸ್. ಕಮಾನಹಳ್ಳಿ	0.03
18	ಪಿ.ಆರ್. ನಾಗನೂರ	0.05
19	ಕು. ಬಿ.ಬಿ. ಕುಲಕರ್ಣಿ	0.18
20	ಸಿ.ಎಸ್. ಶೇಬಣ್ಣವರ್	-0.03

21	ಕೆ.ವಿ.ವಿ. ಶ್ರೀಗಿರಿಪುರ	0.25
22	ಹೆಚ್.ಎಸ್. ಅಮ್ಮಣ್ಣ	0.49
23	ಕೆ.ಎಚ್. ಬಾಗೇವಾಡಿ	0.13
24	ಡಿ.ಆರ್. ಪರ್ವತೀಕರ್	0.52
25	ಎ.ಹೆಚ್. ಶಿಗ್ಗಾಂವ	0.67
26	ಕು. ಎಸ್. ನಾಗರತ್ನ	0.28
27	ಕು. ಜಿ.ಜಿ. ಕುಲಕರ್ಣಿ	0.03
28	ವಿ.ಎಸ್. ಗಲಗಲಿ	0.35
29	ಸಿ.ಎಂ. ಟೇಟಂಬಿ	0.12
30	ಎಸ್.ಎಸ್. ಪತ್ತಾರ	–0.1

ಮೇಲಿನ ಪಟ್ಟಿ ವಿಜ್ಞಾನ ಮತ್ತು ಕಲಾ ವಿಭಾಗಗಳ ವಿದ್ಯಾರ್ಥಿಗಳ ಅಭಿರುಚಿಗಳಿಗೂ ಗಳಿಕೆಗಳಿಗೂ ಇರುವ ಸಂಬಂಧವನ್ನು ತೋರಿಸುತ್ತದೆ. ವಿಜ್ಞಾನ ಮತ್ತು ಕಲಾ ಭಾಗಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಸಮಾನವಾಗಿ ಇಲ್ಲದಿರುವುದರಿಂದ ತೌಲನಿಕ ದೃಷ್ಟಿಯಿಂದ ಸಮಸ್ಯೆಯನ್ನು ವಿಚಾರ ಮಾಡುವುದು ಕಷ್ಟ. ಆದರೂ ಇದ್ದ ವಿಷಯವನ್ನು ಇಲ್ಲಿ ವ್ಯಕ್ತಮಾಡಲಾಗುತ್ತದೆ. ವಿಜ್ಞಾನ ವಿಭಾಗದಲ್ಲಿ 63 ವಿದ್ಯಾರ್ಥಿಗಳು ಇದ್ದಾರೆ. ಕಲಾ ವಿಭಾಗವಲ್ಲಿ 30 ವಿದ್ಯಾರ್ಥಿಗಳು ಇದ್ದಾರೆ, ಅಂದರೆ ಕಲಾ ವಿಭಾಗದ ಎರಡರಷ್ಟು ವಿದ್ಯಾರ್ಥಿಗಳು ವಿಜ್ಞಾನ ವಿಭಾಗದಲ್ಲಿ ಇದ್ದಾರೆ. 63 ವಿದ್ಯಾರ್ಥಿಗಳಲ್ಲಿ 8 ವಿದ್ಯಾರ್ಥಿಗಳ ಅಭಿರುಚಿಯಲ್ಲಿ ಮತ್ತು ಅವರ ಗಳಿಕೆಯಲ್ಲಿ ಏನೂ ಸಂಬಂಧವಿಲ್ಲ, ಅಂದರೆ ಅವರ ಅಭಿರುಚಿ ಅವರ ಗಳಿಕೆಯನ್ನು ಮುನ್ಸೂಚಿಸುವುದಿಲ್ಲ. ಉಳಿದ 55 ವಿದ್ಯಾರ್ಥಿಗಳ ಅಭಿರುಚಿಗಳಿಗೂ ಅವರ ಗಳಿಕೆಗಳಿಗೂ ಸಂಬಂಧವಿದೆ. ಮೇಲಿನ ಪಟ್ಟಿಯ ಪ್ರಕಾರ 14 ವಿದ್ಯಾರ್ಥಿಗಳ ಅಭಿರುಚಿಗಳಿಗೂ ಗಳಿಕೆಗಳಿಗೂ ನಿಚ್ಚಳ ಸಂಬಂಧವಿದೆ. ಅಂದರೆ ಅವರ ಅಭಿರುಚಿಗೆ ತಕ್ಕಂತೆ ಪರೀಕ್ಷೆಯಲ್ಲಿ ಅವರು ಅಂಕಗಳನ್ನು ಪಡೆದಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ.

ಒಟ್ಟು 30 ಕಲಾ ವಿದ್ಯಾರ್ಥಿಗಳಲ್ಲಿ 6 ವಿದ್ಯಾರ್ಥಿಗಳ ಅಭಿರುಚಿಗಳಿಗೂ ಅವರ ಗಳಿಕೆಗಳಿಗೂ ಸಂಬಂಧವಿಲ್ಲ ಎಂಬುದು ಮೇಲೆ ಕೊಟ್ಟಿರುವ ಪಟ್ಟಿಯನ್ನು ನೋಡಿದರೆ ತಿಳಿಯುತ್ತದೆ. ಉಳಿದ 24 ವಿದ್ಯಾರ್ಥಿಗಳ ಅಭಿರುಚಿಗಳಿಗೂ ಅವರ ಗಳಿಕೆಗಳಿಗೂ ಸಂಬಂಧವಿದೆ ಎಂಬುದು ಸುವ್ಯಕ್ತ. ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಕಲಾ ವಿಭಾಗದ ವಿದ್ಯಾರ್ಥಿಗಳ ಅಭಿರುಚಿಯ ಅಳತೆ ಸಮಂಜಸವಾಗಿಲ್ಲ ಎಂಬುದು ವ್ಯಕ್ತವಾಗುತ್ತದೆ.' ಇನ್ನು 8 ವಿದ್ಯಾರ್ಥಿಗಳ ಅಭಿರುಚಿ ಮತ್ತು ಗಳಿಕೆಗೆ ನಿಚ್ಚಳ ಸಂಬಂಧವಿರುವುದು ಮೇಲಿನ ಪಟ್ಟಿಯನ್ನು ಪರಿಶೀಲಿಸಿದರೆ ತಿಳಿಯುತ್ತದೆ. ಈ ದೃಷ್ಟಿಯಿಂದ ಸಂಖ್ಯೆಯಲ್ಲಿ ಕಲಾ ವಿದ್ಯಾರ್ಥಿಗಳು ಕಡಿಮೆ ಇದ್ದರೂ, ವಿಜ್ಞಾನ ವಿದ್ಯಾರ್ಥಿಗಳಿಗಿಂತ ಸ್ವಲ್ಪ ಹೆಚ್ಚು ನಿಚ್ಚಳ ಸಂಬಂಧ ಹೊಂದಿರುವುದು ಆನಂದವನ್ನು ಉಂಟುಮಾಡುವ ವಿಷಯ. ಒಟ್ಟಿನಲ್ಲಿ ವಿಜ್ಞಾನ ಮತ್ತು ಕಲಾ ವಿಭಾಗಗಳ ವಿದ್ಯಾರ್ಥಿಗಳಲ್ಲಿ ಅಭಿರುಚಿ ಮತ್ತು ಗಳಿಕೆಗಳ ಬಗ್ಗೆ ವಿಶೇಷ ವ್ಯತ್ಯಾಸ ಇದ್ದಹಾಗೆ ಕಾಣುವುದಿಲ್ಲ.

ಪಟ್ಟಿ 3

ಜಾತಿ ವ್ಯತ್ಯಾಸ

ಕೆಳಗೆ ಕೊಟ್ಟಿರುವ 'ಪಟ್ಟಿ ಬ್ರಾಹ್ಮಣೇತರು ಮತ್ತು ಬ್ರಾಹ್ಮಣರ ಅಭಿರುಚಿ ಮತ್ತು ಗಳಿಕೆಗಳಿಗೆ ಇರುವ ಸಂಬಂಧವನ್ನು ತೋರಿಸುತ್ತದೆ.

	ಹೆಸರು ಬ್ರಾಹ್ಮಣೇತರರು	ಸಂಬಂಧ
1	ಮಾರುತಿ ಅಗ್ರೆ	0.67
2	ಎ.ಎಸ್. ಅಮ್ಮಿನಭಾವಿ	-0.3
3	ಎಸ್.ಎಸ್. ಪಾಟೀಲ	0.29
4	ಎಂ.ಎಸ್. ಬುರ್ಲಿ	0.74
5	ಎಸ್.ಟಿ. ಸಮನೂರು	0.59
6	ಸಿ.ಎಸ್. ಶೇಬಣ್ಣವರ್	0.03
7	ಹೆಚ್.ಎಸ್. ಅಮ್ಮಣ್ಣಾ	0.49
8	ಎ ಹೆಚ್. ಶಿಗ್ಗಾಂವ	0.67
9	ಸಿ.ಎಂ. ಟಿಟೆಂಬಿ	0.12
10	ಎಸ್.ಎಸ್. ಪತ್ತಾರ	-0.1
11	ಡಿ.ಬಿ. ಹಾಸಂಕರ	0.11
12	ಎಸ್.ಎಂ. ದೇವಿದಾಸ	0.5
13	ಎಸ್.ಎಸ್. ಹಿರೇಮಠ	0.19
14	ಎಚ್.ಎಸ್. ಪಾಟೀಲ	-0.1
15	ಜೆ.ಪಿ. ಮೂರ್ಖಲೀನ್	0.36
16	ಎ.ಆರ್. ಅರ್ಲಿಮಟ್ಟಿ	0.77
17	ಜಿ.ಎನ್. ಬಿರೇದಾರ್	0.87
18	ಕು. ಪಿ.ಜಿ. ಗುಂಜಾಳ	0.45
19	ಆರ್.ಎಲ್. ಬೀಳಗಿ	0.71
20	ಕೆ.ಎಂ. ಪಾಟೀಲ	0.19
21	ಸಿ.ಎಸ್. ಮೂಳವಾಡ	0.05
22	ಬಿ.ಎಚ್. ತರುಗಟ್ಟಿ	0.66
23	ಆರ್.ಆರ್. ಜಾದವ	0.69
24	ಆರ್.ಎಚ್. ಕೊಪ್ಪದ	0.37
25	ಬಿ.ಬಿ. ಬೆಂಡಿಗೇರಿ	-0.4
26	ಎಸ್.ಜಿ. ತಾರಗೇರಿ	0.34
27	ಕೆ.ಎಸ್. ಕಮ್ಮಾರ	0.45
28	ಪಿ.ಎಸ್. ಬಡಗೇರಿ	0.31
29	ಜಿ.ಎಂ. ಆಚಾರಿ	0.85
30	ವಿ.ಪಿ. ಪತ್ರಾವಳಿ	-0.5
31	ಎಂ.ಆರ್. ಬೇಂದ್ರೆ	-0.4
32	ಬಿ.ಬಿ. ಬೆನಕಪ್ಪನವರ್	0.29
33	ಎಂ.ಜಿ. ಉಪ್ಪೆ	0.05
34	ಎ.ಎಸ್. ಸಚ್ಚಿದಾನಂದ	0.52
	ಬ್ರಾಹ್ಮಣರು	
1	ಎಸ್.ಎಸ್.ಉಡಪ	0.09

2	ಎಂ.ವಿ ಪೈ	–0.5
3	ಎ.ವಿ. ಕುಲಕರ್ಣಿ	0.38
4	ಎ.ವಿ. ಸಿದ್ಧಾಂತಿ	0.7
5	ಕೆ.ಜಿ.ಎಸ್ ಹುಯಲಗೋಳ್	0.43
6	ಎ.ಎಸ್. ಪುರಾಣಿಕ	0.32
7	ಬಿ.ಬಿ. ಜಹಗೀರದಾರ್	0.57
8	ಕು.ಎ.ಜಿ. ದೇಸಾಯಿ	0.13
9	ಎಸ್.ಜಿ. ಪರ್ವತೀಕರ್	0.6
10	ಕು.ಎಂ.ಎಸ್. ಕುಲಕರ್ಣಿ	0.55
11	ಪಿ.ಜಿ. ನರಸಾಪುರ	0.74
12	ಎ.ಎಸ್. ಕಾಮನಹಳ್ಳಿ	0.03
13	ಎ.ಆರ್. ನಾಗನೂರ	–0.05
14	ಕು.ಜಿ.ಟಿ. ಕುಲಕರ್ಣಿ	0.18
15	ವಿ.ವಿ. ಶ್ರೀಗಿರಿಪೂರ	0.25
16	ಕೆ.ಎಚ್. ಬಾಗೇವಾಡಿ	0.13
17	ದೆ.ಆರ್. ಪರ್ವತೀಕರ್	0.52
18	ಎನ್. ನಾಗರತ್ನ	0.28
19	ಜಿ.ಜಿ. ಕುಲಕರ್ಣಿ	0.03
20	ವಿ.ಎಸ್. ಗಲಗಲೆ	0.35
21	ಸಿ.ಎಸ್. ಕುಲಕರ್ಣಿ	0.192
22	ಆ.ವಿ. ಅತ್ನೂರ	0.65
23	ಕು.ಎಸ್.ಆರ್. ಸವಣೂರು	0,68
24	ಎನ್.ಎಂ. ಕುಲಕರ್ಣಿ	0.33
25	ಕು.ವಿ.ಎಸ್. ಪಾಟೀಲ	0.01
26	ಆರ್.ಕೆ. ಜೋಶಿ	0.22
27	ಎಂ.ಎನ್. ಕುಲಕರ್ಣಿ	0.65
28	ಆರ್.ಕೆ. ಜೋಶಿ	0.12
29	ಆರ್.ಬಿ. ಕಟ್ಟಿ	0.27
30	ಕೆ.ಎನ್. ಜೋಶಿ	0.04
31	ಎಸ್.ಡಿ. ಗುಂಜೀಕರ್	0.01
32	ಎನ್.ಜಿ. ಹಯಲಗೋಳ್	0.25
33	ಎಸ್.ಎಸ್. ಪರಾರಡೆ	0.25
34	ಎಂ.ಕೆ. ಶೂರ್ಪಾಲಿ	0.12
35	ಎಸ್.ವಿ. ಜೋಶಿ	0.5
36	ಎ.ಎಸ್. ದೇಶಪಾಂಡೆ	0.52
37	ಜಿ.ಎಸ್. ಶ್ರೀನಿವಾಸನ್	0.792
38	ಎಚ್.ಎಸ್ ಜ್ಯೋತಿ	-0.3

39	ಡಿ.ಎಸ್. ರಾವ	0.52
40	ಎಸ್.ಟಿ. ಪಾಟೀಲ	0.54
41	ಎಂ.ಎಸ್ ಕುಲಕರ್ಣಿ	0.12
42	ಆರ್. ಎಸ್. ಬಾಗಲ	0.84
43	ಆರ್.ಎಸ್. ಕುಲಕರ್ಣಿ	0.31
44	ಎಸ್.ಟಿ. ಹಡಲಗೇರಿ	0.62
45	ಡಿ.ಎಸ್. ಪಾಟೀಲ	0.46
46	ಆ.ವಿ. ಜೋಶಿ	–0.4
47	ವಿ.ಕೆ. ಪ್ರಭು	0.85
48	ಆ.ಬಿ. ಕುಲಕರ್ಣಿ	0.44
49	ಎಸ್.ಎಂ. ಏರಿ	0.55
50	ಯು.ಪಿ. ಇನಾಂದಾರ್	0.35
51	ಪಿ.ವಿ. ಕಟ್ಟಿ	–0.06
52	ಎಂ.ಜಿ. ಹುಂದಿಗೊಲ್	0.05
53	ಆರ್.ವಿ. ಹೊಸೂರ	0.55
54	ಎ.ಪಿ. ಕಿತ್ತೂರ	0.09
55	ಆರ್.ಎಲ್ ಕುಲಕರ್ಣಿ	0.43
56	ಎ.ಎನ್. ಬಳ್ಳಾರಿ	0.63
57	ಕೆ.ಎಲ್. ಶೇಷಶಾಯಿ	0.65
58	ಕೆ.ಎಸ್.ಎಚ್. ಜೋಶಿ	0.41
59	ಕೊಡಗಳಿ	0.15

ಮೇಲೆ ಕೊಟ್ಟಿರುವ ಪಟ್ಟಿಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ಈ ವಿಷಯಗಳು ಕಂಡು ಬರುತ್ತವೆ. ಬ್ರಾಹ್ಮಣ ಮತ್ತು ಬ್ರಾಹ್ಮಣೇತರರಲ್ಲಿರುವ ವ್ಯತ್ಯಾಸವನ್ನು ತೌಲನಿಕ ದೃಷ್ಟಿಯಿಂದ ನಿವೇದಿಸಲು ಕಷ್ಟಸಾಧ್ಯ. ಏಕೆಂದರೆ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ಸಮಾನಸಂಖ್ಯೆಯಲ್ಲಿ ಇಲ್ಲ. ಬ್ರಾಹ್ಮಣ ವಿದ್ಯಾರ್ಥಿಗಳ ಸಂಖ್ಯೆ 59. ಆದರೆ ಬ್ರಾಹ್ಮಣೇತರ ವಿದ್ಯಾರ್ಥಿಗಳ ಸಂಖ್ಯೆ 34. ಆದರೂ ನಮಗೆ ಸಂಖ್ಯೆಗಳು ಎಷ್ಟು ದೊರಕಿರುವವೋ ಅಷ್ಟನ್ನು ತೌಲನಿಕ ದೃಷ್ಟಿಯಿಂದ ವಿವೇಚಿಸೋಣ. 34 ಬ್ರಾಹ್ಮಣೇತರ ವಿದ್ಯಾರ್ಥಿಗಳಲ್ಲಿ 8 ವಿದ್ಯಾರ್ಥಿಗಳ ಸಂಖ್ಯೆಗಳು ಅವರ ಅಭಿರುಚಿಗಳಿಗೂ ಗಳಿಕೆಗಳಿಗೂ ಏನೂ ಸಂಬಂಧವಿಲ್ಲ ಎಂಬುದನ್ನು ತೋರಿಸುತ್ತವೆ. 9 ವಿದ್ಯಾರ್ಥಿಗಳ ಸಂಖ್ಯೆಗಳು ಅಭಿರುಚಿಗಳಿಗೂ ಮತ್ತು ಗಳಿಕೆಗಳಿಗೂ ನಿಚ್ಚಳ ಸಂಬಂಧವನ್ನು ವ್ಯಕ್ತ ಮಾಡುತ್ತವೆ. 59 ಬ್ರಾಹ್ಮಣ ವಿದ್ಯಾರ್ಥಿಗಳಲ್ಲಿ 9 ವಿದ್ಯಾರ್ಥಿಗಳ ಸಂಖ್ಯೆಗಳು ಅಭಿರುಚಿಗಳಿಗೂ ಗಳಿಕೆಗಳಿಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಸ್ಪಷ್ಟಪಡಿಸುತ್ತವೆ. ಇನ್ನು ಹದಿನಾರು ವಿದ್ಯಾರ್ಥಿಗಳ ಸಂಖ್ಯೆಗಳು ಅಭಿರುಚಿಗಳಿಗೆ ಮತ್ತು ಗಳಿಕೆಗಳಿಗೆ ನಿಚ್ಚಳ ಸಂಬಂಧವನ್ನು ತೋರಿಸುತ್ತದೆ. ಅಂದ ಮೇಲೆ ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೂ ಬ್ರಾಹ್ಮಣ ವಿದ್ಯಾರ್ಥಿಗಳಿಗೂ ಅಭಿರುಚಿಗಳ ಮತ್ತು ಗಳಿಕೆಗಳ ಸಂಬಂಧದಲ್ಲಿ ವ್ಯತ್ಯಾಸವಿದೆ ಎಂಬುದು ಮೇಲಿನ ಸಂಖ್ಯೆಗಳಿಂದ ತಿಳಿಯುತ್ತದೆ. ಸಾಮಾನ್ಯವಾಗಿ ಇವೆರಡಕ್ಕೂ ಸಂಬಂಧವಿರುವುದು ಎರಡೂ ಜಾತಿಗಳಲ್ಲಿ ಎದ್ದು ಕಾಣುತ್ತದೆ;

ಪಟ್ಟಿ 4

ಲಿಂಗ ವ್ಯತ್ಯಾಸ

ಕೆಳಗೆ ಕೊಟ್ಟಿರುವ ಪಟ್ಟಿ ಬಾಲಕ ಮತ್ತು ಬಾಲಕಿಯರ ಅಭಿರುಚಿ ಮತ್ತು ಗಳಿಕೆಗಳ ಸಂಬಂಧದಲ್ಲಿರುವ ವ್ಯತ್ಯಾಸವನ್ನು ತೋರಿಸುತ್ತದೆ.

	ಬಾಲಕರ ಹೆಸರು	ಸಂಬಂಧ
1	ಮಾರುತಿ ಅಗ್ರೆ	0.67
2	ಎ.ಎಸ್. ಅಮ್ಮಿನಭಾವಿ	-0.3
3	ಎಂ.ಆರ್. ಬುರ್ಲಿ	0.74
4	ಎಸ್.ಟಿ. ಸವಣೂರ	0.59
5	ಸಿ. ಎಸ್. ಶೇಬಣ್ಣವರ	-0.03
6	ಹೆಚ್. ಎಸ್. ಅಮ್ಮಣ್ಣ	0.49
7	ಎ.ಎಚ್. ಶಿಗ್ಗಾಂವಿ	0.67
8	ಸಿ.ಎಂ. ಟೆಟಂಬಿ	0.12
9	ಎಸ್.ಎಸ್. ಪತ್ತಾರ	-0.1
10	ಡಿ.ಬಿ. ಹಾಸಲಕರ	0.11
11	ಎಸ್.ಎಸ್. ಪಾಟೀಲ	0.11
12	ಎನ್.ಎಸ್. ಹಿರೇಮಠ	-0.1
13	ಜಿ.ಪಿ. ಮೂರ್ಷಲಿನ	0.36
14	ಎ.ಆರ್. ಅರಲಮಟ್ಟಿ	0.77
15	ಜಿ.ಎನ್. ಬಿರೇದಾರ್	0.87
16	ಆರ್.ಎಲ್, ಬೀಳಗಿ	0.71
17	ಕೆ.ಎಲ್. ಪಾಟೀಲ	0,19
18	ಸಿ.ಎಸ್. ಮಾಳವಾಡ	-0.05
19	ಬಿ.ಎಚ್. ತರ್ಲಗಟ್ಟಿ	0.66
20	ಆರ್.ಆರ್. ಜಾದವ್	0.69
21	ಜಿ.ಬಿ. ಬೆಂಡಿಗೇರಿ	-0.4
22	ಆರ್.ಎಚ್. ಕೊಪ್ಪದ	0.37
23	ಎಸ್.ಜಿ. ತಾವರಗೇರಿ	0.34
24	ಕೆ.ಎಸ್. ಕಮ್ಮಾರ	0.45
25	ಜಿ.ಎಂ. ಆಚಾರಿ	0.85
26	ವಿ.ಪಿ. ಪತ್ರಾವಳಿ	0.5
27	ಬಿ.ಬಿ. ಬೆನಕೆಪ್ಪನವರ	0.29
28	ಎಂ.ಜಿ. ಉಪ್ಪೆ	0;05
29	ಎ.ಎಸ್. ಸಚ್ಚಿದಾನಂದ	0.52
30	ಎಸ್. ಎಸ್. ಉಡಪ	0.09
31	ಎಂ. ವಿ. ಪೈ	-0.5

32	ಎ. ವಿ. ಕುಲಕರ್ಣಿ	0.38
33	ಎ. ಎ. ಸಿದ್ಧಾಂತಿ	0.7
34	ಬಿ. ಬಿ. ಜಹಗೀರದಾರ್	0.57
35	ಎಸ್. ಆರ್. ಪರ್ವತೀಕರ್	0.6
36	ಎ. ಎಸ್. ಕಮನಹಳ್ಳಿ	0.03
37	ವಿ. ಎಸ್. ನಾಗನೂರ	–0.05
38	ಕೆ. ಎಚ್. ಬಾಗೆವಾಡಿ	0.13
39	ಡಿ. ಆರ್. ಪರ್ವತೀಕರ	0.52
40	ವಿ. ಎಸ್. ಗಲಗಲಿ	0.35
41	ಸಿ. ಎಸ್. ಕುಲಕರ್ಣಿ	0.192
42	ಆರ್. ವಿ. ಅತ್ನೂರ	0.65
43	ಎಸ್. ಎಲ್. ಕುಲಕರ್ಣಿ	0.33
44	ಪಿ. ಕೆ. ಜೋಶಿ	0·22
45	ಎಂ. ಎ. ಕುಲಕರ್ಣಿ	0.65
46	ಆರ್. ಕೆ. ಜೋಶಿ	0.12
47	ಎ, ಬಿ. ಕಟ್ಟಿ	0.27
48	ಕೆ. ಎನ್. ಜೋಶಿ	0.04
49	ಎನ್. ಡಿ. ಗಲಂಜೇಕರ	–0,01
50	ಎನ್. ಜಿ. ಹುಯಿಲ್‌ಗೋಳ್	0.25
51	ಎಸ್. ಎಸ್. ಪರಾಂಡೆ	0.25
52	ಎಂ. ಕೆ. ಸೂರ್ಪಾಲಿ	–0.12
53	ಎಸ್. ವಿ. ಜೋಶಿ	0.5
54	ಎ. ಎನ್; ದೇಶಪಾಂಡೆ	0.52
55	ಜಿ. ಎನ್. ಶ್ರೀನಿವಾಸನ್	0.792
56	ಎಚ್. ಎಸ್. ಜ್ಯೋತಿ	–3.3
57	ಡಿ. ಎನ್. ರಾವ್	0.52
58	ಎಸ್, ಟಿ. ಪಾಟಿಲ	0.54
59	ಎಂ, ಎನ್. ಕುಲಕರ್ಣಿ	0.12
60	ಆರ್. ಎನ್. ಬಾಗಲ	0.84
61	ಆರ್. ಎನ್. ಕುಲಕರ್ಣಿ	0.31
62	ಎಸ್. ಟಿ. ಹಡಲಗೇರಿ	0.62
63	ಡಿ. ಎಸ್. ಪಾಟೀಲ	0.46
64	ಆರ್. ವಿ. ಜೋಶಿ	–0.4
65	ವಿ. ಕೆ. ಪ್ರಭು	0.65
66	ಆರ್. ಬಿ. ಕುಲಕರ್ಣಿ	0.44
67	ಎಸ್. ಎಂ. ಏರಿ	0.55
68	ಎಂ. ಜಿ. ಹಂದಿಗೊಳ	0,05

69	ಆ. ವಿ. ಹೊಸೂರ	0.55
70	ಡಿ. ಪಿ. ಕಿತ್ತೂರ	0.69
71	ಆರ್. ಎಚ್. ಕುಲಕರ್ಣಿ	0.43
72	ಕೆ. ಎಲ್. ಶೇಷಶಾಯಿ	0.65
73	ವಿ. ಕೆ. ಕಡಗೊಲು	0.105

ಬಾಲಕಿಯರ ಹೆಸರು

1	ಎಸ್. ಐಸ್. ಪಾಟೀಲ	0,29
2	ಎಸ್. ಎಂ. ದೇವಿದಾಸ	0.5
3	ಪಿ. ಜಿ. ಗುಂಜಾಳ	0.45
4	ಪಿ. ಎನ್. ಬಡಗೇರಿ	0.31
5	ಎಂ. ಆರ್. ಬೇಂದ್ರೆ	–0.4
6	ಜೆ. ಎಸ್. ಹಯುಲಗೊಳ್	0.43
7	ವಿ. ಎಸ್. ಪುರಾಣಿಕ	0.32
8	ಎ. ಆರ್. ದೇಸಾಯಿ	0.13
9	ಎಂ. ಎಸ್. ಕುಲಕರ್ಣಿ	0.55
10	ಪಿ. ಜಿ. ನರಸಾಪುರ	0.74
11	ಬಿ. ಬಿ. ಕುಲಕರ್ಣಿ	0.18
12	ವಿ. ವಿ. ಶ್ರೀಗಿರಿಪುರ	0.25
13	ಎನ್. ನಾಗರತ್ನ	0.28
14	ಜಿ. ಜಿ. ಕುಲಕರ್ಣಿ	0.03
15	ಎಸ್. ಆರ್. ಸವಣೂರು	0.68
16	ವಿ. ಎಂ. ಪಾಟೀಲ	0.01
17	ಯು. ಪಿ. ಇನಾಂದಾರ್	0.35
18	ಪಿ. ಎಂ. ತಟ್ಟಿ	0.06
19	ಎ. ಎನ್. ಬಳ್ಳಾರಿ	0.63
20	ಎಸ್. ಎಚ್. ಜೋಶಿ	0.41

ಮೇಲಿನ ಪಟ್ಟಿಯನ್ನು ಸೂಕ್ಷ್ಮವಾಗಿ ನೋಡಿದಾಗ ಬಾಲಕರ ಸಂಖ್ಯೆ ಬಾಲಕಿಯರ ಸಂಖ್ಯೆಯ ಮೂರರಷ್ಟಿದೆ, ಅಂದರೆ ಬಾಲಕರ ಸಂಖ್ಯೆ 73. ಆದರೆ ಬಾಲಕಿಯರ ಸಂಖ್ಯೆ 20, ಅಂದ ಮೇಲೆ ಈ ಎರಡು ಲಿಂಗಗಳಲ್ಲಿ ಹೋಲಿಕೆ ಸಾಧ್ಯವಿಲ್ಲ ಎನ್ನಬಹುದು. ಏಕೆಂದರೆ ಸಂಖ್ಯೆಯಲ್ಲಿ ಈ ಎರಡುಲಿಂಗಗಳಲ್ಲಿರುವವರು ಸಮ ಇಲ್ಲದೆ ಇರುವುದರಿಂದ, ಸಂಖ್ಯೆಯಲ್ಲಿ ಸಮಾನವಾದ ಎರಡು ಗುಂಪುಗಳನ್ನು ಸ್ತ್ರೀ ಪುರುಷರಲ್ಲಿ ದೊರಕಿಸುವುದು ಕಷ್ಟ. ಆದುದರಿಂದ ಏನು ವಸ್ತು ನಮ್ಮಲ್ಲಿ ಇದೆಯೋ ಅದನ್ನೇ ಆಧಾರವಾಗಿ ತೆಗೆದುಕೊಂಡು ಗಂಡು ಹೆಣ್ಣಿಗಿರುವ ವ್ಯತ್ಯಾಸವನ್ನು ಇಲ್ಲಿ ವಿವೇಚಿಲಾಗುವುದು. ಸಾಮಾನ್ಯವಾಗಿ ಕಾಣುವ ಅತಿ ಮುಖ್ಯವಾದ ಅಂಶಗಳು ಎಂದರೆ 73 ಬಾಲಕರಲ್ಲಿ 14 ಬಾಲಕರ ಸಂಖ್ಯೆಗಳು ಅವರ ಅಭಿರುಚಿಗಳಿಗೂ ಗಳಿಕೆಗಳಿಗೂ ಏನೂ ಸಂಬಂಧ

ಇಲ್ಲವೆಂಬುದನ್ನು ತೋರಿಸುತ್ತವೆ. ಇನ್ನು ಉಳಿದ ಬಾಲಕರ ಸಂಖ್ಯೆಗಳು ಅವರ ಅಭಿರುಚಿಗಳಿಗೂ ಗಳಿಕೆಗಳಿಗೂ ಸಂಬಂಧವಿದೆ ಎಂದು ತೋರಿಸುತ್ತವೆ. 73 ಬಾಲಕರಲ್ಲಿ 20 ಬಾಲಕರ ಸಂಖ್ಯೆಗಳು ಅವರ ಅಭಿರುಚಿಗಳಿಗೂ ಗಳಿಕೆಗಳಿಗೂ ನಿಚ್ಚಳ ಸಂಬಂಧವನ್ನು ತೋರಿಸುತ್ತವೆ. ಇನ್ನು 20 ಬಾಲಕಿಯರಲ್ಲಿ ಕೇವಲ 3 ಬಾಲಕಿಯರಲ್ಲಿ ಸಂಖ್ಯೆಗಳು ಅವರ ಅಭಿರುಚಿಗಳಿಗೆ ಮತ್ತು ಗಳಿಕೆಗಳಿಗೆ ಯಾವ ವಿಧವಾದ ಸಂಬಂಧವಿಲ್ಲವೆಂಬುದನ್ನು ತೋರಿಸುತ್ತವೆ. ಬಾಲಕಿಯರ ದೃಷ್ಟಿಯಿಂದ ನೋಡಿದರೆ ಬಾಲಕರ ನೈಸರ್ಗಿಕ ಸಂಬಂಧ ಅವರ ಸಂಖ್ಯೆಗೆ ಜಾಸ್ತಿಯಾಯಿತು ಎನಿಸುತ್ತದೆ. ಇನ್ನು 20 ಬಾಲಕಿಯರಲ್ಲಿ 4 ಬಾಲಕಿಯರ ಸಂಖ್ಯೆಗಳು ಅವರ ಅಭಿರುಚಿಗಳಿಗೂ ಗಳಿಕೆಗಳಿಗೂ ನಿಚ್ಚಳ ಸಂಬಂಧವಿದೆ ಎಂದು ತೋರಿಸುತ್ತವೆ. ಬಾಲಕರ ದೃಷ್ಟಿಯಿಂದ ವಿಚಾರ ಮಾಡಿದ್ದೇ ಆದರೆ ಈ ನಿಚ್ಚಳ ಸಂಬಂಧ ಬಾಲಕಿಯರಲ್ಲಿ ಸ್ವಲ್ಪ ಕಡಿಮೆಯಾಯಿತು ಎನಿಸುತ್ತದೆ (ಅಂದರೆ ಅವರ ಸಂಖ್ಯೆಯನ್ನೇ ಮೂಲವಾಗಿ ಇಟ್ಟುಕೊಂಡರೂ). ಒಟ್ಟಿನಲ್ಲಿ ಬಾಲಕ ಬಾಲಕಿಯರಲ್ಲಿ ಅಭಿರುಚಿಗಳಿಗೂ ಗಳಿಕೆಗಳಿಗೂ ವಿಶೇಷ ವ್ಯತ್ಯಾಸ ಕಂಡುಬರುವುದಿಲ್ಲ,

ಪಟ್ಟಿ 5

ವರಮಾನ ವ್ಯತ್ಯಾಸ

ಕೆಳಗೆ ಕೊಟ್ಟಿರುವ ಪಟ್ಟಿ ಕಡಿಮೆ ವರಮಾನ ಮತ್ತು ಹೆಚ್ಚು ವರಮಾನ ಬರುವ ವಿದ್ಯಾರ್ಥಿಗಳ ಅಭಿರುಚಿಗಳಿಗೂ ಗಳಿಕೆಗಳಿಗೂ ಇರುವ ಸಂಬಂಧದಲ್ಲಿ ವ್ಯತ್ಯಾಸವನ್ನು ತೋರಿಸುತ್ತದೆ.

ಕಡಮೆ ವರಮಾನ : ರೂ. 300–ರೂ. 2,000

	ಹೆಸರು	ಸಂಬಂಧ
1	ಎಂ. ಎಸ್. ಕುಲಕರ್ಣಿ	0.55
2	ಬಿ. ಬಿ. ಕುಲಕರ್ಣಿ	0.18
3	ಎಂ. ಎಸ್. ಅಗ್ರೆ	0.67
4	ಎ. ಎಸ್. ಅಮ್ಮಿನಭಾವಿ	–0.3
5	ಎಂ. ಆರ್. ಬುರ್ಲಿ	0·74
6	ಎಸ್. ಟಿ. ಸವಣೂರ್	0.59
7	ಸಿ. ಎಸ್. ಶೇಬಣ್ಣವರ್	–0.99
8	ವಿ, ಹೆಚ್. ಶಿಗ್ಗಾಂವಿ	0.67
9	ಎಂ. ಟೇಟಂಬಿ	0.12
10	ಎಸ್. ಎಸ್. ಪತ್ತಾರ	–0.1
11	ವಿ. ಬಿ. ಹಸತಕರ	0.11
12	ಎ. ಆರ್. ಅರಳಿಮಟ್ಟಿ	0.77
13	ಟಿ. ಹೆಚ್. ತರಲಗಟ್ಟಿ	0.66
14	ಆರ್. ಆರ್. ಜಾದವ	0.69
15	ಆರ್. ಎಚ್. ಕೊಪ್ಪದ	0.37
16	ಎಸ್. ಜಿ. ತಾವರಗೇರಿ	0.34
17	ಕೆ. ಎಸ್. ಕಮ್ಮಾರ	0.45

18	ಜಿ. ಎಂ. ಆಚಾರಿ	0.85
19	ಬಿ. ಬಿ. ಬಿನಕಪ್ಪನವರ	0.29
20	ಎಂ. ಜಿ. ಉಪ್ಪೆ	–0.05
21	ಎಸ್. ಎಸ್. ಉಡಪ	0.09
22	ಎಂ. ವಿ. ಪೈ	–0.5
23	ಆರ್. ವಿ. ಕುಲಕರ್ಣಿ	0.38
24	ಬಿ. ಬಿ. ಜಹಗೀರದಾರ್	0.57
25	ಎಸ್. ಆರ್. ಪರ್ವತಿಕರ್	0.6
26	ಎ. ಎಸ್. ಕಮನಹಳ್ಳಿ	0.03
27	ವಿ. ಆರ್. ನಾಗನೂರ	0.05
28	ಕೆ. ಹೆಚ್. ಬಾಗೆವಾಡಿ	0.13
29	ಡಿ. ಆರ್. ಪರ್ವತೀಕರ್	0.52
30	ವಿ. ಎಸ್. ಗಲಗಲಿ	0.35
31	ಸಿ. ಎಸ್. ಕುಲಕರ್ಣಿ	0.192
32	ಆರ್. ವ್ಹಿ. ಅತ್ತೂರ	0.65
33	ಪಿ. ಕೆ. ಜೋಶಿ	0.22
34	ಎಂ. ಎಸ್. ಕುಲಕರ್ಣಿ	0.65
35	ಆರ್. ಕೆ. ಜೋಶಿ	0.12
36	ಕೆ. ಎನ್. ಜೋಶಿ	0.04
37	ಎಸ್. ಎನ್. ಪರಾಂಡೆ	0.25
38	ಎಂ. ಕೆ. ಶೂರ್ಪಾಲಿ	–0.12
39	ಎಸ್. ವಿ. ಜೋಶಿ	0.5
40	ಜಿ. ಎಸ್. ಶ್ರೀನಿವಾಸನ್	0.792
41	ಎಚ್. ಎಸ್. ಜ್ಯೋತಿ	–0.3
42	ಡಿ. ಎನ್. ರಾವ್	0.92
43	ಎಸ್. ಟಿ. ಪಾಟೀಲ	0.54
44	ಎಂ. ಎನ್. ಕುಲಕರ್ಣಿ	–0.12
45	ಎಸ್. ಟಿ. ಹಡಲಗೇರಿ	0.62
46	ಆರ್. ವಿ. ಜೋಶಿ	–0.4
47	ಆ. ಬಿ. ಕುಲಕರ್ಣಿ	0.44
48	ಎಂ. ಜಿ. ಹಂದಿಗೋಲ್	0.05
49	ಆರ್. ಎಚ್. ಕುಲಕರ್ಣಿ	0.43

ಹೆಚ್ಚು ವರಮಾನ : ರೂ 2,000 ಮತ್ತು ಹೆಚ್ಚು

1	ವಿ. ಕೆ. ಕೊಡಗಲಿ	0.15
2	ಪಿ. ಎಂ. ಶೆಟ್ಟಿ	–0.06
3	ಎಸ್. ಎಸ್. ಪಾಟೀಲ	0.29
4	ಎಸ್. ಎಂ. ದೇವಿದಾಸ್	0.5

5	ಪಿ. ಜೆ. ಗುಂಜಾಳ	0.45
6	ಪಿ. ಎನ್. ಬಡಗೇರಿ	0.31
7	ಎಂ, ಆರ್. ಬೇಂದ್ರೆ	-0,4
8	ಜೆ, ಎಸ್, ಹುಯಲಗೊಳ್	0.43
9	ಡಿ. ಎನ್. ಪುರಾಣಿಕ	0,32
10	ಎ. ಆರ್, ದೇಸಾಯಿ	0.13
11	ಪಿ. ಜಿ. ನರಸಾಪುರ	0.74
12	ಎಸ್. ಆರ್. ಸವಣೂರ	0.68
13	ವಿ. ಎಂ. ಪಾಟೀಲ	0.21
14	ಯು. ಪಿ. ಇನಾಂದಾರ	0.35
15	ಎ. ಎನ್. ಬಳ್ಳಾರಿ	0.63
16	ಎಸ್. ಹೆಚ್. ಜೋಶಿ	0.41
17	ಎಚ್. ಎಸ್. ಅಮ್ಮಣ್ಣಾ	0,49
18	ಎಸ್. ಎಸ್. ಹಿರೇಮಠ	0.19
19	ಎಚ್. ಎಸ್. ಪಾಟೀಲ	-0.1
20	ಜಿ. ಪಿ. ಮೂರ್ಷಲೀನ್	0.36
21	ಜಿ. ಎನ್. ಬಿರೇದಾರ್	0.87
22	ಆರ್. ಎಲ್. ಬೀಳಗಿ	0.71
23	ಕೆ. ಎಲ್. ಪಾಟೀಲ	0.19
24	ಸಿ. ಎಸ್. ಮಾಳವಾಡ	-0.05
25	ಬಿ. ಪಿ. ಬೆಂಡಿಗೇರಿ	-0.04
26	ವಿ. ಪಿ, ಪುತ್ರಾವಳಿ	0.5
27	ಎ. ಎಸ್. ಸಕೇಶಚಂದ್ರ	0,52
28	ಎ. ಎ. ಸಿದ್ಧಾಂತಿ	0.7
29	ಎನ್. ಎಲ್. ಕುಲಕರ್ಣಿ	0.33
30	ಎ. ಬಿ. ಕಟ್ಟಿ	0 27
31	ಎಸ್. ಡಿ. ಗುಜ್ಜೀಕರ್	-0.01
32	ಎಸ್. ಜಿ, ಹುಯಿಲಗೊಳ್	0.25
33	ಎ. ಎನ್. ದೇಶಪಾಂಡೆ	0.52
34	ಆರ್: ಎಸ್. ಬಾಗಲ	0,84
35	ಆರ್. ಎನ್. ಕುಲಕರ್ಣಿ	0.31
36	ವಿ. ಕೆ. ಪ್ರಭು	0.65
37	ಎಂ. ಎಸ್. ಎಂ.	0.55
38	ಆ, ವಿ. ಹೊಸೂರ	0.55
39	ಎಂ. ಪಿ. ಕಿತ್ತೂರ	0,09
40	ಕೆ. ಎಲ್. ಶೇಷಶಾಯಿ	0.65

ಮೇಲಿನ ಪಟ್ಟಿ ಕಡಮೆ ಆದಾಯ ಹಾಗೂ ಹೆಚ್ಚು ಆದಾಯ ಉಳ್ಳ ವಿದ್ಯಾರ್ಥಿಗಳ ಅಭಿರುಚಿ

ಗಳು ಮತ್ತು ಗಳಿಕೆಗಳಿಗೆ ಇರುವ ಸಂಬಂಧದ ವ್ಯತ್ಯಾಸವನ್ನು ಸೂಚಿಸುತ್ತದೆ. ಕಡಮೆ ಆದಾಯವುಳ್ಳ ವಿದ್ಯಾರ್ಥಿಗಳ ಸಂಖ್ಯೆ 49. ಹೆಚ್ಚು ಆದಾಯವುಳ್ಳ ವಿದ್ಯಾರ್ಥಿಗಳ ಸಂಖ್ಯೆ 44. 4 ವಿದ್ಯಾರ್ಥಿಗಳು ತಮ್ಮ ಪಾಲಕರ ವರಮಾನವನ್ನು ಪ್ರಶ್ನಾವಳಿಯಲ್ಲಿ ತಿಳಿಸಿಲ್ಲವಾದರಿಂದ, ಅವರ ಸಂಖ್ಯೆಗಳನ್ನು ಈ ಪಟ್ಟಿಯಲ್ಲಿ ಸೇರಿಸಿಲ್ಲ. ಈ ಎರಡು ಗುಂಪುಗಳಿಗೆ ಸಂಖ್ಯೆಯಲ್ಲಿ ವಿಶೇಷ ವ್ಯತ್ಯಾಸವಿಲ್ಲ. ಆದುದರಿಂದ ಈ ಎರಡು ಗುಂಪುಗಳಿಗಿರುವ ಸಾಮ್ಯ ವೈಷಮ್ಯವನ್ನು ತೌಲನಿಕ ದೃಷ್ಟಿಯಿಂದ ವಿಚಾರ ಮಾಡಬಹುದು. ಕಡಮೆ ಆದಾಯವುಳ್ಳ ಒಟ್ಟು 49 ವಿದ್ಯಾರ್ಥಿಗಳಲ್ಲಿ ಹತ್ತು ವಿದ್ಯಾರ್ಥಿಗಳ ಸಂಖ್ಯೆಗಳು ಅವರ ಅಭಿರುಚಿಗಳಿಗೂ ಗಳಿಕೆಗಳಿಗೂ ಯಾವ ವಿಧವಾದ ಸಂಬಂಧ ಇಲ್ಲವೆಂದು ಸೂಚಿಸುತ್ತವೆ. 49 ವಿದ್ಯಾರ್ಥಿಗಳಲ್ಲಿ 14 ವಿದ್ಯಾರ್ಥಿಗಳ ಸಂಖ್ಯೆಗಳು ಅವರ ಅಭಿರುಚಿಗಳಿಗೂ ಗಳಿಕೆಗಳಿಗೂ ನಿಚ್ಚಳ ಸಂಬಂಧವಿದೆ ಎಂಬುದನ್ನು ಎತ್ತಿ ತೋರಿಸುತ್ತವೆ. ಇನ್ನು ಉಳಿದ ವಿದ್ಯಾರ್ಥಿಗಳ ಅಭಿರುಚಿಗಳಿಗೂ ಗಳಿಕೆಗಳಿಗೂ ಯಥಾತಥಾ ಸಂಬಂಧವಿದೆ. ಇನ್ನು ಹೆಚ್ಚು ವರಮಾನವುಳ್ಳ 40 ವಿದ್ಯಾರ್ಥಿಗಳಲ್ಲಿ 6 ವಿದ್ಯಾರ್ಥಿಗಳ ಸಂಖ್ಯೆಗಳು ಅವರ ಅಭಿರುಚಿಗಳಿಗೆ ಮತ್ತು ಗಳಿಕೆಗಳಿಗೆ ನೈಷೇಧಿಕ ಸಂಬಂಧವಿದೆ ಎಂಬುದನ್ನು ಸೂಚಿಸುತ್ತದೆ. 40 ವಿದ್ಯಾರ್ಥಿಗಳಲ್ಲಿ 13 ವಿದ್ಯಾರ್ಥಿಗಳ ಸಂಖ್ಯೆಗಳು ಅಭಿರುಚಿಗಳಿಗೆ ಮತ್ತು ಗಳಿಕೆಗಳಿಗೆ ನಿಚ್ಚಳ ಸಂಬಂಧವನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಈ ಎರಡು ವರಮಾನ ಗುಂಪುಗಳಿಗೆ ನೈಷೇಧಿಕ ಸಂಬಂಧದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ನಿಚ್ಚಳ ಸಂಬಂಧದಲ್ಲಿ ವ್ಯತ್ಯಾಸ ಅಷ್ಟು ಗಮನಾರ್ಹವಲ್ಲ. ಅಂದ ಮೇಲೆ ಕಡಿಮೆ ಮತ್ತು ಹೆಚ್ಚು ವರಮಾನವುಳ್ಳ ವಿದ್ಯಾರ್ಥಿಗಳ ಅಭಿರುಚಿಗಳಿಗೆ ಮತ್ತು ಗಳಿಕೆಗಳಿಗೆ ಸಂಬಂಧದಲ್ಲಿ ಗಮನಾರ್ಹವಾದ ವ್ಯತ್ಯಾಸ ಕಂಡುಬರುವುದಿಲ್ಲ

ಫಲಿತಾಂಶ

ಈ ಸಂಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಈ ರೀತಿ ಸಂಗ್ರಹಿಸಬಹುದಾಗಿದೆ :

1 ಶೈಕ್ಷಣಿಕ ಅಭಿರುಚಿ ಮತ್ತು ಗಳಿಕೆಗೆ ಸಂಬಂಧವಿದೆ ಎಂಬುದನ್ನು ಈ ಸಂಶೋಧನೆ ಸೂಚಿಸುತ್ತದೆ.

2 ವಿಜ್ಞಾನ ಮತ್ತು ಕಲಾ ವಿಭಾಗದ ವಿದ್ಯಾರ್ಥಿಗಳ ಅಭಿರುಚಿ ಮತ್ತು ಗಳಿಕೆಗೆ ಇರುವ ಸಂಬಂಧದಲ್ಲಿ ಗಮನಾರ್ಹವಾದ ವ್ಯತ್ಯಾಸವಿಲ್ಲ.

3 ಲಿಂಗ, ಜಾತಿ, ವರಮಾನ ಇವು ಅಭಿರುಚಿ ಮತ್ತು ಗಳಿಕೆಗೆ ಇರುವ ಸಂಬಂಧವನ್ನು ನಿರ್ಧರಿಸುವಲ್ಲಿ ಗಮನಾರ್ಹವಾದ ಪ್ರಭಾವವನ್ನು ಬೀರಿದಂತೆ ತೋರುವುದಿಲ್ಲ,

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನ ಸಮಸ್ಯೆಗಳೊಡನೆ ವ್ಯವಹರಿಸುವಾಗ ಸಾಪೇಕ್ಷವಾಗಿ ವೈವಿಧ್ಯಪೂರ್ಣವಾಗಿ ವರ್ತಿಸುತ್ತಾನಲ್ಲದೆ ಇತರರಿಂದ ಒಂದಲ್ಲ ಒಂದು ರೀತಿಯಲ್ಲಿ ಭಿನ್ನನಾಗಿರುತ್ತಾನೆ. ಹೀಗೆ ವ್ಯಕ್ತಿಯಲ್ಲಿಯೇ ಮತ್ತು ವ್ಯಕ್ತಿವ್ಯಕ್ತಿಗಳ ನಡುವೆ ಕಂಡುಬರುವ ವಿಭಿನ್ನ ವ್ಯವಹಾರಗಳಿಗೆ ಅವರಲ್ಲಿ ರೂಪುಗೊಂಡಿರುವ ಶಕ್ತಿಸಾಮರ್ಥ್ಯಗಳೇ ಕಾರಣವೆಂಬುದು ಅನುಭವಿಕ ಸತ್ಯ. ಈ ಶಕ್ತಿಸಾಮರ್ಥ್ಯಗಳು ಜೈವಿಕ ಮತ್ತು ಮನೋಸಾಮಾಜಿಕ ಎಂಬುದಾಗಿ ಎರಡು ವಿಶಾಲ ವರ್ಗಗಳಿಗೆ ಸೇರುತ್ತವೆ. ಜೈವಿಕ ಶಕ್ತಿಸಾಮರ್ಥ್ಯಗಳಿಗೆ ಪ್ರಜನನಾತ್ಮಕ ಆಧಾರವಿದೆಯೆಂಬುದರ ಬಗ್ಗೆ ಯಾರಿಗೂ ಶಂಕೆಯಿಲ್ಲ. ಹೀಗಿದ್ದರೂ ಅವುಗಳೂ ಸಾಪೇಕ್ಷವಾಗಿ ಪ್ರತ್ಯಾವರಣದ ಪ್ರಭಾವಗಳಿಗೆ ಒಳಗಾಗುವುದನ್ನು ನಾವು ನೋಡಿದ್ದೇವೆ. ಇಂತಹ ಶಕ್ತಿಸಾಮರ್ಥ್ಯಗಳ ಅಳತೆಗಾಗಿ ಶಾರೀರಿಕ ಮತ್ತು ಭೌತಿಕ ಮಾಪನಗಳನ್ನು ರೂಪಿಸಿ, ತನ್ಮೂಲಕ ಸಾಪೇಕ್ಷವಾಗಿ ನಿಕರವಾದ ಮಾಹಿತಿಯನ್ನು ಪಡೆಯಲು ನಾವು ಪರಿಣತರಾಗಿದ್ದೇವೆ. ಉದಾಹರಣೆಗೆ. ವ್ಯಕ್ತಿಯ ಎತ್ತರ ಮತ್ತು ತೂಕಗಳ ಬಗ್ಗೆ ನಾವು ಇಂದು ನಿಷ್ಕೃಷ್ಟವಾದ ಮಾಹಿತಿಯನ್ನು ಮೆಟ್ರಿಕ್ ಮಾಪನಗಳಿಂದ ಪಡೆಯುತ್ತೇವೆ.

ಮನೋಸಾಮಾಜಿಕ ಶಕ್ತಿಸಾಮರ್ಥ್ಯಗಳ ಬಗ್ಗೆ ಅಷ್ಟೇ ನಿಷ್ಕೃಷ್ಟವಾಗಿ ನಾವು ಏನನ್ನೂ ಹೇಳಲು ಇನ್ನೂ ಸಮರ್ಥರಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಆದರೆ ಅವುಗಳನ್ನು ಅರ್ಥಮಾಡಿಕೊಳ್ಳಬೇಕೆಂಬ ಪ್ರಯತ್ನದಲ್ಲಿ ನಾವು ಮಹತ್ತ್ವಪೂರ್ಣ ಪ್ರಗತಿಯನ್ನು ಸಾಧಿಸಿದ್ದೇವೆ ಎಂಬುದರ ಬಗ್ಗೆ ಬಹುಶಃ ಎರಡು ಅಭಿಪ್ರಾಯವಿಲ್ಲ.*

—ಎ. ಎಸ್. ಧರಣೇಂದ್ರಯ್ಯ

---

*‘ಸಾಮಾನ್ಯ ಮನೋವಿಜ್ಞಾನ’, ಕನ್ನಡ ಅಧ್ಯಯನ ಸಂಸ್ಥೆ (ಮೈಸೂರು, ೧೯೭೪), ಪು. ೨೫೫–೬

ಬಾಲಕೃಷ್ಣ ಸಾಮಗ ಮಲ್ಪೆ

ವಿಜಯನಗರ ಕಾಲದ ತುಳುನಾಡಿನ ಧಾರ್ಮಿಕ ಪರಿಸ್ಥಿತಿ

ಹಿಂದೂ ಧರ್ಮದ ಪ್ರತಿಷ್ಠೆಯನ್ನು ಎತ್ತಿಹಿಡಿದ ವಿಜಯನಗರದ ಸ್ಥಾಪನೆ ದಕ್ಷಿಣ ಭಾರತದ ಇತಿಹಾಸದಲ್ಲೇ ಮಹತ್ವಪೂರ್ಣ ಅಧ್ಯಾಯ. ತುಳುನಾಡು ಎಂದು ಕರೆಯಲ್ಪಟ್ಟಿರುವ ದಕ್ಷಿಣ ಕನ್ನಡ ಜಿಲ್ಲೆ 133 ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ದಶಕದೊಳಗಾಗಿಯೇ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿತು.[1] ವೈಭವೋಪೇತವಾಗಿ ಮೆರೆದ ವಿಜಯನಗರ ಸಾಮ್ರಾಜ್ಯದಿಂದಾಗಿ ತುಳುನಾಡಿನ ಧಾರ್ಮಿಕ ಜೀವನ ಸಾಕಷ್ಟು ಪ್ರಭಾವಗೊಂಡಿತು. ವಿಜಯನಗರದರಸರ ಧರ್ಮಸಹಿಷ್ಣುತೆ, ಧರ್ಮ ಬೆಂಬಲಗಳಿಂದಾಗಿ ತುಳುನಾಡು ಅದೇ ಹಾದಿಯಲ್ಲಿ ಮುನ್ನಡೆಯುವಂತಾಯಿತು. ಈ ಕಾಲದಲ್ಲಿ ತುಳುನಾಡಿನಲ್ಲಿ ವಾಣಿಜ್ಯ ಅಭಿವೃದ್ಧಿ ಹೊಂದಿ ಜನಸಾಮಾನ್ಯರಲ್ಲಿ ಧನ ಸಂಪತ್ತುಗಳು ಬೆಳೆದುವು. ಇದು ಧಾರ್ಮಿಕ ಜೀವನದಲ್ಲಿ ಹೆಚ್ಚಿನ ಪ್ರಗತಿ ಕಾಣಲು ಕಾರಣವಾಯಿತು. ಹಾಗಾಗಿ ಈ ಕಾಲದ ತುಳುನಾಡಿನ ಧಾರ್ಮಿಕ ಪರಿಸ್ಥಿತಿ ಅಧ್ಯಯನಯೋಗ್ಯವಾಗಿದೆ. ಈ ಕಾಲದಲ್ಲಿ ದೊರೆತಿರುವ 400ಕ್ಕೂ ಹೆಚ್ಚಿನ ಶಾಸನಗಳು ವಿಜಯನಗರ ಕಾಲದ ತುಳುನಾಡಿನ ಧಾರ್ಮಿಕ ಪರಿಸ್ಥಿತಿಯ ಮೇಲೆ ಬೆಳಕು ಚೀರಿವೆ.

ವಿಜಯನಗರಪೂರ್ವ ಕಾಲದಲ್ಲಿ ಶೈವಧರ್ಮ ತುಳುನಾಡ ಪ್ರಧಾನ ಧರ್ಮವಾಗಿತ್ತು. ತುಳುನ್ನಾಡನ್ನಾಳಿದ ಆಳುಪರು ಮೊದಲಿನಿಂದ ಕೊನೆಯವರೆಗೂ ನಿರಂತರವಾಗಿ ಶೈವಧರ್ಮದ ಅನುಯಾಯಿಗಳೇ ಆಗಿದ್ದರು.[2] ಆದರೆ ವಿಜಯನಗರ ಕಾಲದಲ್ಲಿ ಜೈನ ಮತ್ತು ವೈಷ್ಣವ ಧರ್ಮಗಳು ಶೈವ ಧರ್ಮದಷ್ಟೇ ಪ್ರಾಧಾನ್ಯ ಉಳ್ಳವುಗಳಾಗಿದ್ದುವು. ಈ ಕಾಲದ ಪ್ರಧಾನ ನಗರವಾಗಿದ್ದ ಬಾರಕೂರಿನ ಮೂಲೆ ಮೂಲೆಗೂ ಈ ಮೂರು ಧರ್ಮಗಳಿಗೆ ಸೇರಿದ ದೇವಾಲಯಗಳೂ ಬಸದಿಗಳೂ ಇದ್ದುವು. ಶೈವಧರ್ಮದವರ ಮಾರ್ತಂಡೇಶ್ವರ, ನಾಗೇಶ್ವರ, ಭೈರವದೇವ, ಚಂಡಿಕಾದೇವಿ, ತಂಬುಲಗೆರೆಯ ಸೋಮನಾಥ, ಮಣಿಗಾರ ಕೇರಿಯ ಸೋಮನಾಥ, ಮೂರು ಕೇರಿಯ ಸೋಮನಾಥ ಮತ್ತು ಕೆಲ್ಲಂಗೆರೆಯ ವಿನಾಯಕ ದೇವಸ್ಥಾನಗಳೂ ವೈಷ್ಣವರ ಗೋಪಿನಾಥ, ನಾರಾಯಣ ಮತ್ತು ವಿಷ್ಣುಮೂರ್ತಿ ದೇವಸ್ಥಾನಗಳೂ ಜೈನಮತದವರ ಪಾರ್ಶ್ವನಾಥ, ಆದಿಪರಮೇಶ್ವರ ಮತ್ತು ಮಾಣಿಕ್ಯ ಬಸದಿಗಳೂ ಬಾರಕೂರಿನಲ್ಲಿ ದೊರೆತಿರುವ ವಿಜಯನಗರ ಶಾಸನಗಳಲ್ಲಿ ಉಕ್ತವಾಗಿವೆ.[3]

ಗಣೇಶಾರಾಧನೆ ಈ ಕಾಲದಲ್ಲಿ ಪ್ರಾಬಲ್ಯದಲ್ಲಿತ್ತು. ಹೆಚ್ಚಿನ ಶಾಸನಗಳು ಗಣಪತಿ ಸ್ತುತಿಯೊಂದಿಗೆ ಪ್ರಾರಂಭಗೊಳ್ಳುತ್ತವೆ. ಈ ಕಾಲಕ್ಕೆ ಸಂಬಂಧಿಸಿದ ಅನೇಕ ಗಣೇಶ ವಿಗ್ರಹಗಳು

---

[1] *South Indian Inscriptions,* Vol. VII, No. 179

[2] ಡಾ. ಕೆ.ವಿ. ರಮೇಶ, ತುಳುನಾಡಿನ ಇತಿಹಾಸ (ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರ, ಉಡುಪಿ, 1968) ಪು. ೨೨

[3] ಅದೇ, ಪು. ೧೩೨

ದೊರತಿದ್ದು ಅವು ಸಂಪ್ರದಾಯಭರಿತ ಲಕ್ಷಣಗಳಿಂದೊಡಗೂಡಿ ನಾಗಬಂಧ, ವಾಹನ, ಕರಂಡ, ಮುಕುಟ ಮೊದಲಾದ ವಿಶೇಷ ಲಕ್ಷಣಗಳನ್ನು ಹೊಂದಿವೆ.[4]

ತುಳುನಾಡಲ್ಲಿ ಮುಖ್ಯವಾಗಿ ಈ ಮುಂದಿನ ರೂಪದಲ್ಲಿ ಶಿವಾರಾಧನೆ ಮಾಡಲಾಗುತ್ತಿತ್ತೆನ್ನುವುದು ಡಾ. ಪಿ. ಗುರುರಾಜಭಟ್ಟರ ಅಭಿಪ್ರಾಯ.[5] 1) ಮಹದೇವನ (ಲಿಂಗ ರೀತಿ) ರೂಪದಲ್ಲಿ, 2) ಪಂಚಲಿಂಗನ ರೂಪದಲ್ಲಿ, 3) ಉಮಾ-ಮಹೇಶ್ವರನ ರೂಪದಲ್ಲಿ, 4) ಭೈರವ, ವೀರಭದ್ರ, ಅರ್ಧನಾರೀಶ್ವರರ ರೂಪದಲ್ಲಿ.

ವಿಜಯನಗರ ಕಾಲದವುಗಳೆನ್ನಬಹುದಾದ ಶಿವನ ವಿಗ್ರಹಗಳು ಅನೇಕ ಕಡೆ ದೊರಕಿವೆ. ವೀರಭದ್ರನ ವಿಗ್ರಹಗಳು ಹೊಯ್ಸಳ ಹಾಗೂ ವಿಜಯನಗರ ಶಿಲ್ಪ ಲಕ್ಷಣಗಳನ್ನು ಪ್ರತಿಬಿಂಬಿಸುತ್ತವೆ.

ಕಾಳಾಮುಖ ಪಂಥದ ಪ್ರಭಾವ ಈ ಕಾಲದಲ್ಲಿ ಕಡಿಮೆಯಾಗಿರಲಿಲ್ಲ. ಹಾಗಾಗಿಯೇ ಶಿವನನ್ನು ಕೋಟೀಶ್ವರನೆಂಬುದಾಗಿ ಪೂಜಿಸುವ ಪದ್ಧತಿ ಬೆಳೆದು ಬಂತು. ಶಾಸನದ ಶಾಪೋಕ್ತಿಗಳಿಗೆ ಸಂಬಂಧಿಸಿದ ನುಡಿಗಳಲ್ಲಿ ಕೋಟೀಶ್ವರ, ಕೋಟಿನಾಥ, ಕೋಟೇಶ್ವರ ಹೆಸರುಗಳನ್ನು ಕಾಣಬಹುದು.[6] ೧೪೩೦ರ ಪ್ರತಾಪರಾಯನ ಕಾಲದ ಶಾಸನದ ಪ್ರಕಾರ ಕಾಳಾಮುಖ ಗುರುವಾದ ಕ್ರಿಯಾಶಕ್ತಿ ದೇವ ಹತ್ತ್ಯಾರಿಗೆ ಆಗಮಿಸಿದ್ದಾಗ ಅಣ್ಣಪ್ಪನೆಂಬವನು ಹತ್ತ್ಯಾರಿನ ಮಹಾದೇವರಿಗೆ ಅನೇಕ ವಿಧದಲ್ಲಿ ದಾನ ಮಾಡಿದ.[7] ೧೪೬೦ರ ಕೋಟೀಶ್ವರ ಶಾಸನ ತುಳುರಾಜ್ಯದ ಪ್ರಮುಖ ಹಬ್ಬವಾದ 'ತುಡಿಯ, ಹಬ್ಬ'ದ ಕುರಿತು ತಿಳಿಸುತ್ತಾ ಕೋಟೀಶ್ವರದ ಮಹತ್ತ್ವವನ್ನು ಚಿತ್ರಿಸಿದೆ.[8]

ವೀರಶೈವರ ಪ್ರಭಾವದಿಂದಾಗಿ ಶಿವನನ್ನು ಮಹಾಲಿಂಗದೇವನೆಂದು ಪೂಜಿಸುವ ಪದ್ಧತಿ ಈ ಕಾಲದಲ್ಲಿ ಬೆಳೆದು ಬಂತು. ಅನೇಕ ದೇವಸ್ಥಾನಗಳು ಮಹಾಲಿಂಗ ದೇವಸ್ಥಾನಗಳೆಂದು ಕರೆಯಲ್ಪಟ್ಟುವು, ಮಹಾದೇವನೆಂದು ಕರೆಸಿಕೊಳ್ಳುತ್ತಿದ್ದ[9] ಶಿವ, ವೀರಶೈವ ಪ್ರಭಾವದಿಂದಾಗಿ ೧೪೬೩ರ ಸುಮಾರಿಗೆ ಮಹಾಲಿಂಗನೆಂದು[10] ಪ್ರಖ್ಯಾತಿಗೊಳ್ಳತೊಡಗಿದ. ೧೬೭೨ರ ಕೋಟೇಶ್ವರ ಶಾಸನದಲ್ಲಿ 'ಕೋಟೇಶ್ವರ ದೇವರ ಸನ್ನಿಧಿಯಲು ಕಟಿಯ ಹಬ್ಬದಲು ಉಭಯ ಜಂಗಮರಿಗೆ ಆರೋಗಣೆಯ ಧರ್ಮಕೆ ಕೊಂಡ ಬಾಳು' ಎಂಬುದಾಗಿ ಜಂಗಮರ ಮಹತ್ವ ಕುರಿತು ಬರೆದಿದೆ[11]. ಪಂಚಲಿಂಗೇಶ್ವರನ ರೂಪದಲ್ಲಿ ಶಿವನನ್ನು ಪೂಜಿಸುವುದು ಸಾಮಾನ್ಯವಾಗಿತ್ತು. ಭೂತನಾಥ ಎಂಬುದಾಗಿಯೂ ಶಿವನನ್ನಾರಧಿಸುತ್ತಿದ್ದರು.

ಶೈವಧರ್ಮದ ಒಂದು ರೂಪವಾದ ನಾಥ ಪಂಥವೂ ಈ ಕಾಲದಲ್ಲಿತ್ತು. ಮಂಜುನಾಥನನ್ನು ಪೂಜಿಸುವ ದೇವಸ್ಥಾನಗಳು ಕದಿರೆ, ಬಂಟ್ವಾಳ,ಮೂಡ, ಬಂಗರ, ಕುದುರು ಮೊದಲಾದೆಡೆ ಇದ್ದುವು. ಬಾರಕೂರು, ಬಸರೂರುಗಳೂ ನಾಥ ಪಂಥದ ಪ್ರಭಾವಕ್ಕೊಳಗಾಗಿದ್ದುವು. ಕೋಟೇಶ್ವರ ದೇವಸ್ಥಾನಕ್ಕೆ 'ವೀರಬುಕ್ಕಣ ರಾಜ್ಯವಾಳುವಾಗ ನಂದಿನಾಥ, ಭೃಂಗಿನಾಥ, ವೀರಭದ್ರದೇವ ಮತ್ತು

---

[4] Dr. Gururaja Bhatt : *Studies in Tuluva History and culture* (Kallianpur 1975), P 280

[5] *Ibid.*, P. 283

[6] *I.I.S.* Vol. X. Part. II, Nos 407, 430, 435 etc.

[7] *Annual Report of Indian Epigraphy*, No. 344, 1930-31

[8] *S.I.I.* Vol IX, Part II No. 431

[9] *A. R.* No. 531, 1928-29

[10] *Ibid.*, No. 513, 1928-29

[11] *S.I.I.* Vol. X, Part . No. 415

ಗಣಕುಮಾರ ಹೆಗಡೆ ದಾನ ಮಾಡಿದ್ದರು.[12] ಕದ್ರಿಯ ಅನುಪಮನಾಥ ಒಡೆಯ ಮಠಕ್ಕೆ ಗೋರಕನಾಥನನ್ನು ಪೂಜಿಸಲು ಸುಬುದ್ಧಿನಾಥ ಒಡೆಯ ಭೂಮಿ ದಾನ ನೀಡಿದ್ದ.[13] ಬಸುರೆಪುರದ ನಖರೇಶ್ವರ ದೇವರಿಗೆ ಮೌನಯೋಗಿಯೋರ್ವ ಭೂಮಿದಾನ ನೀಡಿದುದನ್ನು ಬಸೂರೂರಿನ ಶಾಸನವೊಂದು ಉಲ್ಲೇಖಿಸಿದೆ.[14] ಈ ಪಂಥದ ಮತ್ಸ್ಯೇಂದ್ರನಾಥ, ಗೋರಕನಾಥ ಮೊದಲಾದ ವಿಗ್ರಹಗಳು ದೊರತಿವೆ.

ಶಕ್ತಿ ಅಥವಾ ದೇವಿಯರನ್ನು ಪೂಜಿಸುವುದು ಪ್ರಮುಖ ಅಂಗವಾಗಿತ್ತು. ಈ ಕಾಲದ ಶಾಸನಗಳಲ್ಲಿ ಕಂಡುಬರುವ ಮುಖ್ಯ ದೇವಿಯರೆಂದರೆ ಭಗವತಿ, ದುರ್ಗಾಭಗವತಿ, ದುರ್ಗಾಪರಮೇಶ್ವರಿ, ಹಿಂಗುಳಾದೇವಿ. ಹೊಳಲದೇವಿ, ಮತ್ತು ಮುಕಾಂಬಿಕಾ.[15] ತುಳುನಾಡಿನ ನಾನಾ ಕಡೆಗಳಲ್ಲಿ ಈ ದೇವಿಯರಿಗೆ ಸಂಬಧಿಸಿದ ದೇವಸ್ಥಾನಗಳಿದ್ದುವು.

೧೩ನೆಯ ಶತಮಾನದ ಉತ್ತರಾರ್ಧದಲ್ಲಿ ಬಾಳಿ ಬೆಳಗಿದ ತುಳುನಾಡಿನ ಅವತಾರ ಪುರುಷ ದ್ವೈತಮತದ ಸ್ಥಾಪನಾಚಾರ್ಯರಾದ ಮಧ್ವಾಚಾರ್ಯರ (೧೨೩೮-೧೩೧೭) ಉಪದೇಶಗಳಿಂದ ತುಳುನಾಡಿನಲ್ಲಿ ವೈಷ್ಣವ ಧರ್ಮ ಹೊಸ ರೂಪ ತಾಳಿತು. ತುಳು ನಾಡಿನ ಶಾಸನಗಳಿಂದ ವೈಷ್ಣವ ಧರ್ಮದ ಬೆಳವಣಿಗೆಯ ಕುರಿತು ಹೆಚ್ಚೇನೂ ತಿಳಿದುಬರುವುದಿಲ್ಲ. ಮಾಧ್ವ ಸಂಪ್ರದಾಯಲ್ಲಿ ಕೇಂದ್ರಸ್ಥಾನಪಡೆಸಿರುವ ಕೃಷ್ಣಮಠ ಮೊಟ್ಟಮೊದಲಿಗೆ ಕ್ರಿ.ಶ. ೧೩೬೬–೬೭ರ ಸಮಯಕ್ಕೆ ಶಾಸನಗಳದ ಕಾಣಿಸಿಕೊಳ್ಳುತ್ತದೆ.[16] ಕುಂಬಳೆಯ ಅನಂತಪುರದ ಅನಂತಪದ್ಮನಾಭ ದೇವಾಲಯ 10ನೆಯ ಶತಮಾನದ ಸುಮಾರಿಗೆ ವೈಷ್ಣವ ಪಂಥದ ಮುಖ್ಯ ಸ್ಥಳವಾಗಿತ್ತು. ಕುಂದಾಪುರದ ಮರವಂತೆಯ ವರಾಹಸ್ವಾಮಿ ದೇವಾಲಯ ಆಗಲೇ ಪ್ರಾಮುಖ್ಯ ಪಡೆದಿತ್ತು. ಅರ್ಥಪುರದ (ಅತ್ತಾವರ) ಚಕ್ರಪಾಣಿ ದೇವಸ್ಥಾನ ಸಾಕಷ್ಟು ಪ್ರಸಿದ್ಧಿ ಪಡೆದಿರುವುದನ್ನು ಅನೇಕ ಶಾಸನಗಳು ದೃಢಪಡಿಸಿವೆ. ೧೪೪೦ರ ಶಾಸನವೊಂದು ಮಂಗಳೂರಿನ ಕರಣಿಕನೋರ್ವ ಧರ್ಮ ಅರ್ಥ ಕಾಮ ಮೋಕ್ಷ ಪಡೆಯಲು ಶ್ರೀಹರಿಗೆ ದಾನವಿತ್ತುದನ್ನು ತಿಳಿಸುತ್ತದಲ್ಲದೆ ಅತ್ತಾವರಕ್ಕಿರುವ ವೈಷ್ಣವ ಮಹತ್ತ್ವವನ್ನು ಪರಿಚಯಿಸುತ್ತದೆ.[17] ಬ್ರಹ್ಮಾವರದ ಶಾಸನದಲ್ಲಿ ಮೊದಲ ಬಾರಿಗೆ ಗೋಪಿನಾಥ ದೇವರ ಉಲ್ಲೇಖವಿದೆ.[18] ವಿಷ್ಣುವನ್ನು ಜನಾರ್ಧನ, ನಾರಾಯಣ, ಅನಂತ ಮೊದಲಾಗಿಯೂ ಪೂಜಿಸಲಾಗುತ್ತಿತ್ತು. ವಿಜಯನಗರ ಕಾಲಕ್ಕೆ ಸಂಬಂಧಿಸಿದ ಅನೇಕ ರೀತಿಯ ವಿಷ್ಣುವಿನ ವಿಗ್ರಹಗಳನ್ನು ಡಾ. ಪಿ. ಗುರುರಾಜಭಟ್ಟರು ಪತ್ತೆ ಹಚ್ಚಿದ್ದಾರೆ.[19]

ಪರಶುರಾಮನನ್ನು ತುಳುನಾಡಿನಲ್ಲಿ ಪೂಜಿಸುತ್ತಿದ್ದರೆನ್ನುವುದಕ್ಕೆ ಸಾಕಷ್ಟು ಆಧಾರವಿಲ್ಲದಿದ್ದರೂ ಶಾಸನದ ಕೊನೆಯಲ್ಲಿ ಪರಶುರಾಮನ ಉಲ್ಲೇಖವಿರುವುದರಿಂದ ಪರಶುರಾಮ ಪ್ರಮುಖ ದೇವತೆಗಳಲ್ಲೊಬ್ಬನಾಗಿದ್ದನೆಂಬುದಾಗಿ ಊಹಿಸಬಹುದು. ಸೂರ್ಯ ಹಾಗೂ ಸೂರ್ಯನಾರಾಯಣನನ್ನು ಆರಾಧಿಸುವುದು ರೂಢಿಯಲ್ಲಿತ್ತು, ಕುಂಬಾಶಿ, ನಾರಾವಿ, ಮರೋಳಿ, ಕೆಲ್ಲಪುತ್ತಿಗೆ, ಬೆಳ್ಳ–

---

[12] *Ibid.*

[13] *A. R.* No. 269, 1931-32

[14] *S,I.I.* Vol. X, Part II, No. 393

[15] Dr. K. VI. Ramesh : *A History of Souih Kanara* (Karnatak University, Dharwar, 1970), P. 299

[16] *Ibid.*, P. 300

[17] *S.I.I.*, Vol. No. 187

[18] *A. R.* No. 484., 1928-29

[19] P. Gururaja Bhatt : *op. cit.*, PP 319 ff

ಈ ಊರುಗಳಲ್ಲಿ ಸೂರ್ಯದೇವಾಲಯಗಳಿದ್ದುವು. ಕಾರ್ಕಳದ ನಾರಾವಿ ದೇವಸ್ಥಾನದ ಶಾಸನ ಸೂರ್ಯನಾರಾಯಣ ದೇವರಿಗೆ ದಾನವಿತ್ತುದನ್ನು ಬರೆದಿದೆ.[20] ತಿಮಿರೇಶ್ವರ ರೂಪದಲ್ಲೂ ಸೂರ್ಯನನ್ನಾರಾಧಿಸುತ್ತಿದ್ದರು. ೧೫೩೧ ರಲ್ಲಿ ಬಸರೂರಲ್ಲಿ ಆದಿತ್ಯದೇವನ ಗೌರವಾರ್ಥ ತಿಂಗಳಿಗೆ ಐವರು ಬ್ರಾಹ್ಮಣರಿಗೆ ಸಮಾರಾಧನೆ ಮಾಡಲಾಗುತ್ತಿತ್ತು.[21] ೧೫೭೬ರಲ್ಲಿ ಬಾರಕೂರಿನಲ್ಲಿ ಆದಿತ್ಯ ದೇವನ ಮಠದಲ್ಲಿ ಪ್ರತಿದಿನ ಆರು ಜನ ಬ್ರಾಹ್ಮಣರಿಗೆ ಅನ್ನ ಸಂತರ್ಪಣೆ ನಡೆಯುತ್ತಿತ್ತು.[22] ದೊರೆತ ಆದಿತ್ಯದೇವನ ವಿಗ್ರಹಗಳು ಸೂರ್ಯಾರಾಧನೆಯ ಪ್ರಾಮುಖ್ಯಕ್ಕೆ ಕುರುಹಾಗಿವೆ.

ಶೈವ ಮತ್ತು ವೈಷ್ಣವ ಧರ್ಮಗಳ ಒಂದುಗೂಡುವಿಕೆಯಿಂದಾಗಿ ಶಂಕರನಾರಾಯಣ ದೇವರನ್ನು ಪೂಜಿಸಲು ಪ್ರಾರಂಭವಾಯಿತು. ಲಿಂಗ ರೀತಿಯಲ್ಲೂ ಈ ದೇವರನ್ನು ಪೂಜಿಸುವುದು ಇನ್ನೊಂದು ವಿಶೇಷ. ಈ ದೇವರು ಶಾಸನದಲ್ಲಿ (೧೩೫೭) ಮೊದಲ ಬಾರಿ, ಮಲೆಯ ದಂಡನಾಯಕರು ಬಾರಕೂರ ಕೋಡಂಗಿಯ ಶಂಕರನಾರಾಯಣ ದೇವರಿಗೆ ಕೊಟ್ಟ ಶಿಲಾಶಾಸನ' ಎಂಬುದಾಗಿ ಕಾಣಿಸಿದೆ.[23] ಶಂಕರನಾರಾಯಣ ಸ್ಥಳವೇ ಈ ದೇವರ ಪ್ರಮುಖ ಆರಾಧ್ಯಸ್ಥಳ. 'ತುಳುರಾಜ್ಯಕ್ಕೆ ಪುಣ್ಯಸ್ಥಳವಾದ ಶಂಕರನಾರಾಯಣ ಸ್ವಾಮಿಯ ಸನ್ನಿಧಾನದಲ್ಲಿ......" ಮೊದಲಾಗಿ ಶಾಸನದಲ್ಲಿ ಈ ಸ್ಥಳವನ್ನು ಕೊಂಡಾಡಿದೆ.[24] ಪರಶುರಾಮಕ್ಷೇತ್ರದ ಸಪ್ತಕ್ಷೇತ್ರಗಳಲ್ಲಿ ಶಂಕರನಾರಾಯಣವೂ ಒಂದಾಗಿತ್ತು.[25] ಉಡುಪಿಯ ಪಾಂಡೇಶ್ವರದ ಶಂಕರನಾರಾಯಣ ದೇವಸ್ಥಾನ ಇನ್ನೊಂದು ಪ್ರಮುಖ ಸ್ಥಳವಾಗಿದ್ದು. ಬಾರಕೂರಿನ ಅಧಿಕಾರಿಯಾಗಿದ್ದ ಬಾಚಣ್ಣ ಒಡೆಯನ ಕಾಲದಲ್ಲಿ ಈ ದೇವಸ್ಥಾನಕ್ಕೆ ನೀಡಿದ ದಾನದ ವಿವರ ಕುರಿತು ೧೩೭೮ರ ಶಾಸನವೊಂದು ತಿಳಿಸುತ್ತದೆ.[26] ವಿದ್ಯಾರಣ್ಯ ಶ್ರೀಪಾದರ ಶಿಷ್ಯನಾದ ಶಂಕರನಾರಾಯಣ ಶ್ರೀಪಾದ ತಾನು ಪಡೆದ ಭೂಮಿಯನ್ನು ಬ್ರಹ್ಮಾವರದ ಸಿದುಮಪಳ್ಳಿಯ ಶಂಕರನಾರಾಯಣ ದೇವರಿಗೆ ೧೪೦೩ ರಲ್ಲಿ ದಾನ ನೀಡಿದ.[27] ಶಂಕರನಾರಾಯಣ ದೇವರು ಬಾರಕೂರಿನ ದೇವತೆಗಳಲ್ಲೊಂದು.[28] ಮಲ್ಪೆ ಬಳಿಯ ತೊಡವೂರಿನ ಶಂಕರನಾರಾಯಣ ದೇವಸ್ಥಾನವೂ ಈ ಕಾಲದಲ್ಲಿ ಪ್ರಸಿದ್ಧಿ ಪಡೆದಿತ್ತು.

ಈ ಕಾಲಕ್ಕೆ ಸೇರಿದ ಅನೇಕ ಆಂಜನೇಯ ಗುಡಿಗಳನ್ನು ನಾವು ತುಳುನಾಡಿನಲ್ಲಿ ಕಾಣಬಹುದು. ಆಂಜನೇಯ, ಮುಖ್ಯಪ್ರಾಣ, ಯೋಗಾಂಜನೇಯ ಪ್ರತಿಮೆಗಳು ದೊರೆತಿವೆ.

ಈ ಕಾಲದ ಇನ್ನೊಂದು ದೇವತೆಯೆಂದರೆ ಸುಬ್ರಹ್ಮಣ್ಯ, ಅಥವಾ ಸ್ಕಂದ. ಸುಳ್ಯದ ಬಳಿಯ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಈಗಾಗಲೇ ಖ್ಯಾತಿ ಗಳಿಸಿತ್ತು. 'ಕಡಬ ಸ್ಥಳದ ಕುಕ್ಕೆಯದ' ದೇವರಿಗೆ ಕೊಟ್ಟ ಧರ್ಮ ಶಾಸನ' ಎಂಬುದಾಗಿ ೧೪೦೬ರ ತಾಮ್ರ ಶಾಸನವೊಂದು ತಿಳಿಸು

---

[20] *A. R.* No. 523, 1928-29

[21] *S. I. I.* Vol., IX, Part II, No. 540

[22] *Ibid.,* Vol. VII, No. 389

[23] *Ibid.,* Vol IX, Part II, No. 405

[24] *Ibid.,* No. 674

[25] ಇನ್ನುಳಿದ ಆರು ಕ್ಷೇತ್ರಗಳು ಗೋಕರ್ಣ, ಕೊಲ್ಲೂರು, ಕೋಟೇಶ್ವರ, ಕುಂಭಾಸಿ, ರಜತಪೀಠಪುರ ಮತ್ತು ಸುಬ್ರಹ್ಮಣ್ಯ

[26] *A. R.* No. 609, 1929-30

[27] *A. R.* No. 486, 1928-29

[28] S.I.I. Vol. VII, No. 349

ತ್ತದೆ.[29] ಕುಂದಾಪುರದ ಕಾಂದಾವರ, ಉದ್ಯಾವರದ ಮಾಂಗೋಡುಗಳಲ್ಲೂ ಸ್ಕಂದ ದೇವಾಲಯ ಗಳಿದ್ದುವು. 'ಬೆಳುಂಪಾಡಿಯ ಗ್ರಾಮದಲು ಸುಬ್ರಹ್ಮಣ್ಯದೇವರ ದೇವಸ್ವದಲು' ಎಂಬುದಾಗಿ ೧೪೩೧ರ ಶಾಸನ ಪುತ್ತೂರಿನ ಬೆಳುಂಪಾಡಿಯ ಸುಬ್ರಹ್ಮಣ್ಯದೇವರ ಕುರಿತು ವಿವರಿಸಿದೆ.[30] ಇನ್ನು ಅನೇಕ ಕಡೆ ಸ್ಕಂದನಿಗೆ ಸಂಬಂಧಿಸಿದ ದೇವಾಲಯಗಳಿದ್ದುವು. ಸುಬ್ರಹ್ಮಣ್ಯನನ್ನು (ಸ್ಕಂದ, ಕಾರ್ತಿಕೇಯ) ನಾಗ(ಸರ್ಪ) ರೂಪದಿಂದ ಪೂಜಿಸುವುದು ತುಳುನಾಡಿನ ವಿಶೇಷವಾಗಿದೆ.[31] 'ನಾಗ' ಸಾಮಾನ್ಯ ಆರಾಧ್ಯ ದೇವತೆಯಾಗಿತ್ತು. ನಾಗಮಂಡಲ, ನಾಗಪಂಚಮಿಗಳ ಕುರಿತು ವಿವರಗಳು ಸಿಗುತ್ತವೆ.

ಬ್ರಹ್ಮನನ್ನು ಪೂಜಿಸುವುದು ಸಾಕಷ್ಟು ಪ್ರಾಧಾನ್ಯ ಪಡೆದಿದ್ದು, ಈತನನ್ನು ಪೂಜಿಸುವ 'ಬ್ರಹ್ಮಸ್ಥಾನಗಳು ಅನೇಕ ಕಡೆಗಳಲ್ಲಿ ಕಂಡುಬರುತ್ತವೆ. ಬ್ರಹ್ಮ ತುಳುನಾಡಿನ ಭೂತಗಳ ಸಾಲಿಗೆ ಸೇರಿದವ ನಾಗಿ (ತುಳುವಿನಲ್ಲಿ 'ಬೆರ್ಮೆ') ನಾಗಸರ್ಪವೂ ಇವನೊಂದಿಗಿರುವುದು ತುಳುನಾಡಿನ ವಿಶೇಷ. ನಾಗ ಮತ್ತು ಬ್ರಹ್ಮನಿಗೆ ಹಾಲನ್ನು ಅರ್ಪಿಸುವುದು ವಿಶೇಷವಾಗಿತ್ತು.[32] ಸಂಜೋಡಿಯ ಬ್ರಹ್ಮ. ಬ್ರಹ್ಮರು, ಬ್ರಹ್ಮರಾಲ ಮೊದಲಾದವುಗಳನ್ನು ಶಾಸನಗಳಲ್ಲಿ ಕಾಣಬಹುದು. ೧೫೪೪ರ ಆವರ್ಸೆ ಶಾಸನ 'ಮೂಡಲಹೊಳೆಯ ಗಡಿಯಿಂದ ಪಡುವಲು ತೆಂಕಲು ಕೆರ್ತರ ಹುಟ್ಟಿನ ಬ್ರಹ್ಮ ಸ್ಥಾನದಿಂದ' ಎಂಬುದಾಗಿ 'ಬ್ರಹಸ್ಥಾನ'ದ ಗಡಿರೇಖೆಗಳ ವಿವರಣೆ ನೀಡಿದೆ.[33] ತುಳುನಾಡಿನಲ್ಲಿ ಬ್ರಹ್ಮಾರಾಧನೆ ಈ ಕೆಳಗಿನ ರೀತಿಯಲ್ಲಿತ್ತೆಂದು ಸಂಶೋಧಕರ ಹೇಳಿಕೆ: [34] 1 ಚತುರ್ಮುಖ-ಬ್ರಹ್ಮ 2 ಅವೈದಿಕ-ನಾಗಬ್ರಹ್ಮ. 3 ಭೂತ-ಬ್ರಹ್ಮ. 4 ಜೈನ-ಬ್ರಹ್ಮ.

ತುಳುನಾಡಿನ ಜನಸಾಮಾನ್ಯರಲ್ಲಿ ದೈವದ ಮತ್ತು ದೇವಿಯರ ಪೂಜೆ ಪ್ರಮುಖ ಅಂಶ ವಾಗಿತ್ತು. ಇದು ವಿಷ್ಣು ಮತ್ತು ಶಿವನನ್ನಾರಾಧಿಸುವುದಕ್ಕಿಂತಲೂ ಹೆಚ್ಚು ಜನಪ್ರಿಯವಾದುದು.[35] ಶಾಸನಗಳಲ್ಲಿ ಈ ಕುರಿತು ಹೆಚ್ಚು ವಿವರಗಳು ಲಭ್ಯವಿಲ್ಲದಿದ್ದರೂ ಇದು ಜನಮನ ಸೂರೆಗೊಂಡ ಪ್ರಮುಖ ಅಂಶವೆಂಬುದನ್ನು ಮರೆಯಲಾಗದು. ಪ್ರಮುಖ ಭೂತವಾದ ಬೊಬ್ಬರ್ಯನನ್ನು ಕೆಲವು ಶಾಸನಗಳು ಉಲ್ಲೇಖಿಸಿವೆ. ಬೊಬ್ಬರ್ಯನಿಗೆ ಪ್ರತ್ಯೇಕ ಕೊಟ್ಟಿಗೆ ಮತ್ತು ಭೂಮಿಯೂ ಇದ್ದಿತ್ತು.[36] ಈ ಭೂತಗಳನ್ನು ದೇವಸ್ಥಾನದಲ್ಲಿ (ಗುಡಿ, ಸ್ಥಾನ) ಪೂಜಿಸುತ್ತಿದ್ದರು. ವರ್ಷ ಕ್ಕೊಮ್ಮೆ ನೇಮ, ಬಂಡಿ, ಆಯನ, ಉತ್ಸವ, ಕೋಲ ಮೊದಲಾಗಿ ಕರೆಯುವ ಉತ್ಸವಗಳನ್ನಾಚರಿಸಿ ಗೌರವ ಸಲ್ಲಿಸುತ್ತಿದ್ದರು. ಪ್ರಾಣಬಲಿ ಕೊಡುವುದು ಸಾಮಾನ್ಯವಾಗಿತ್ತು. ಈ ದೈವಗಳ ಅನೇಕ ಮರದ ವಿಗ್ರಹಗಳು ವಿಜಯನಗರ ಕಾಲಕ್ಕೆ ಸೇರಿದ್ದುವೆನ್ನುವುದು ಗಮನಾರ್ಹ.[37]

---

[29] *Annul Report,* Mysore Archaelogical Department (1943), No. 47

[30] *A. R.* No. 344, 1930–31

[31] ಎಂ. ಗೋವಿಂದ ಪೈ: ಇತಿಹಾಸದ ಇರುಳಲ್ಲಿ ತುಳುನಾಡು ಲೇಖನ, 'ಪಂಚಕಜ್ಜಾಯ.' ೧೩ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನ ಸಂಚಿಕೆ, ಮಂಗಳೂರು (1927), ಪು. ೧೦೮ ೧೦೯

[32] *A. R.*No. 282, 1931-31

[33] *Ibid.,* No 310, 1931–32

[34] P. Gururaja Bhatt, *Op. cit.,* p. 359

[35] *South Kanara Manual,* Vol. VI, p. 14

[36] *S. I. I.* Vol VII. No. 366

[37] p. Gururaja Bhatt, *op. cit.,* p. 365

ತುಳುವರ ಮೇಲೆ ಬೌದ್ಧಧರ್ಮ ತುಸು ಪ್ರಭಾವ ಬೀರಿದ್ದರೂ ವಿಜಯನಗರ ಕಾಲದಲ್ಲಿ ಈ ಧರ್ಮದ ಕುರಿತು ಹೆಚ್ಚು ತಿಳಿದು ಬರುವುದಿಲ್ಲ. ೧೫೪೫ರ ಕಾರ್ಕಳ ಶಾಸನ ಶಾಪೋಕ್ತಿಯಲ್ಲಿ 'ಚತುಸ್ಸಮಯ' ವೆಂದು ಶಬ್ದವಿರುವುದರಿಂದ ಬೌದ್ಧ ಧರ್ಮ ಈ ಕಾಲದಲ್ಲಿ ತುಳುನಾಡಿನ ಜನಮನದಲ್ಲಿ ಮರೆಯಾಗಿಲ್ಲವೆನ್ನುವುದು ವಿಚಾರಣೀಯ.[38]

ವಿಜಯನಗರ ಕಾಲದಲ್ಲಿ ತುಳುನಾಡಲ್ಲಿ ಜೈನಧರ್ಮ ಅತ್ಯಂತ ಹೆಚ್ಚು ಪ್ರೋತ್ಸಾಹ ಪಡೆಯಿತು. ತುಳುನಾಡಿನ ತುಂಡರಸರುಗಳು, ವರ್ತಕ ಸಂಘ ಮತ್ತು ಜನಸಾಮಾನ್ಯರ ಒಕ್ಕೂಟಗಳವರು ಈ ಧರ್ಮಾನುಯಾಯಿಗಳಾಗಿದ್ದುದೇ ಇದಕ್ಕೆ ಪ್ರಬಲ ಕಾರಣ. ಅರಸರುಗಳು, ವರ್ತಕ ಸಂಘಗಳು, ಸ್ಥಳೀಯ ಸಂಸ್ಥೆಗಳು ಜೈನಬಸದಿಗಳ ಪುನರಾಭಿವೃದ್ಧಿ ಹಾಗೂ ನಿರ್ಮಾಣ ಕಾರ್ಯಗಳಲ್ಲಿ ಮುಂದಾದುವು. ಮೂಡಬಿದುರೆ, ಕಾರ್ಕಳ, ವೇಣೂರು, ಕೆರವಸೆ ನಗರಗಳು ಈ ಕಾಲದ ಮುಖ್ಯ ಕೇಂದ್ರಗಳಾಗಿ ಮೆರೆದುವು.

ಮೂಡಬಿದುರೆ ಶಾಸನಗಳು ಕಳಸ-ಕಾರಕಳ ಮತ್ತು ನಗಿರೆ ಅರಸರು ಅನೇಕ ವರ್ತಕ ಸಂಘಗಳು ಮತ್ತು ಯುವಕರಿಂದ ಹಿಡಿದು ಅನೇಕ ವ್ಯಕ್ತಿಗಳು ಜೈನಧರ್ಮಕ್ಕೆ ನೀಡಿದ ಪ್ರೋತ್ಸಾಹ ಕುರಿತು ವರ್ಣಿಸಿವೆ. ೧೪೨೯ರ ಇಮ್ಮಡಿ ದೇವರಾಯನ ಕಾಲದ ಶಾಸನವೊಂದು ಮೂಡಬಿದುರೆಯನ್ನು (ವೇಣುಪುರ) ವಿವರಿಸಿದ ರೀತಿ ಇದು :

ತುಳುದೇಶಕ್ಕೆ ವಿಶಿಷ್ಟಮಪ್ಪ ನಗರಂ ಶ್ರೀವೇಣುನಾಮಂ ಪುರಂ
ವಿಲಸಟ್ಟೀ ಜಿನಧರ್ಮ ಮಾರ್ಗರತರಿಂ ಸತ್ಪಾತ್ರದಾನಂಗಳಿಂ |
ನಲವಿಂ ಮಾಳ್ಪ ಸುಭವ್ಯರಿಂ ಜಿನಕಥಾಳಾಪಂಗಳಿಂ ಸಾಧು ಸಂ
ಕುಲದಿಂ ಕೇಳ್ವ ಸುಶೀಲ ಸತ್ಪುರುಷರಿಂದೊಪ್ಪಿಪ್ಪುದಂತಾ ಪುರಂ ॥

ಇಲ್ಲಿನ ಬಾಲಕರು 'ಜಿನಧರ್ಮಧರ' ಮತ್ತು 'ಅನಿಂದ್ಯಜಿನೋದಿತ ಶಾಸ್ತ್ರಪಾಲಿ' ಗಳಾಗಿದ್ದರು. (೧೪೩೦ರಲ್ಲಿ ಹೊಸ ಬಸದಿ ತ್ರಿಭುವನ ತಿಲಕ ಚೂಡಾಮಣಿ) ಕಟ್ಟಲು ಪ್ರಾರಂಭಿಸುವಾಗಲೇ ಇಲ್ಲಿ ೧೮ ಬಸದಿಗಳಿದ್ದುವು.[40] ೧೪೫೦ರಲ್ಲಿ ತ್ರಿಭುವನ ಚೂಡಾಮಣಿ ಮಹಾಚೈತ್ಯ ವಿಜಯನಗರದ ಅಧಿಕಾರಿಯಾದ ದೇವರಾಜ ಒಡೆಯನ ಹಣದಿಂದ ಸಾಲಿಕೆನಾಡಿನ ಜನರು, ಚೌಟರಸರು, ಅರುವರು, ಬಲ್ಲಾಳುಗಳು-ಇವರ ಸಹಕಾರದಿಂದ ಗುರು ಅಭಿನವ ಚಾರುಕೀರ್ತಿ ಪಂಡಿತನಿಂದ ಕಟ್ಟಲ್ಪಟ್ಟಿತು[41]. ರಾಜನ ಆದೇಶದಂತೆ ಅಧಿಕಾರಿಗಳು ಜಿನಾಲಯಕ್ಕೆ ನೀಡಿದ ಆರ್ಥಿಕ ಸಹಾಯ ವಿಜಯನಗರ ಕಾಲದಲ್ಲಿ ಜೈನಧರ್ಮಕ್ಕೆ ದೊರೆತ ಪ್ರೋತ್ಸಾಹದ ಕುರುಹು. ೧೪೬೨ರಲ್ಲಿ ಸೆಟ್ಟಿಗಾರರು ತ್ರಿಭುವನ ಚೂಡಾಮಣಿ ಚೈತ್ಯಾಲಯದ ಮುಖಮಂಟಪ ಹಾಗೂ ಇನ್ನಿತರ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಕಾರಣರಾದರು.[42] ನಗಿರೆಯ ಅರಸನಾದ ೧ನೆಯ ಭೈರವ ೧೪೬೧ರಲ್ಲಿ ರೋಗದಿಂದ ಬಾಧಿತನಾದಾಗ ತಾನು ಹೆಚ್ಚು ಕಾಲ ಬಾಳುವುದಿಲ್ಲವೆಂದರಿತು ತನ್ನ 'ಪರಮಗತಿಗೆ ಸಾಧನವಾಗಿ ಮೂಡಬಿದುರೆಯ ತ್ರಿಭುವನ ಚೂಡಾಮಣಿ ಚೈತ್ಯಾಲಯದಲ್ಲಿ ಚಂದ್ರನಾಥಸ್ವಾಮಿ, ಸುಪಾರ್ಶ್ವ ತೀರ್ಥಂಕರ, ಚಂದ್ರಪ್ರಭ ತೀರ್ಥಂಕರರನ್ನು ಪೂಜಿಸಲು ದಾನಕಾರ್ಯಗಳನ್ನು ಕೈಗೊಂಡ.[43]

---

[38] ಚತುಸ್ಸಮಯವೆಂದರೆ ಮಾಹೇಶ್ವರ, ಬೌದ್ಧ, ವೈಷ್ಣವ ಮತ್ತು ಅರ್ಹತ ನಂಬಿಕೆಗಳು

[39] S.I.I. Vol. No. 202

[40] *Ibid.*

[41] *Ibid.*, No. 196

[42] *Ibid.*, No. 197

[43] *Ibid.*, No. 203

ಮೂಡಬಿದುರೆಯಲ್ಲಿ ಸ್ಥಾಪಿತವಾಗಿದ್ದ ಜೈನಮಠದ ಗುರುಗಳಿಗೆ 'ಚಾರುಕೀರ್ತಿದೇವ'ರೆಂಬ ಪಟ್ಟನಾಮವಿತ್ತು. ಅವರಲ್ಲಿ ಕೆಲವರು 'ಅಭಿನವ ಚಾರುಕೀರ್ತಿದೇವ'ರೆಂಬ ನಾಮಾಂಕಿತರಾಗಿದ್ದರು.

ಕಾರಕಳವು ಕಳಸ–ಕಾರಕಳದ ಜೈನರಸರ ರಾಜಧಾನಿಯಾಗಿತ್ತು. ಈ ಅರಸರು ಜಿನಾಲಯ ನಿರ್ಮಾಣಕ್ಕೆ ಮತ್ತು ಜಿನಧರ್ಮ ಪ್ರಚಾರಕ್ಕೆ ಅಪಾರ ಹಣ ವ್ಯಯಿಸಿದರು. ಈ ಅರಸರ ಮಹ ತ್ಸಾಧನೆಯೆಂದರೆ ಕಾರ್ಕಳ ಹಾಗೂ ವೇಣೂರುಗಳಲ್ಲಿ ನಡೆಸಿದ ಎರಡು ಜಿನವಿಗ್ರಹಗಳು. ೧೪೩೨ ರಲ್ಲಿ ೧ನೆಯ ಭೈರವನ ಮಗನಾದ ೧ನೆಯ ವೀರಪಾಂಡ್ಯ ಕಾರಕಳದಲ್ಲಿ ದೊಡ್ಡದಾದ ಗುಮ್ಮಟ ವಿಗ್ರಹ ಸ್ಥಾಪಿಸಿದ್ದ.[44] ೧೪೧೫ರಲ್ಲಿ ಇಲ್ಲಿ ಲಲಿತ ಕೀರ್ತಿಮಠ ಸ್ಥಾಪಿತವಾಯಿತು[45]. ಇಲ್ಲಿನ ಗುರುಗಳಿಗೆ 'ಲಲಿತ ಕೀರ್ತಿದೇವ'ರೆಂಬ ಪಟ್ಟನಾಮವಿತ್ತು. ಕಾರಕಳ ಮತ್ತು ಮೂಡಬಿದುರೆ ಮಠಗಳ ಗುರುಗಳು ಕಳಸ–ಕಾರಕಳ ರಾಜ್ಯದ ಅರಸುಗಳ ರಾಜಗುರುಗಳಾಗಿಯೂ ಕುಲಗುರುಗ ಳಾಗಿಯೂ ಇದ್ದು, ತುಳುನಾಡ ಬಸದಿಗಳಲ್ಲಿ ಅನೇಕವು ಈ ಎರಡು ಮಠಗಳ ಗುರುಗಳ ಉಪದೇಶದ ಮೇರೆಗೆ ನಿರ್ಮಿತವಾಗಿದ್ದುವು.

ಕಾರಕಳ, ಮೂಡಬಿದುರೆ, ವೇಣೂರು ಮಾತ್ರವಲ್ಲದೆ ಹಿರಿಯಂಗಡಿ, ನೆಲ್ಲಿತರ, ತೊರಗ, ಮಲಿಂಗ, ಮತ್ತು ಕೆರವಸೆಗಳಲ್ಲೂ ಜೈನಧರ್ಮ ಹಬ್ಬಿದ್ದು ಇಲ್ಲಿ ಬಸದಿಗಳಿದ್ದುವು. ಕೆರವಸೆ ಕಳಸ–ಕಾರಕಳ ರಾಜರ ಎರಡನೆ ರಾಜಧಾನಿಯಾಗಿತ್ತು. ಬಸರೂರು, ಬಾರಕೂರು-ಪಟ್ಯಂಗಡಿ, ಗುರುವಾಯನ ಕೆರೆ ಮತ್ತು ತುಳುನಾಡಿನ ಇನ್ನೂ ಅನೇಕ ಕಡೆಗಳಲ್ಲಿ ಜೈನಧರ್ಮ ಪ್ರಾಮುಖ್ಯ ಪಡೆದಿತ್ತು,

ತುಳುನಾಡಿನ ತುಂಡರಸರು ರಾಜಕೀಯ ಕ್ಷೇತ್ರದಲ್ಲಿ ಪರಸ್ಪರ ವೈಮನಸ್ಕರಾಗಿದ್ದರೂ ಜೈನಧರ್ಮಕ್ಕೆ ಸೇವೆ ಸಲ್ಲಿಸುವಲ್ಲಿ ಒಂದು ಸಂಸ್ಥಾನದ ಅರಸ ಇನ್ನೊಂದು ಸಂಸ್ಥಾನದಲ್ಲಿ ಧರ್ಮ ಕಾರ್ಯ ಕೈಗೊಳ್ಳುವುದಕ್ಕೆ ಅಂತಹ ವಿರೋಧ ಅಡ್ಡಿಯಾಗುತ್ತಿರಲಿಲ್ಲ. ೧೪೬೦ರಲ್ಲಿ ನಗಿರೆಯ ರಾಜನಾದ ಭೈರವರಸ ಕಳಸ-ಕಾರಕಳ ರಾಜ್ಯದ ಮೂಡಬಿದುರೆಯ ಚಂದ್ರಜಿನ ಮಂದಿರದಲ್ಲಿ ಮಾಡಿದ ಧರ್ಮಗಳು ಇಲ್ಲಿ ಗಮನಾರ್ಹ.

'ಧರೆಯೊಳಗಂ ಪ್ರಸಿದ್ಧಿವಡೆದೊಪ್ಪುವ ವೇಣುಪುರಾಂತರಾಳದೊಳ್
ಕರೆಚೆಲುವಾದ ಚಂದ್ರಜಿನ ಮಂದಿರದೊಳ್ಪಿರಿದಪ್ಪ ಧರ್ಮಮಂ
ವಿರಚಿಸಲುತ್ತರೋತ್ತರ ಸಮೃದ್ಧಿಗೆ ಕಾರಣಮಪ್ಪುದೆಂದು ತಾಂ
ವರಗುರು ವೀರಸೇನಮುನಿ ಪೇಳಲು ಕೇಳ್ದನು ಭೈರವೇಶ್ವರಾ॥
ಯೆಂದಾ ಮುನಿನಾಥಂ ಭೈರವೇಂದ್ರಂಗೆ ಪೇಳ್ದೆ ಕೇಳ್ದು ಹರ್ಷೋತ್ಕರ್ಷ
ಚಿತ್ತದಿಂದಿಂತಪ್ಪ ಸ್ಥಾನದೊಳ್ಧರ್ಮವಂ ಮಾಳ್ಪುದುತ್ತಮವೆಂದು
ತನ್ನ ಮನದೊಳ್ಬಗೆದಾ ವೇಣುಪುರದ ಭವ್ಯ ಜನಂಗಳಂ ಕರೆಸಿಯೊಡಂಬಡಿಸಿಯಾ ಚಂದ್ರ
ಜಿನಮಂದಿರದೊಳ್' ಧರ್ಮಗಳನ್ನು ಮಾಡಿದ[46].

ಧರ್ಮಸಹಿಷ್ಣುತೆ, ಪರಧರ್ಮ ಗೌರವ ಇವು ಈ ಕಾಲದ ಅರಸರ ಹಾಗೂ ಜನರ ಸಾಮಾನ್ಯ ಗುಣಗಳಾಗಿದ್ದುವು. ವಿಜಯನಗರದರಸರ ಸರ್ವತಮತ ಬೆಂಬಲದಿಂದಾಗಿ ಅವರು ನೇಮಿ ಸಿದ ಅಧಿಕಾರಿಗಳು ಶೈವ, ವೈಷ್ಣವ ಹಾಗೂ ಜೈನ ಧರ್ಮಕ್ಕೆ ಅನೇಕ ರೀತಿಯಲ್ಲಿ ಪ್ರೋತ್ಸಾಹ ನೀಡು ವುದಕ್ಕೆ ಕಾರಣವಾಯಿತು.

---

[44] *Epigraphia Indica,* Vol. VII, pp. 109-10

[45] ಪಿ. ಲೋಕನಾಥ ಶಾಸ್ತ್ರಿ-ಮೂಡಬಿದ್ರೆಯ ಚರಿತ್ರೆ, ವೀರವಾಣಿ ವಿಲಾಸ ಜೈನಸಿದ್ಧಾಂತ ಭವನ (೧೯೩೭), ಪುಟ ೪೦

[46] *S. I. I.* Vol.VII, No. 202

ಈ ಕಾಲದ ದೇವಾಲಯಗಳ ನಿರ್ವಹಣೆಯನ್ನು ಕುರಿತು ಸಾಕಷ್ಟು ವಿವರಣೆಗಳು ಶಾಸನಗಳಲ್ಲಿ ಉಕ್ತವಾಗಿವೆ. ವಿಜಯನಗರಪೂರ್ವ ಕಾಲದಲ್ಲಿದ್ದ ಪದ್ಧತಿಯೇ ಬಹು ಪಾಲು ಮುಂದುವರಿಯಿತು ಈ ಕಾಲದಲ್ಲಿ ದೊರಕಿದ ಅತ್ಯಂತ ಪ್ರೋತ್ಸಾಹದಿಂದ ದೇವಸ್ಥಾನಗಳ ನಿರ್ವಹಣಾಧಿಕಾರಿಗಳ ಸಂಖ್ಯೆಯು. ಹೆಚ್ಚು ವಂತಾಯಿತು. ಸ್ಥಾನಪತಿ (ಸ್ಥಾನಿಕ, ಅಧ್ಯಕ್ಷ) ದೇವಸ್ಥಾನದ ಮೇಲ್ವಿಚಾರಣಾ ಅಧಿಕಾರಿಯಾಗಿದ್ದ. ೧೩೪೯ರ ಶಾಸನ 'ಕಾಂತಾರದ ದೇವಾಲ್ಯದ ಸ್ಥಾನಿಕರ ಗ್ರಾಮದ ಮೂನೂರ್ವರ್ಗರುಂ' ಎಂದಿದೆ.[47] ೧೪೦೧ರ ಕಾರಕಳದ ಘಲಿಮಾರಿನ ಶಾಸನ 'ಆ ಶಿವಾಲ್ಯದಲ್ಲಿ ಆ ಸ್ಥಾನಪತಿ' ಇದ್ದುದನ್ನು ತೋಳಿದೆ.[48] ದೇವರಿಗೆ ಬಂದ ದಾನಗಳ ಮೇಲ್ವಿಚಾರಣೆಯನ್ನು 'ದೇಶಾಧಿಪತಿ' ಮತ್ತು 'ಸ್ಥಾನದ ಕರ್ತ' (ಸ್ಥಾನಿಕ?) ನೋಡಿಕೊಳ್ಳುತ್ತಿದ್ದರು.[49] ೧೫೦೬ರ ಕುಕ್ಕೆ ಸುಬ್ರಹ್ಮಣ್ಯ ಶಾಸನದ ಪ್ರಕಾರ ದೇವಸ್ಥಾನದ ವಿವಿಧ ಕರ್ಮಗಳನ್ನು ಜಗದವಾಡ ತನದ ಅಲ್ಲಿಯ ಸ್ಥಾನಿಕರು ನಡೆಸಿ' ಕೊಂಡು ಬರುತ್ತಿದ್ದರು.[50] ಇದೇ ಕಾಲದ ಬಾರಕೂರಿನ ಶಾಸನವೂ ಸ್ಥಾನಪತಿ, ಸ್ಥಾನಿಕ ಪರಿವಾರ ಕುರಿತು ಉಲ್ಲೇಖಿಸಿದೆ. ಕದ್ರಿಯ ದೇವಸ್ಥಾನಕ್ಕೆ ನಾಲ್ವರು ಸ್ಥಾನಿಕರು ದಾನ ನೀಡಿದ್ದರು. ೧೪೭೦ರ ಗುಂಡಮಿಯ ಮುಂಡಿದೇವಸ್ಥಾನದ ಶಾಸನ ಸ್ಥಾನಿಕರ್ಲೈವರು ಒಪ್ಪಿ ಬರಸಿದ ದೇವಸ್ವದ ತಳದ ವಿವರ' ನೀಡಿದೆ.[51] ಆದ್ದರಿಂದ ಸ್ಥಾನಿಕರ ಕುರಿತು ಈ ಕೆಳಗಿನ ವಿಷಯಗಳನ್ನು ಗಮನಿಸಬಹುದು: 1 ಇವರು ದೇವಸ್ಥಾನದ ಮೇಲ್ವಿಚಾರಕರಾಗಿದ್ದು ಗೌರವಾನ್ವಿತ ವ್ಯಕ್ತಿಗಳಾಗಿದ್ದರು. 2 ಇವರು ದೇವಸ್ಥಾನಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಿಗೆ ನೇರವಾಗಿ ಕಾರಣರಾಗಿದ್ದರು. 3 ಇವರು ಯಾವುದೇ ಜಾತಿಗೆ ಅಥವಾ ಧರ್ಮಕ್ಕೆ ಸೇರಿದವರಾಗಿದ್ದು ದೇವಸ್ಥಾನದ ಕಾರ್ಯಗಳನ್ನು ಅಧಿಕಾರಿಗಳ ಅಪ್ಪಣೆ ಮೇರೆಗೆ ನಿರ್ವಹಿಸಬೇಕಾಗಿತ್ತು. ಹಾಲಾಡಿಯ ನರಸಿಂಹದೇವಾಲಯದಲ್ಲಿ ಶೈವಧರ್ಮದವರಾದ (ಮಲಬಾರಿನಿಂದ ತುಳುನಾಡಿಗೆ ಬಂದ) ನಂಬಿಯಾರರು ಸ್ಥಾನಿಕರಾಗಿದ್ದರು.[52]

ದೇವಸ್ಥಾನದ ಧಾರ್ಮಿಕ ಕಾರ್ಯ ನಡೆಸುವಲ್ಲಿ 'ತಂತ್ರಿ' ಎನ್ನುವ ಅಧಿಕಾರಿಗಳಿದ್ದರು. 'ಸ್ಥಾನದ ತಂತ್ರಿ' ದೇವರಿಗೆ ಸ್ನಾನ ಮೊದಲಾದ ಕಾರ್ಯಗಳನ್ನು ಮಾಡುತ್ತಿದ್ದ. ಕದ್ರಿಯ ಕೈವಟ್ಟಲ ಕೆರೆಯಲ್ಲಿ ೧೪೭೫ರ ಸುಮಾರಿಗೆ ತಂತ್ರಿಗಳು ತಮ್ಮ ಪಾತ್ರೆಗಳನ್ನು ಶುಚಿಗೊಳಿಸಿಕೊಳ್ಳುತ್ತಿದ್ದರು. ಉಡುಪಿ ಬಳಿಯ ನೀರುವಾರ ದೇವಸ್ಥಾನದಲ್ಲಿ ೧೩೮೭ರಲ್ಲಿ ತಂತ್ರಿಗಳಿಗೆ ಕಾರ್ಯಕ್ಕಾಗಿ ನಾಲ್ಕು ಮೂಡೆ ಅಕ್ಕಿ ದಾನ ನೀಡಿದ್ದರು.[53]

ದೇವಸ್ಥಾನದ ಅರ್ಚಕರನ್ನು 'ಅಡಿಗಳು' ಎಂಬುದಾಗಿ ಕರೆಯುತ್ತಿದ್ದರು. ಇವರು 'ಮೇಲು 'ಶಾಂತಿ' ಮತ್ತು ಕೀಳು ಶಾಂತಿ' ಮೊದಲಾದ ಅರ್ಚನೆ ಕೈಗೊಳ್ಳುತ್ತಿದ್ದರು. ಕೊಲ್ಲೂರಿನಲ್ಲಿ ಮೂವರು ಅಡಿಗಳಿಗೆ, ಮೇಲು ಶಾಂತಿ, ಕೀಳು ಶಾಂತಿ ಮತ್ತು ಬಲಿದೇವರನ್ನು ಕೊಂಡೊಯ್ಯುವ ಕಾರ್ಯಗಳಿಗಾಗಿ 'ಬಾಳ'ನ್ನು ದಾನವಾಗಿತ್ತಿದ್ದರು.[54] ಶಾಂತಿ ಮತ್ತು ದೇವಪೂಜೆ ಮಾಡಲು ಅಡಿಗಳಿಗೆ

---

[47] *Ibid.*, No. 231

[48] *Ibid.*, No. 267

[49] *Ibid.*,

[50] *M. A. R.*, 1943, No. 47

[51] *A. R.* No. 608, 1929-30

[52] *Ibid.*, No. 313, 1931-32

[53] *Ibid.*, No. 491, 1928-29

[54] *S.I.I.*, Vol. IX., Part II, No. 470

೧೪೪೪ರಲ್ಲಿ ಬಸರೂರಿನ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಬತ್ತ ಮತ್ತು ಹಣವನ್ನು ದಾನವಾಗಿತ್ತಿದ್ದರು.[55]

'ಆಸ್ರಣ' ಎಂಬವರು ಕೂಡ ಅರ್ಚಕರಾಗಿರುತ್ತಿದ್ದರು. ಆಸ್ರಣ ತನ್ನ ಕಾರ್ಯಮಾಡದಿದ್ದಲ್ಲಿ ಒಂದೂವರೆ ಹೊನ್ನು ದಂಡ ವಿಧಿಸಲಾಗುತ್ತಿತ್ತೆಂದು 15ನೆಯ ಶತಮಾನದ ಶಾಸನ ತಿಳಿಸಿದೆ.[56] ೧೪೩೧ರಲ್ಲಿ ಪುತ್ತೂರಿನ ದೇವಸ್ಥಾನದ ಆಸ್ರಣರಿಗೆ ದಾನವನ್ನು ನೀಡಲಾಗಿತ್ತು.[57] 'ಪಾಟಾಳಿ' ದೇವಸ್ಥಾನದ ಕ್ರಿಯೆಗಳನ್ನು ಮಾಡಲು ಮೇಲ್ವಿಚಾರಕನಾಗಿರುತ್ತಿದ್ದ. ಸ್ಥಾನಪತಿಯ ಆಜ್ಞೆಗಳನ್ನು ಪಾಲಿಸಲು ಇನ್ನೊಬ್ಬ 'ಕೊಠಾರಿ' ಎಂಬ ಅಧಿಕಾರಿ ಇರುತ್ತಿದ್ದ. ಕದ್ರಿಯ ೧೩೮೭ರ ಶಾಸನ 'ಕೊಠಾರಭೂಮಿ'ಯ ಕುರಿತು ಉಲ್ಲೇಖಿಸಿದೆ.[58] ದೇವಸ್ಥಾನದ ಕೋಶಾಧಿಕಾರಿಯನ್ನು 'ಸೇನವ' ಎಂಬುದಾಗಿ ಕರೆಯಲಾಗುತ್ತಿತ್ತು. ದೇವರ ಸೇನಬೋವ, ಸ್ಥಾನದ ಸೇನಬೋವ, ನಿತ್ಯ ಸೇನಬೋವ—ಎಂಬುದಾಗಿ ಈ ಕಾಲದ ಶಾಸನಗಳು ಕರೆದಿವೆ. ದೇವಸ್ಥಾನದ ಧಾರ್ಮಿಕ ಕ್ರಿಯೆಗಳಿಗೆ ಸಹಾಯಕನಾಗಿ 'ದೇವಾಡಿಗ' ಎಂಬ ಅಧಿಕಾರಿ ಇರುತ್ತಿದ್ದ. ಈತ ಬ್ರಾಹ್ಮಣನಾಗಿರುತ್ತಿರಲಿಲ್ಲ. ಈತನನ್ನು ಮೊಯಿಲಿ, ಮೂಲ್ಯ ಎಂಬುದಾಗಿ ಕರೆಯುತ್ತಿದ್ದರು. 'ಪದಾರ್ತಿ' ದೇವಸ್ಥಾನದ ವಾದ್ಯಗಳನ್ನು ನುಡಿಸುತ್ತಿದ್ದ. 'ಪಾದಮೂಲಿ'ಗಳನ್ನು ದೇವಸ್ಥಾನ ಕಾಯಲು ನೇಮಿಸುತ್ತಿದ್ದರು ಬಾರಕೂರಿನ ಶಾಸನವೊಂದು 'ದೇವಸ್ವದ ಕಾಹುರಕ್ಷೆ—ಇಬ್ಬರು ಪಾದಮೂಲಿಗಳು ಎಂದಿದೆ.[59] ಪುತ್ತೂರಿನ ಮಹಾದೇವ ದೇವಸ್ಥಾನಕ್ಕೆ ನಾಲ್ವರು ಪಾದಮೂಲಿಗಳ ಸಹಿತ ಇತರರು ಭೂಮಿ ದಾನ ನೀಡಿದ್ದರು. ಮಂಗರು ನಾಡಿನ ಬಂಕೇಶ್ವರದ ಪಾದಮೂಲಿಗಳಿಗೆ ತೊಂದರೆಯನ್ನಿತ್ತುದಕ್ಕಾಗಿ ತೊಂದರೆಯನ್ನಿತ್ತವರಿಗೆ ದಂಡವನ್ನು ವಿಧಿಸಲಾಗಿತ್ತು.[60]

ದೇವಸ್ಥಾನದ ಕಸ ಗುಡಿಸಲು 'ಅಡಿಪಿನವರನ್ನು (ಅಡಪಿನವರು) ನೇಮಿಸಿರುತ್ತಿದ್ದರು. ಚಾಮರ ಸೇವೆಗಾಗಿ ಹೆಂಗಸರನ್ನು ಹೆಚ್ಚಾಗಿ ನೇಮಕ ಮಾಡಲಾಗುತ್ತಿತ್ತು. ೧೩೭೭ರಲ್ಲಿ ಕೋಟೇಶ್ವರ ದೇವಸ್ಥಾನದಲ್ಲಿ ಇಬ್ಬರು ಹೆಂಗಸರಿಗೆ ಚಾಮರ ಸೇವೆ ಮಾಡಿದುದಕ್ಕಾಗಿ ಅಕ್ಕಿಯನ್ನು ದಾನ ನೀಡಲಾಗಿತ್ತು.[61] ಮಠಗಳಲ್ಲಿ ಇವರು (ಬಸವಿತ್ತಿಗಳು) ಕಾರ್ಯವಮಾಡುತ್ತಿದ್ದುದಕ್ಕೆ ಅನೇಕ ಉದಾಹರಣೆಗಳಿವೆ.

ಮುಕ್ಕಲತ್ತಿಯವರು ದುರ್ಗಾದೇವಿಯ ದೇವಸ್ಥಾನದಲ್ಲಿ 'ದರ್ಶನ ಪಾತ್ರಿ' ಹೇಳಿದ ಮಾತುಗಳನ್ನು ಜನರಿಗೆ ತಿಳಿಸುವ ಮತ್ತು ಹೇಳುವ ನಡುವಿನ ವ್ಯಕ್ತಿಯಾಗಿದ್ದರು. ಇವರು ನಿಯಮಿತ ಅಧಿಕಾರಿಗಳಾಗಿರದೆ ಅಗತ್ಯ ಬಿದ್ದಾಗ ಮಾತ್ರವೇ ದೇವಸ್ಥಾನಗಳಲ್ಲಿ ಇರುತ್ತಿದ್ದರು.[62]

ದೇವಾಲಯಗಳು ಪಡೆಯುತ್ತಿದ್ದ ದಾನಗಳನ್ನು ಪ್ರತಿಪಾಲಿಸುವಲ್ಲಿ ವರ್ತಕ ಸಂಘದವರು ಮುಖ್ಯ ಪಾತ್ರ ವಹಿಸುತ್ತಿದ್ದರು. 'ಈ ಧರ್ಮವನ್ನು ಚಾಳಿಯ ಕೇರಿಯ ಮೂವರು ಸೆಟ್ಟಿಕಾರರೂ

---

[55] *Ibid.*, No. 449

[56] *Ibid.*, Vol. VII, No. 185

[57] *A. R.* No. 344, 1930-31

[58] *S.I.I.* ,Vol. VII, No. 189

[59] *Ibid.*, No. 326

[60] *Ibid.* ,No. 185

[61] *Ibi'd.* ,Vol. IX, Part II, No. 417

[62] P. Gururaja Bhatt, *Op. Cit.*, P. 389

ಹಲರು ಪ್ರತಿಪಾಲಿಸುವರು.' 'ಈ ಧರ್ಮದ ಪಾರುಪತ್ಯ ಒಡೆತನ ಕೋಟಿಕೇರಿಯ ಹಲರು ಸೆಟ್ಟಿಕಾರರಿಗೆ' ಮುಂತಾದ ಶಾಸನೋಕ್ತಿಗಳು ಮೇಲಿನ ಮಾತಿಗೆ ಪುಷ್ಟಿಯನ್ನೀಯುತ್ತವೆ.

ಜೈನಬಸದಿಗಳ ಸೇವೆಗಾಗಿ ಜೈನರ ಮಧ್ಯೆ ಬ್ರಾಹ್ಮಣರೆನಿಸಿದ್ದ ಇಂದ್ರರಿದ್ದರು. ಬಸದಿಗಳ ಮೇಲ್ವಿಚಾರಣೆಗಾಗಿ ಸ್ಥಾನಪತಿ ಅಥವಾ ಸ್ಥಾನಿಕರಿದ್ದರೆಂಬುದು ಶಾಸನಗಳಿಂದ ದೃಢಪಟ್ಟಿದೆ. ಬಸದಿಗಳಲ್ಲೂ 'ಕರ್ತ'ರೆಂಬ ಅಧಿಕಾರಿಗಳಿದ್ದರು.[63]

ದೇವಸ್ಥಾನಗಳ ಹಾಗೂ ಸುತ್ತಮುತ್ತಲ ಪವಿತ್ರತೆಯನ್ನು ಕಾಪಾಡಲು ಕೆಲವು ಕ್ರಮಗಳನ್ನು ಕೈಗೊಂಡಿದ್ದರು. ದೇವಸ್ಥಾನದ ಸುತ್ತಮುತ್ತ ಯಾವುದೇ ರೀತಿಯ ನಿರ್ಮಾಣವನ್ನು, ಆಟವಾಡುವುದನ್ನು ನಿಷೇಧಿಸಲಾಗಿತ್ತು. ೧೫೦೦ರ ಶಾಸನವೊಂದರಲ್ಲಿ ದೇವಸ್ಥಾನದ ಸುತ್ತ ಯಾವುದೇ ರೀತಿಯ ಶಾಪೋಕ್ತಿಗಳನ್ನು ಆಡಬಾರದೆಂದಿದೆ.[64] ಹಾಗೆಯೇ ಓಸೆಗೂ ಅವಕಾಶವಿರಲಿಲ್ಲ. ಮೇಲಿನ ಶಾಸನವೇ ತಿಳಿಸುವಂತೆ; ಖಡ್ಗವು ಹಿಂಸೆಯಲ್ಲಿ ಅರ್ಧ ತೊಡಗಿದ್ದರೆ ೫೦೦ ಹೊನ್ನು ಮತ್ತು ಪೂರ್ತಿ ತೊಡಗಿದ್ದರೆ ೧೦೦೦ ಹೊನ್ನು ರಾಜನಿಗೆ ಮತ್ತು ದೇವಸ್ಥಾನಕ್ಕೆ ದಂಡ ತೆರಬೇಕಾಗಿತ್ತು. ದೇವಸ್ಥಾನ ಭೂಮಿಯೊಳಗೆ ದೇವಸ್ವ ರಾಜನಿಗೆ 'ಅರಮನೆ ಕಟ್ಟುವ ಮಾರ್ಯಾದೆಯಿಲ್ಲ'.[65] ಶಾಸನ ತಿಳಿಸುವಂತೆ ರಾಜ ದೇವಸ್ಥಾನದ ಧಾನಧರ್ಮಾದಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರಲು ಮತ್ತು ರಕ್ಷಿಸಲು ವಿಫಲನಾದಲ್ಲಿ ಒಂದು ಸಾವಿರ ಬ್ರಾಹ್ಮಣರನ್ನು ಕೊಂದ ಮತ್ತು ರಾಮೇಶ್ವರ ಮತ್ತು ಗಂಗೆಯಲ್ಲಿ ಒಂದು ಸಾವಿರ ದನಗಳನ್ನು ಕೊಂದ ಪಾಪಕ್ಕೆ ಬಲಿಯಾಗುವನು. ಕೆಲವೊಮ್ಮೆ ದೇವಸ್ಥಾನದ ಪವಿತ್ರತೆ ಕಾಪಾಡಿಕೊಳ್ಳಲು ವ್ಯಕ್ತಿಗಳನ್ನು ದೇವಸ್ಥಾನದ ಕಾರ್ಯಗಳಿಂದ ಬೇರ್ಪಡಿಸುತ್ತಿದ್ದರು.

ಸ್ತ್ರೀಯರೂ ದೇವಸ್ಥಾನದ ಕಾರ್ಯಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ೧೪೬೫ರ ಶಾಸನದ ಪ್ರಕಾರ ವಿಠರಸ ಮಂಗಳೂರು ರಾಜ್ಯವನ್ನಾಳುತ್ತಿದ್ದಾಗ ಮಂಗಳೂರು ರಾಜ್ಯದ ಪೊಳಲಿ ದೇವಿಯ ದೀಪ ಬೆಳಗಲು, ಧಾರ್ಮಿಕ ಕಾರ್ಯಗಳ ಮೇಲ್ವಿಚಾರಣೆಗೆ ಸ್ತ್ರೀಯೊರ್ವಳನ್ನು ನೇಮಿಸಲಾಗಿತ್ತು.[66]

ಈ ಕಾಲದಲ್ಲಿ ಹಬ್ಬಗಳನ್ನು ತುಳುನಾಡಿನ ಜನರು ವೈಭವದಿಂದ ಆಚರಿಸುತ್ತಿದ್ದರು. ದೀಪಾವಳಿ, ಪಂಚಪರ್ವ, ಶಿವರಾತ್ರಿ, ವಸಂತ ಯುಗಾದಿ, ವೈಶಾಖ ಹುಣ್ಣಿಮೆ, ನೂಲಹಬ್ಬ, ಬೆನಕನ ಚೌತಿ, ತೆನೆಯ ಹಬ್ಬ ಮೊದಲಾದ ಹಬ್ಬಗಳು ಜನಪ್ರಿಯವಾಗಿದ್ದುವು. ರಂಗಪೂಜೆ, ದಕ್ಕೆಬಲಿ ಭೂತಬಲಿಪೂಜಾ, ರಾಕ್ಷಸ ಜೋಗ ಮೊದಲಾದುವು ರೂಢಿಯಲ್ಲಿದ್ದುವು. ಶಕ್ತಿ ದೇವಾಲಯಗಳಲ್ಲಿ 'ನವರಾತ್ರಿ' ಆಚರಿಸಲಾಗುತ್ತಿತ್ತು. ೧೪೫೮ರ ಶಾಸನವೊಂದರಲ್ಲಿ ದೀವಳಿಗೆಯ ಹಬ್ಬದ ಮೂರು ದಿನ 'ದೀಪೋತ್ಸವ ಧರ್ಮ'ವೆಂಬ ವಿವರಣೆಯಿದೆ.[67] ಕೊಟ್ಟೇಶ್ವರದಲ್ಲಾಚರಿಸುವ ತುಡಿಯ ಹಬ್ಬದ ಮಹತ್ವ ಕುರಿತು ಈ ಮೊದಲೇ ಹೇಳಿದೆ.

ದೇವಸ್ಥಾನಗಳಿಗೆ ಸಂಬಂಧಿಸಿದ ಉತ್ಸವಗಳಲ್ಲಿ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ವರ್ತಕ ಸಂಘಗಳೂ ಜನಸಾಮಾನ್ಯರ ಒಕ್ಕೂಟಗಳೂ. ಸಾಂಪ್ರದಾಯಿಕ ಮರ್ಯಾದೆಗಳನ್ನು ಪಡೆದಿದ್ದುವು. ಆದರೆ ಈ ಮರ್ಯಾದೆಗಳಿಗೆ ತೊಂದರೆಯಾದಾಗ ವಾದವಿವಾದಗಳೂ ಕೆಲವು ಬಾರಿ ಹಿಂಸಾಕೃತ್ಯಗಳೂ ತಲೆ

---

[63] ಡಾ. ಕೆ. ವಿ. ರಮೇಶರ ಗ್ರಂಥ, ಪು. ೧೩೯

[64] *S.I.I.*, Vol. VII, No. 211

[65] *Ibid.*, No. 185

[66] *A. R.* 376, 1927-28

[67] *S.I.I.* Vol. VII, No. 336

ದೋರುತ್ತಿದ್ದವು. ಇಂತಹ ಬಿಕ್ಕಟ್ಟು ಬಸರೂರಿನಲ್ಲಿ ೧೪೫೫ ರಲ್ಲಿ ಉಂಟಾಗಿತ್ತು. ಬಸರೂರಿನ ದೇವಿಯ ಹಬ್ಬದ ಆದಿ ಅಯನಕ್ಕೆ ಕುರಿಯನ್ನೂ ಅಡಕೆಯನ್ನೂ ಕಾಣಿಕೆಯಾಗಿ ಕೊಡಲೋಸುಗ ಮೆರವಣಿಗೆಯಲ್ಲಿ ಒಯ್ಯುವುದು ವಾಡಿಕೆಯಾಗಿತ್ತು. ತಮ್ಮ ತಮ್ಮ ಕಾಣಿಕೆಗಳನ್ನು ಮೂಡಕೇರಿಯ ಹಲರು ಮತ್ತು ಪಡುವ ಕೇರಿಯ ಹಲರು ಯಾವ ಯಾವ ಬೀದಿಗಳಲ್ಲಿ ಮೆರೆಸಿಕೊಂಡು ಹೋಗುವುದೆಂಬ ಬಗ್ಗೆ ವಾದವಿವಾದಗಳು ನಡೆದು, ಕೊನೆಗೆ ಈ ವಿಷಯದಲ್ಲಿ ಎರಡು ಕೇರಿಯ ಹಲರೂ ಒಪ್ಪಂದವೊಂದನ್ನು ಮಾಡಿಕೊಂಡರೆಂದು ಬಸರೂರಿನ ಶಾಸನವೊಂದರಿಂದ ತಿಳಿದುಬರುತ್ತದೆ.[68] ಅದೇ ರೀತಿ ಕೋಟೇಶ್ವರ ಶಾಸನವೊಂದರಲ್ಲಿ ಅಲ್ಲಿನ ಕಾರ್ತಿಕ ತಿಂಗಳಲ್ಲಿ (೧೫೩೦) ಆಚರಿಸಿದ ತುಡಿಯ ಹಬ್ಬದ ಸಮಯದಲ್ಲಿ ನಡೆದ ಧಾರ್ಮಿಕ ಗಲಭೆಯ ಉಲ್ಲೇಖವಿದೆ. ಈ ಗಲಭೆಯಿಂದಾಗಿ ದೇವಸ್ಥಾನವೇ ಮುಚ್ಚಲ್ಪಟ್ಟು ಕೊನೆಗೆ ೧೫೫೧ರ ಏಪ್ರಿಲ್ ೧೧ ರಂದು ಬಾರಕೂರು ರಾಜ್ಯದ ಅಧಿಕಾರಿಯಾದ ಏಕಧಾಳಖಾನನ ಆಜ್ಞೆಯ ಮೇರೆಗೆ ದೇವಸ್ಥಾನದ ಕಾರ್ಯಗಳೆಲ್ಲ ಪುನಃ ಪ್ರಾರಂಭಗೊಂಡುವು.

ವಿಜಯನಗರ ಕಾಲದಲ್ಲಿ ದೇವಸ್ಥಾನಗಳು ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಮಹತ್ತರ ಪ್ರಭಾವ ಬೀರಿದುವು. ದೇವಸ್ಥಾನದ ಆಡಳಿತ ರಾಜ್ಯದ ಆಡಳಿತಕ್ಕೆ ಒಳಪಟ್ಟಿತ್ತು. ಶ್ರೀ ಕೃಷ್ಣದೇವರಾಯನ ಕಾಲದ ಪೆರಡೂರಿನ ಶಾಸನ ಪೆರಡೂರಿನ ಅನಂತ ದೇವಸ್ಥಾನಕ್ಕೆ ನೀಡಿದ ದಾನವನ್ನು ಸೂರಪ್ಪ ಅಧಿಕಾರಿ ನೋಡಿಕೊಳ್ಳಲು ತಿಳಿಸಿದೆ.[69] ಈ ಕಾಲದ ದೇವಸ್ಥಾನಗಳು, ಬಸದಿಗಳು ಸಾಹಿತ್ಯ ವಿದ್ಯಾ ಕೇಂದ್ರಗಳಾಗಿದ್ದುವೆಂಬುದನ್ನು ನಾವಿಲ್ಲಿ ಸ್ಮರಿಸಬಹುದು. ಪ್ರಮುಖ ದೇವಸ್ಥಾನಗಳಿಗೆ ಸಂಬಂಧಿಸಿದ ಮಠಗಳಿದ್ದು ಅವು ಕೂಡ ಜನಜೀವನದಲ್ಲಿ ಪ್ರಮುಖ ಪ್ರಭಾವ ಬೀರಿದುವು. ಬಾರಕೂರಿನಲ್ಲಿ ಅನೇಕ ಮಠಗಳಿದ್ದುವು.ಅವು ಪ್ರವಾಸಿಗಳಿಗೆ ತಂಗುದಾಣ ಮಾತ್ರವಾಗಿರದೆ ವಿದ್ಯಾ ಕೇಂದ್ರಗಳೂ ಆಗಿದ್ದುವು.[70]

ವಿಜಯನಗರ ಪತನಾನಂತರವೂ ತುಳುನಾಡಿನ ಧಾರ್ಮಿಕ ಜೀವನದಲ್ಲಿ ಮಹತ್ತರ ಬದಲಾವಣೆಗಳುಂಟಾದಂತಿಲ್ಲ. ಅನೇಕ ವರುಷಗಳ ವರೆಗೆ ಮೇಲಿನ ಧಾರ್ಮಿಕ ಪರಿಸ್ಥಿತಿಯೇ ಮುಂದುವರಿಯಿತು.

---

[68] ಡಾ. ಕೆ. ವಿ. ರಮೇಶರ ಗ್ರಂಥ, ಪು. ೧೪೦

[69] *A. R.* No. 341, 1928–29

[70] Dr. P. Gururaja Bhatt : *Op. Cit.*, P. 398

ಭಾರತದ ಆಡಳಿತ ವ್ಯವಸ್ಥೆ ಪ್ರಧಾನವಾಗಿ ವ್ಯವಸಾಯ ಜೀವನದ ಆಧಾರ ಹೊಂದಿದ್ದು ಯಾವಾಗಲೂ ಆಡಳಿತ ವಿಕೇಂದ್ರೀಕರಣದತ್ತ ವಾಲುವುದೇ ಹೆಚ್ಚು. ಇಲ್ಲಿನ ಗ್ರಾಮಗಳು, ಅಗ್ರಹಾರಗಳು, ದೇವಸ್ಥಾನಗಳು ಮತ್ತು ಮಠಗಳು ಬಹುಮಟ್ಟಿಗೆ ಸಂಪೂರ್ಣ ಸ್ವಾಯತ್ತತೆಯನ್ನು ಅನುಭವಿಸುತ್ತಿದ್ದುವು. ಭಾರತದಲ್ಲಿ ಬ್ರಿಟಿಷ್ ಆಡಳಿತ ಪದ್ಧತಿ ಜಾರಿಗೆ ಬರುವುದಕ್ಕೆ ಮುಂಚೆಯೆ ಈ ದೇಶದಲ್ಲಿ ಗ್ರಾಮಗಳು ಮತ್ತು ಪಟ್ಟಣಗಳು ಸ್ವಯಮಾಡಳಿತವನ್ನು ನೀಡಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದ ರಾಜ್ಯದ ಆಡಳಿತ ಪದ್ಧತಿಯೊಂದು ರೂಪುಗೊಂಡಿತ್ತೆಂಬ ಅಂಶವನ್ನು ಪಾಶ್ಚಾತ್ಯ ವಿಮರ್ಶಕರು ಅಲಕ್ಷಿಸಿದ್ದಾರೆ. ನಮ್ಮ ಕೆಲವು ಭಾರತೀಯ ವಿದ್ವಾಂಸರು ಐತಿಹಾಸಿಕ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೆ ಈ ವ್ಯಾಖ್ಯಾನದ ಬಲೆಗೆ ಬಿದ್ದು ಸ್ವಯಮಾಡಳಿತ ಸರ್ಕಾರ ಸ್ವದೇಶೀಯವಾದುದೊ ಅಥವಾ ಭಾರತಕ್ಕೆ ಬ್ರಿಟಿಷರ ಕೊಡುಗೆಯೋ ಎಂದು ಸಂದೇಹ ವ್ಯಕ್ತಪಡಿಸಿದ್ದಾರೆ. ಚೋಳರ ಕಾಲದಲ್ಲಿ ಬಹು ಉತ್ತಮ ಮಾದರಿಯ ಸ್ಥಳೀಯ ಸ್ವಯಮಾಡಳಿತ ಸರ್ಕಾರ ಭಾರತದಲ್ಲಿ ಅಸ್ತಿತ್ವದಲ್ಲಿ ಇತ್ತೆಂಬ ಅಭಿಪ್ರಾಯವನ್ನು ಈಗ ಇತಿಹಾಸಜ್ಞರು ಸಾಮಾನ್ಯವಾಗಿ ಒಪ್ಪಿಕೊಂಡಿದ್ದಾರೆ. ವಿಜಯನಗರ ಸಾಮ್ರಾಜ್ಯ ಹಿಂದೆ ಚೋಳರ ಅಧೀನದಲ್ಲಿದ್ದ ಪ್ರದೇಶಗಳಲ್ಲಷ್ಟೆ ಅಲ್ಲದೆ ಕೃಷ್ಣಾ ನದಿಯ ದಕ್ಷಿಣಕ್ಕೆ ಸಮಗ್ರ ಪರ್ಯಾಯದ್ವೀಪದಲ್ಲಿ ತನ್ನ ಅಧಿಪತ್ಯವನ್ನು ಸ್ಥಾಪಿಸಿತ್ತು. ಆದುದರಿಂದ ಇಂಥ ಆಡಳಿತ ವ್ಯವಸ್ಥೆ ಚೋಳರ ಕಾಲದಲ್ಲಿ ಅಸ್ತಿತ್ವದಲ್ಲಿತ್ತೆಂಬುದು ಸ್ಪಷ್ಟವಾಗಿರುವುದರಿಂದ ತರುವಾಯದ ಕಾಲದಲ್ಲಿ ಅದು ಅಸ್ತಿತ್ವದಲ್ಲಿರಲಿಲ್ಲವೆಂದು ಸಂದೇಹ ಪಡಲು ಯಾವ ಕಾರಣವೂ ಇಲ್ಲ.

ಬಿ. ಷೇಕ್ ಅಲಿ*

---

*ವಿಭಾಗ ಸಂಪಾದಕರ ಮಾತು : ಡಾ. ಎ. ವಿ. ವೆಂಕಟರತ್ನಂ ಅವರ 'ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರ' ಗ್ರಂಥದಲ್ಲಿ ; ಕನ್ನಡ ಅಧ್ಯಯನ ಸಂಸ್ಥೆ (ಮೈಸೂರು, 1974), ಪು. ix, x

ಎಚ್. ಆರ್. ರಘುನಾಥ ಭಟ್

ಲಕ್ಷ್ಮಣೇಶ್ವರ ದೇವಾಲಯ

ಕರ್ನಾಟಕಕ್ಕೆ ಭವ್ಯವಾದ ಕಲಾಪರಂಪರೆಯಿದೆ. ಆದರ ಅನೇಕ ಕಲಾ ದೇಗುಲಗಳು ಕಾಲನ ದವಡೆಗೆ ಸಿಕ್ಕು ಪಾಳುಗುಡಿಗಳಾಗಿ ಹೋದರೂ ಉಳಿದ ಹಲವಾರು ಮಂದಿರಗಳು ಈ ಪರಂಪರೆಗೆ ಮೂಕ ಸಾಕ್ಷಿಗಳಾಗಿ ನಿಂತಿವೆ. ಇವುಗಳಲ್ಲಿ ಮಲ್ಲರಾಜ ಪಟ್ಟಣದಲ್ಲಿರುವ[1] ಲಕ್ಷ್ಮಣೇಶ್ವರ ದೇವಾಲಯ ನಮ್ಮ ಗಮನ ಸೆಳೆಯುವಂಥದು.

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು ರಾಮನಾಥಪುರ [2] ಹೋಬಳಿಯಲ್ಲಿರುವ ಮಲ್ಲರಾಜಪಟ್ಟಣ ಇಂದು ಕಾವೇರಿಯ ಬಲದಂಡೆಯಲ್ಲಿರುವ ಸಣ್ಣ ಹಳ್ಳಿ. ಇಲ್ಲಿರುವ ಲಕ್ಷ್ಮಣೇಶ್ವರ ದೇವಾಲಯ ರಾಮೇಶ್ವರ ದೇವಸ್ಥಾನದ ಹಿಂಭಾಗದಲ್ಲಿದ್ದು (ಕಾವೇರಿ ನದಿಯ ಬಲದಡದಲ್ಲಿ) ಅದರ ಮೇಲೆಲ್ಲ ಕುರುಚಲಗಿಡಗಳು ಬೆಳೆದಿವೆ.

ಪಾಳೆಯಗಾರರ ಕಾಲದ ಪ್ರಾಕಾರದೊಳಗೆ ಕಂಡುಬರುವ ಈ ಲಕ್ಷ್ಮಣೇಶ್ವರ ದೇವಾಲಯ ಹೊಯ್ಸಳ ವಾಸ್ತು ಮತ್ತು ಶಿಲ್ಪದ ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾದ್ದು. ಈ ದೇವಾಲಯಕ್ಕೆ ಎರಡು ದ್ವಾರಗಳಿವೆ. ಇವುಗಳಲ್ಲಿ ಉತ್ತರ ಭಾಗಕ್ಕಿರುವುದೇ ಪ್ರಧಾನ ದ್ವಾರ. ಇದರ ಮೇಲ್ಭಾಗದಲ್ಲಿ ಪಾಳೆಯಗಾರರ ಕಾಲದ ಶೈಲಿಯಲ್ಲಿ ರಚಿತವಾದ ಕೈಪಿಡಿಗಳಿವೆ. ಈ ದ್ವಾರದ ಎಡ ಪಕ್ಕದಲ್ಲಿ ಆ ಕಾಲದ ಪಾಕಶಾಲೆ ಮತ್ತು ಉಗ್ರಾಣಗಳಿವೆ. ಪ್ರಾಕಾರದ ಪಶ್ಚಿಮ ದ್ವಾರ ಕುಸಿದುಹೋಗಿದೆ.

ಹೊಯ್ಸಳ ದೇವಾಲಯಗಳನ್ನು ಸಾಮಾನ್ಯವಾಗಿ ಬಳಪದಕಲ್ಲು ಇಲ್ಲವೆ ಸಾಬೂನುಗಲ್ಲಿನಿಂದ ಕಟ್ಟಿರುತ್ತಾರೆ. ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿರುವ ಸೋಮೇಶ್ವರ ದೇವಾಲಯದ ಗರ್ಭಗೃಹ ಮತ್ತು ತಲಕಾಡಿನ ಕೀರ್ತಿನಾರಾಯಣ ದೇವಾಲಯಗಳು ಇದಕ್ಕೆ ಅಪವಾದಗಳಾಗಿವೆ.[3] ಈ ಸಾಲಿಗೆ ಸೇರಿಸಬೇಕಾದ ಲಕ್ಷ್ಮಣೇಶ್ವರ ದೇವಾಲಯವನ್ನು ಸಂಪೂರ್ಣವಾಗಿ ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದೆ. ಆರ್. ನರಸಿಂಹಾಚಾರ್ಯರ ಅಭಿಪ್ರಾಯದ ಪ್ರಕಾರ ಈ ದೇವಾಲಯ ಹೊಯ್ಸಳ ಸೋಮೇಶ್ವರನ ಕಾಲದ್ದು (೧೨೩೫-೧೨೬೦).[4] ಆದರೆ ದೇವಾಲಯದ ಕೆಲವು ಭಾಗಗಳನ್ನು ಗಮನಿಸಿದರೆ ಇದು ಇನ್ನು ತುಸು ಪ್ರಾಚೀನವಾದ ಕಟ್ಟಡವೆಂದು ತಿಳಿದೀತು. ಅದೇನಿದ್ದರೂ ವೀರಸೋಮೇಶ್ವರನ ಶಾಸನಗಳು ಈ ಭಾಗದಲ್ಲಿ ಸಿಕ್ಕಿವೆ.[5]

---


[1] ಇದು ಹಾಸನದಿಂದ 49.9 ಕಿಮೀ. ದೂರದಲ್ಲೂ ಅರಕಲಗೂಡಿನಿಂದ 19.4 ಕಿಮೀ ಅಂತರದಲ್ಲೂ ಇದೆ

[2] ದಕ್ಷಿಣ ಕಾಶಿಯೆಂದು ಹೆಸರಾಗಿರುವ ರಾಮನಾಥಪುರದಲ್ಲಿ ಸುಮಾರು ಏಳು ದೇಗುಲಗಳಿವೆ. ಅವುಗಳಲ್ಲಿ ರಾಮೇಶ್ವರ ದೇವಾಲಯ ಹೊಯ್ಸಳ ವಾಸ್ತುಶಿಲ್ಪಕ್ಕೆ ಒಂದು ಮನೋಹರವಾದ ಉದಾಹರಣೆ. ಇದರ ಗರ್ಭಗೃಹದ ತಲವಿನ್ಯಾಸ ಕುತೂಹಲಕಾರಿಯಾದ್ದು.

[3] B. Sheik Ali (*Ed.*) *Hoysala Dynasty*, Mysore 1972, ಪು. 183

[4] *MAR*, 1936, ಪು. 11–12, ಆದರೂ ಇದರಲ್ಲಿ ಚೋಳವಾಸ್ತುಶಿಲ್ಪ ಶೈಲಿಯ ಪ್ರಭಾವವನ್ನು ತಕ್ಕಮಟ್ಟಿಗೆ ಗುರುತಿಸಬಹುದು.

[5] *ECV*, Ag. 53 (1252), Ag. 55 (1255)



ಚಿತ್ರ 1 ಲಕ್ಷ್ಮೇಶ್ವರ ದೇವಾಲಯದ ತಲವಿನ್ಯಾಸ (ಇತರ ಉಪ ದೇವಾಲಯಗಳನ್ನೊಳಗೊಂಡಂತೆ)

ಲಕ್ಷ್ಮೇಶ್ವರ ದೇವಾಲಯ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಚಿಕ್ಕ ಮುಖಮಂಟಪ ಗಳನ್ನೊಳಗೊಂಡಿದೆ. ಇದರ ತಲ ವಿನ್ಯಾಸ ಆಯತಸ್ರವಾಗಿದೆ (ಚಿತ್ರ 1) ಗರ್ಭಗೃಹದಲ್ಲಿರುವ

ಶಿವಲಿಂಗಕ್ಕೆ ಲಕ್ಷ್ಮಣೇಶ್ವರನೆಂದು ಹೆಸರು. ಗರ್ಭಗೃಹದ ನಾಲ್ಕೂ ಮೂಲೆಗಳಲ್ಲಿ ನಾಲ್ಕು ಸರಳವಾದ ಸ್ತಂಭಿಕೆಗಳಿವೆ. ಇವುಗಳ ಮೇಲೆ ನಿಂತ ಚಾವಣಿಯಲ್ಲಿ ಪದ್ಮವಿನ್ಯಾಸವಿದೆ. ಇಂಥದೆ ಉಬ್ಬುಗೆತ್ತನೆಯ ಇನ್ನೊಂದು ಶಿಲ್ಪವಿನ್ಯಾಸವನ್ನು ಅಂತರಾಳದ ಚಾವಣಿಯ ಮೇಲೂ ನೋಡಬಹುದು. ಅಂತರಾಳದಲ್ಲಿ ಸುಂದರವಾದ ನಂದಿ ವಿಗ್ರಹವಿದೆ. ಇದೊಂದು ಗ್ರಾನೈಟ್ ಶಿಲೆಯ



ಚಿತ್ರ 2 ಲಕ್ಷ್ಮಣೇಶ್ವರ ದೇವಾಲಯದ ದೇವಕೋಷ್ಠ

ಶಿಲ್ಪ. ಇದಲ್ಲದೆ ಇನ್ನು ಕೆಲವು ಭಗ್ನ ಮೂರ್ತಿಗಳನ್ನು ಇಲ್ಲಿ ಕಾಣಬಹುದು. ಇದನ್ನು ದಾಟಿ ನವರಂಗಕ್ಕೆ ಬಂದರೆ ಒಂಬತ್ತು ಅಂಕಣಗಳ ವಿಶಾಲವಾದ ಸಭಾಮಂಟಪ ನಮ್ಮ ಗಮನವನ್ನು ಸೆಳೆಯುತ್ತದೆ. ಇದರ ಮಧ್ಯಭಾಗದಲ್ಲಿರುವ ನಾಲ್ಕು ಪ್ರಧಾನ ಸ್ತಂಭಗಳು ದುಂಡಾಗಿದ್ದರೂ ಕಡಾಯಿ ಹಿಡಿದವಲ್ಲ. ಇವುಗಳ ತುದಿಯಲ್ಲಿ ಚಕ್ರಾಕಾರದ ಬೋದಿಗೆಯಿದ್ದು ಇವುಗಳ ಮೇಲೆ ಬಹಳ ಆಳವಿಲ್ಲದ–ತಟ್ಟೆಯಾದ–ಮುಚ್ಚಿಗೆಯಿದೆ. ಆದರ ಮೇಲೆ ಸುಂಗರವಾದ ಕಮಲವಿನ್ಯಾಸವಿದೆ. ಉಳಿದ

ಚಾವಣಿಗಳು ಚಪ್ಪಟೆಯಾಗಿವೆ, ಅವುಗಳ ಮೇಲೆ ವಿಶೇಷವಾದ ಶಿಲ್ಪವಿನ್ಯಾಸವೇನಿಲ್ಲ. ನವರಂಗದ ದಕ್ಷಿಣ ಭಾಗದ ಗೋಡೆಗೆ ಹೊಂದಿಕೊಂಡಂತೆ ಮೂರು ಕೋಣೆಗಳಿವೆ. ಮೊದಲನೆಯ ಕೊಠಡಿಯಲ್ಲಿ ಅಷ್ಟೇನೂ ಸುಂದರವಲ್ಲದ ಭೈರವಮೂರ್ತಿಯಿದೆ. ಉಳಿದ ಎರಡೂ ಕೋಣೆಗಳಲ್ಲೂ ಈಗ ವಿಗ್ರಹಗಳು ಕಂಡುಬರುವುದಿಲ್ಲ.

ನವರಂಗದ ಪೂರ್ವದ್ವಾರದ ಮುಂಭಾಗದಲ್ಲಿ ಪುಟ್ಟ ಮುಖಮಂಟಪವಿದೆ. ಇದರ ಎರಡೂ



ಚಂಡಿಕೇಶ್ವರ (I) ವಿಗ್ರಹ

ಬದಿಗಳೂ ಭಗ್ನವಾಗಿವೆ. ಗ್ರಾನೈಟ್ ಶಿಲೆಯ ದುಂಡನೆಯ ಕಂಬಗಳ ಮೇಲೆ ಛಾವಣಿಯಿದೆ. ಇವರ ತೊಲೆಗಳ ಮೇಲಿರುವ ಕುತೂಹಲಕಾರಿಯಾದ ಉಬ್ಬುಗೆತ್ತನೆ ಶಿಲ್ಪಗಳು ನಮ್ಮನ್ನು ಆಕರ್ಷಿಸುತ್ತವೆ. ಅವುಗಳಲ್ಲಿ 'ಅನಂತಬಂಧ' ಎಂದು ಕರೆಯಲಾಗುವ ಒಂದು ಸಂಕೀರ್ಣ ಶಿಲ್ಪವನ್ನು ಮುಖ್ಯವಾಗಿ ಗಮನಿಸಬೇಕು.



ಲಕ್ಷ್ಮಣೇಶ್ವರ ದೇಗುಲದ ಬಳಿ ಇರುವ ಪಾರ್ವತಿ ಗುಡಿ

ಲಕ್ಷ್ಮಣೇಶ್ವರ ದೇವಾಲಯದ ಹೊರಭಾಗ ಒಳಭಾಗಕ್ಕಿಂತಲೂ ಹೆಚ್ಚು ವೈಶಿಷ್ಟ್ಯಪೂರ್ಣವಾದ್ದು. ವಾಸ್ತು ಮತ್ತು ಶಿಲ್ಪ ದೃಷ್ಟಿಗಳಿಂದ ಕುತೂಹಲಕಾರಿಯಾದ ಅನೇಕ ಕೆತ್ತನೆ ಕೆಲಸಗಳನ್ನು ನಾವಿಲ್ಲಿ ನೋಡಬಹುದು. ದೇವಾಲಯದ ಅಧಿಷ್ಠಾನದಲ್ಲಿ ಸಾಮಾನ್ಯವಾಗಿ ಗಮನಿಸಬಹುದಾದ ಶಿಲ್ಪಪಟ್ಟಿಕೆಗಳಿಲ್ಲ. ಗ್ರಾನೈಟ್ ಫಲಕಗಳನ್ನು ಒಂದರಮೇಲೊಂದಿಟ್ಟು ಭಿತ್ತಿಭಾಗವನ್ನು ನಿರ್ಮಿಸಲಾಗಿದೆ. ಇದರ ಮೇಲೆ ಅಲ್ಲಲ್ಲಿ ತೆಳುವಾದ ಸ್ತಂಭಿಕೆಗಳನ್ನೂ ಕುಡು ಮತ್ತಿತರ ವಾಸ್ತುಶಿಲ್ಪ ವಿನ್ಯಾಸಗಳನ್ನೂ ಬಹು ನಾಜೂಕಾಗಿ ಚಿತ್ರಿಸಲಾಗಿದೆ. ಇವುಗಳಲ್ಲಿ ದೇವಕೋಷ್ಠ ಮಾದರಿಗಳು ಗಮನಾರ್ಹವಾದವು. ಗರ್ಭಗೃಹ ಮತ್ತು ಅಂತರಾಳದ ಹೊರ ಗೋಡೆಯ ಮೇಲಿರುವ ದೇವಕೋಷ್ಠಗಳನ್ನು ಇಲ್ಲಿ ಮುಖ್ಯವಾಗಿ ಉದಾಹರಿಸಬಹುದು. ಇವೆಲ್ಲ ಕೇವಲ ಆಲಂಕಾರಿಕ ಗೂಡುಗಳು. ಅವುಗಳ ಮೇಲ್ಭಾಗದಲ್ಲಿ ಅತ್ಯಂತ ಕುತೂಹಲಕಾರಿ ಉಬ್ಬುಶಿಲ್ಪಗಳಿವೆ. ದೇವಾಲಯದ ಗರ್ಭಗೃಹದ ಹಿಂಭಾಗದ ಗೋಡೆಯ ಮೇಲಿರುವ ದೇವಕೋಷ್ಠದ ಮೇಲ್ಭಾಗದಲ್ಲಿ ಸಿಂಹಲಲಾಟದಿಂದ ಹೊರಟ ತೋರಣ. ಅದರೊಳಗೆ ಆನೆಯ ಚಿತ್ರಣ ನಮ್ಮ ಗಮನವನ್ನು ಸೆಳೆಯುತ್ತವೆ. ಆನೆ ಜಿಗಿದು ವ್ಯಕ್ತಿಯೊಬ್ಬನನ್ನು ತುಳಿಯುತ್ತಿರುವ ದೃಶ್ಯ ಬಹಳ ಪರಿಣಾಮಕಾರಿಯಾಗಿ ಮೂಡಿದೆ. ಅಂತರಾಳದ ಹೊರ ಗೋಡೆಯ ಮೇಲೆ (ದೇವಾಲಯದ ಎಡಭಾಗಕ್ಕೆ) ನಿರ್ಮಿತವಾಗಿರುವ ಗೂಡಿನ ತೋರಣ ಎಲ್ಲಕ್ಕಿಂತ ಹೆಚ್ಚು ಸುಂದರವಾದ್ದು. ಮೇಲ್ಭಾಗದಲ್ಲಿ ಸಿಂಹಲಲಾಟದಿಂದ ಹೊರಟ ಲತಾತೋರಣವೂ ಅದರ ಕೆಳಭಾಗದಲ್ಲಿ ಕಲಾತ್ಮಕ

ವಾಗಿ ಕೆತ್ತಿದ ಜೋಡಿಯಾಳಿಗಳ ಕೆತ್ತನೆಗಳೂ, ಅವುಗಳ ಕೆಳಭಾಗದಲ್ಲಿ ಆಚೀಚೆ ಎರಡು ಗಂಡಭೇರುಂಡ ಪಕ್ಷಿಗಳ (?) ಉಬ್ಬುಗೆತ್ತನೆಗಳೂ ನಮ್ಮನ್ನಾಕರ್ಷಿಸುತ್ತವೆ. ಇದರ ಒಟ್ಟು ಸಂಯೋಜನೆ, ಕೆತ್ತನೆಯ ಸೊಗಸುಗಾರಿಕೆ ಅತ್ಯಂತ ಆಕರ್ಷಕವಾದುವು. ಗ್ರಾನೈಟ್ ಕಣಿಶಿಲೆಯಾದರೂ ಕೆತ್ತನೆಯು ನಯನಾಜೂಕು ಮೂಡಿಬಂದಿದೆ. ಇನ್ನೊಂದು ದೇವಕೋಷ್ಠದ ಲತಾತೋರಣದಲ್ಲಿ ಎರಡು ಸಿಂಹಗಳನ್ನು ಎದುರು ಬದರಾಗಿ ಕೆತ್ತಿದರೂ ಮೂರು ಸಿಂಹಗಳಿದ್ದಂತೆ ತೋರುತ್ತದೆ. ಇದರ ವಿಶೇಷವೆಂದರೆ, ಈ ಮೂರು ಸಿಂಹಗಳಿಗೂ ಒಂದೇ ಸಂಯುಕ್ತ (ಸಿಂಹ) ಮುಖವನ್ನು ಕೆತ್ತಿರುವುದು. ಮತ್ತೊಂದು ತೋರಣದ ಒಳ ಭಾಗದಲ್ಲಿ ಮುದ್ದಾದ ನೃತ್ಯಗಣಪತಿಯ ಉಬ್ಬುಗೆತ್ತನೆ ಮೋಹಕವಾದ್ದು. ಒಟ್ಟಿನಲ್ಲಿ ಈ ದೇವಕೋಷ್ಠ.



ಚಿತ್ರ ೩ ಲಕ್ಷ್ಮಣೇಶ್ವರ ದೇವಾಲಯದ ಹೊರ ಭಿತ್ತಿಯ ಮೇಲಿರುವ ಉಬ್ಬು ಶಿಲ್ಪಗಳು

ಮಾದರಿಗಳು ದೇವಾಲಯದ ಸೊಬಗನ್ನು ಹೆಚ್ಚಿಸಿವೆ. ಹೊಯ್ಸಳರ ಇತರ ದೇವಾಲಯಗಳಲ್ಲಿರುವ ದೇವಕೋಷ್ಠಗಳಿಗಿಂತ ಇವು ಭಿನ್ನವಾಗಿರುವುದೂ ಗಮನಾರ್ಹ.[6] ಲಕ್ಷ್ಮಣೇಶ್ವರ ದೇಗುಲದ ಹೊರಗೋಡೆಯ ಮೇಲೆ ಕೆತ್ತಿರುವ ಭಿತ್ತಿಶಿಲ್ಪಗಳು ಗಮನಾರ್ಹವಾಗಿವೆ. ಸಾಮಾನ್ಯವಾಗಿ ಹೊಯ್ಸಳ ದೇವಾಲಯಗಳ ಹೊರಗೋಡೆಗಳಲ್ಲಿ ರಾಮಾಯಣ, ಮಹಾಭಾರತಗಳಿಂದ ಆರಿಸಲಾದ ಕಥಾನಕಗಳ ಶಿಲ್ಪಗಳಿರುವುದುಂಟು. ಅವುಗಳನ್ನೊಳಗೊಂಡ ಪಟ್ಟಿಕೆಗಳು ದೇಗುಲದ ಸುತ್ತಲೂ ಹಬ್ಬಿರುವುದುಂಟು. ಆದರೆ ಲಕ್ಷ್ಮಣೇಶ್ವರ ದೇವಾಲಯದಲ್ಲಿ ಈ ಕಥಾನಕಗಳ ಚಿತ್ರಣ ಬಿಡಿಬಿಡಿಯಾಗಿದೆ. ದೇವಾಲಯದ ಬಲಗೋಡೆಯ ಮೇಲೆ ಕಂಡುಬರುವ ಉಬ್ಬುಗೆತ್ತನೆ ಶಿಲ್ಪಗಳನ್ನು ಇಲ್ಲಿ ಉದಾಹರಿಸಬಹುದು. ಹನುಮಂತ ರಾಮ ಲಕ್ಷ್ಮಣರನ್ನು ಮೊದಲ ಬಾರಿಗೆ ಭೇಟಿ ಮಾಡುತ್ತಿರುವ ಈ ಚಿತ್ರದಲ್ಲಿ ಬಾಳೆಹಣ್ಣಿನ ಗೊನೆಯನ್ನೂ ಗಮನಿಸಬಹುದು. ಈ ಚಿತ್ರದಲ್ಲಿ ಸ್ಥಳೀಯ ಕಲಾವಿದನ ಕಲ್ಪನೆಗೆ ಉಚಿತವಾದ ಅವಕಾಶವಿದ್ದಂತೆ ತೋರುತ್ತದೆ. ಇನ್ನೊಂದು ಶಿಲ್ಪಕಥಾನಕದಲ್ಲಿ ಸೀತಾದೇವಿ ರಾಮನ ರಕ್ಷಣೆಗಾಗಿ ಲಕ್ಷ್ಮಣನನ್ನು ಕಳಿಸುತ್ತಿರುವ ಮಾಯಾಮೃಗದ ಸನ್ನಿವೇಶ ಸುಂದರವಾಗಿದೆ. ಇವಲ್ಲದೆ ಕಿರಾತಾರ್ಜುನೀಯ ಹಾಗೂ ಇತರ ಕುತೂಹಲಕಾರಿ ಚಿತ್ರಗಳನ್ನು ಇಲ್ಲಿ ಗಮನಿಸಬಹುದು. ವ್ಯಾಘ್ರಪಾದ ಶಿವಲಿಂಗವನ್ನು ಪೂಜಿಸುತ್ತಿರುವುದು. ವ್ಯಕ್ತಿಯೊಬ್ಬ ಮೀನು, ಸಿಂಹ ಹಾಗೂ ಹುಲಿಗಳ ಮೇಲೆ ಸವಾರಿ ಮಾಡುತ್ತಿರುವುದು, ಪ್ರಧಾನವಾಗಿ ಎರಡು ಕೋತಿಗಳ ಕೆತ್ತನೆಯಲ್ಲಿ ನಾಲ್ಕು ಮಂಗಗಳಿದ್ದಂತೆ ತೋರಿಸುವ ಕೌಶಲಪೂರ್ಣ ವಾನರ 'ಬಂಧ', ಎರಡು ಹೋತಗಳು ಹೋರಾಡುತ್ತಿರುವುದು ಮತ್ತು ಎರಡೂ ಪಕ್ಷದವರು ತಮ್ಮತಮ್ಮ ಹೋತಗಳನ್ನು ಹುರಿದುಂಬಿಸುತ್ತಿರುವುದು, ಸ್ತ್ರೀಯೊಬ್ಬಳು ಮೃದಂಗವನ್ನು ಬಾರಿಸುತ್ತಿರುವುದು, ಮತ್ತೊಬ್ಬಳು ತನ್ನ ಇಷ್ಟಲಿಂಗವನ್ನು ಪೂಜಿಸುತ್ತಿರುವುದು. ಮುಂತಾದ ಉಬ್ಬುಗೆತ್ತನೆ ಶಿಲ್ಪಗಳನ್ನು ಮುಖ್ಯವಾಗಿ ಇಲ್ಲಿ ಹೆಸರಿಸಬೇಕು. ಕಣಶಿಲೆಯ ಗೋಡೆಯ ಮೇಲೆ ಕೆತ್ತಿದ ಈ ಶಿಲ್ಪಗಳಲ್ಲಿ ಹೊಯ್ಸಳ ಶೈಲಿಯ ವೈಶಿಷ್ಟ್ಯಗಳಾದ ಮಣಿಕೆಲಸವಾಗಲಿ, ಅತಿಯಾದ ಆಭರಣಾಲಂಕರಣೆಯಾಗಲಿ, ಸೂಕ್ಷ್ಮ ಕೆತ್ತನೆ ಕೆಲಸವಾಗಲಿ ಎದ್ದುಕಾಣುವುದಿಲ್ಲ ನಿಜ. ಇದಕ್ಕೆ ಪ್ರಧಾನವಾದ ಕಾರಣವೆಂದರೆ ಮೃದುವಾದ ಬಳಪದ ಕಲ್ಲಿನ ಬದಲು ಕಠಿಣವಾದ ಕಣಶಿಲೆಯನ್ನು ಬಳಸಿರುವುದೇ ಆಗಿರಬಹುದು. ಅದೇನಿದ್ದರೂ ಸರಳವಾದ ಈ ಕೆತ್ತನೆಗಳಲ್ಲಿ ಸ್ಥಳೀಯ ಶೈಲಿಯ ಪ್ರಭಾವ ಕಂಡುಬರುತ್ತದೆ. ಅಷ್ಟೇ ಅಲ್ಲ, ಜಾನಪದ ಕಲಾದೃಷ್ಟಿಯಿಂದ ಇವು ಬಹಳ ಕುತೂಹಲಕಾರಕವಾಗಿವೆ. ಉಡುಪು ಆಭರಣಗಳಲ್ಲಿ, ಕೇಶಶೃಂಗಾರದಲ್ಲಿ, ಸಂಗೀತವಾದನಗಳಲ್ಲಿ ಇದನ್ನು ಗುರುತಿಸಬಹುದು. ಈ ದೃಷ್ಟಿಯಿಂದ ಲಕ್ಷ್ಮಣೇಶ್ವರ ದೇವಾಲಯದ ಭಿತ್ತಿಶಿಲ್ಪಗಳನ್ನು ವಿವರವಾಗಿ ಅಧ್ಯಯನ ಮಾಡುವುದು ಅವಶ್ಯವಿದೆ.

ಮಲ್ಲರಾಜ ಪಟ್ಟಣದ ಲಕ್ಷ್ಮಣೇಶ್ವರ ದೇವಾಲಯದ ಪ್ರಾಂಗಣದಲ್ಲಿ ಇನ್ನು ಕೆಲವು ಉಪದೇವಾಲಯಗಳಿವೆ. ಪ್ರಧಾನ ದೇಗುಲದ ನೈರುತ್ಯಕ್ಕಿರುವ ಪಾರ್ವತಿ ಗುಡಿಯನ್ನು ಇಲ್ಲಿ ಗಮನಿಸಬಹುದು. ಇದು ವಿಜಯನಗರಕಾಲಕ್ಕಿಂತ ಈಚಿನ ಕಟ್ಟಡವೆಂದು ತೋರುತ್ತದೆ. ಪ್ರಧಾನದೇವಿಯಾದ ಪಾರ್ವತಿಯ ವಿಗ್ರಹ ಹಾಗೂ ದ್ವಾರಬಂಧದ ಮೇಲೆ ಕೆತ್ತಿರುವ ದ್ವಾರಪಾಲಕರ ಉಬ್ಬುಗೆತ್ತನೆ ಶಿಲ್ಪಗಳು ಈ ಮಾತನ್ನು ಸಮರ್ಥಿಸುತ್ತವೆ. ಇವು ಲಕ್ಷ್ಮಣೇಶ್ವರ ದೇವಾಲಯದಲ್ಲಿ ಕಂಡು ಬರುವ ಶಿಲ್ಪಗಳಷ್ಟು ಮನೋಹರವಾಗಿಲ್ಲ, ನಾಜೂಕಾಗಿಲ್ಲ. ಇನ್ನೆರಡು ಪುಟ್ಟ ಗುಡಿಗಳು ಭಗ್ನವಾಗುತ್ತಿವೆ. ಅವುಗಳಲ್ಲಿ ದಕ್ಷಿಣಾಮೂರ್ತಿ ಹಾಗೂ ಚಂಡಿಕೇಶ್ವರನ ವಿಗ್ರಹಗಳಿವೆ. ಇವುಗಳಲ್ಲಿ ಚಂಡಿ

---

6 ಹೊಯ್ಸಳ ದೇವಾಲಯದ ಭಿತ್ತಿಯ ದೇವಕೋಷ್ಠಗಳಲ್ಲಿ ಸಾಮಾನ್ಯವಾಗಿ 'ಶಿಖರ ಮಾದರಿ'ಗಳಿರುತ್ತವೆ.

ಕೇಶ್ವರನ ವಿಗ್ರಹ ಗಮನಾರ್ಹವಾದ್ದು.[7] ಬಳಪದ ಕಲ್ಲಿನಲ್ಲಿ ಕೆತ್ತಲಾದ ಈ ವಿಗ್ರಹದಲ್ಲಿ ಕೆತ್ತನೆ ಕೆಲಸಗಳು ಸಾಕಷ್ಟಿವೆಯಾದರೂ ಇದು ಸ್ಥಳೀಯ ಕಲಾವಿದನ ಕೃತಿಯೆಂಬುದನ್ನು ಕೂಡಲೇ ಗುರುತಿಸಬಹುದು. ಮೃದುಕಲ್ಲಿನ ಈ ವಿಗ್ರಹಗಳು ಭಗ್ನವಾಗಿವೆ. ಇನ್ನೊಂದು ಗುಡಿಯಲ್ಲಿ ಶಿವಲಿಂಗ ಮಾತ್ರ ಕಂಡುಬರುತ್ತಿದೆ. ಉಳಿದ ಭಾಗಗಳೆಲ್ಲ ಬಿದ್ದುಹೋಗುತ್ತಿವೆ.

ಒಟ್ಟಿನಲ್ಲಿ ಮಲ್ಲರಾಜಪಟ್ಟಣದ ಲಕ್ಷ್ಮಣೇಶ್ವರ ದೇವಾಲಯ ವಾಸ್ತುಶಿಲ್ಪದ ದೃಷ್ಟಿಯಿಂದ ಗಮನಾರ್ಹವಾದ್ದು. ಹೊಯ್ಸಳ ವಾಸ್ತುಶೈಲಿಯಲ್ಲಿ ಕಣಶಿಲೆಯ ಕಟ್ಟಡಗಳು ಬಹಳ ವಿರಳ ಎಂಬ ಕಾರಣದಿಂದಲೂ ಈ ದೇವಾಲಯ ಅಪೂರ್ವವಾದ್ದು ಎಂದು ಹೇಳಬಹುದು. ಇವೆಲ್ಲಕ್ಕಿಂತ ಮುಖ್ಯವಾಗಿ ದೇವಕೋಷ್ಠಗಳ ಸಿಂಹಲಲಾಟ ತೋರಣ ಹಾಗೂ ಅಲಂಕರಣೆ ಹಾಗೂ ಭಿತ್ತಿಶಿಲ್ಪಗಳು ನಮ್ಮ ಗಮನ ಸೆಳೆಯುವಂಥವು. ಈ ಕಾರಣಗಳಿಗಾಗಿ ಇದೊಂದು ಅಪೂರ್ವ ದೇಗುಲವೆನ್ನಬಹುದು.

---

[7] ಇದನ್ನು ಈಗ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಇಲಾಖೆಯ ವಸ್ತುಸಂಗ್ರಹಾಲಯದಲ್ಲಿಡಲಾಗಿದೆ.

ಕಂಠೀರಾವ್

ನೀಷೆ ತತ್ತ್ವದರ್ಶನ

ಫ್ರೆಡರಿಕ್ ವಿಲ್ ಹೆಲ್ಮ್ ನೀಷೆ ಖ್ಯಾತ ಜರ್ಮನ್ ತತ್ತ್ವಜ್ಞಾನಿ. ಅವನ ಜೀವನ ಕಳೆದ ಶತಮಾನದ ಉತ್ತರಾರ್ಧದಲ್ಲಿ ಪ್ರಾರಂಭವಾಗಿ ಶತಮಾನದ ಕೊನೆ ಅವನ ಜೀವಿತದ ಕೊನೆಯಾಯಿತು. ಆಗ ಅವನು ನಾಲ್ವತ್ತರ ಗಡಿ ದಾಟುವುದರಲ್ಲಿದ್ದ. ಇಷ್ಟು ಅಲ್ಪಕಾಲದಲ್ಲಿ ತನ್ನ ಪ್ರಗಲ್ಭವಾದಸರಣಿಯಿಂದ ಪ್ರಾಜ್ಞಲೋಕದಲ್ಲಿ ಚಿರಸ್ಥಾನ ಗಳಿಸಿದುದಲ್ಲದೆ ಜನಾಂಗ ಜೀವನಕ್ಕೆ ಮಾರ್ಗದರ್ಶನ ಮಾಡಿದ. ತಾತ್ತ್ವಿಕ ವಿವೇಚನೆಯ ಸ್ವತಂತ್ರ ಪ್ರವರ್ತಕನೆನಿಸಿದ. ಅವನು ತನ್ನ ತಾತ್ತ್ವಿಕ ವಿಚಾರಗಳನ್ನು ಸಾಂಪ್ರದಾಯಿಕವಾದ ನ್ಯಾಯ, ತರ್ಕ ಮುಂತಾದ ಪ್ರಮಾಣಾಧಾರಗಳಿಂದ ನಿರೂಪಿಸಲಿಲ್ಲ. ಅವನು ಲೋಕದ ಮುಂದಿಟ್ಟ ತಾತ್ತ್ವಿಕ ಅಂಶಗಳು ಹೆಚ್ಚಾಗಿ ನಾಣ್ಣುಡಿಯ ರೂಪದಲ್ಲಿವೆ, ಸೂತ್ರ ರೂಪದಲ್ಲಿವೆ ಎಂದು ಹೇಳಿದರೆ ಹೆಚ್ಚು ಸಮಂಜಸವಾದೀತು. ವಾದವನ್ನು ಅನಾವಶ್ಯಕವಾಗಿ ಬೆಳೆಸಿಲ್ಲ. ಅನಾರೋಗ್ಯ, ಅಲ್ಪಾಯುಷ್ಯಗಳೇ ಈ ಸಂಕ್ಷಿಪ್ತತೆಗೆ ಕಾರಣವಾಗಿರಬೇಕು. ಒಂದು ಗ್ರಂಥದುದ್ದಕ್ಕೂ ಹೇಳಬಹುದಾದಷ್ಟು, ಪ್ರಾಯಶಃ ಕೆಲವರಿಗೆ ಒಂದು ಗ್ರಂಥದುದ್ದಕ್ಕೂ ಹೇಳಲಾಗದಷ್ಟು, ವಿಷಯವನ್ನು ಅವನು ಒಂದೊಂದು ಮಾತಿನಲ್ಲಿ ಅಡಗಿಸಿದ್ದಾನೆ.

ನೀಷೆ 1844ರಲ್ಲಿ ಜರ್ಮನಿಯ ಸಂಪ್ರದಾಯಬದ್ಧವಾದ ಒಂದು ಕ್ರೈಸ್ತ ಮನೆತನದಲ್ಲಿ ಜನ್ಮ ತಾಳಿದ. ಬಾಲ್ಯದಲ್ಲಿಯೇ ಸುತ್ತಲಿನ ವಾತಾವರಣದ ಸನಾತನ ಸಂಪ್ರದಾಯಪ್ರಿಯತೆ ಅವನ ಮನಸ್ಸನ್ನು ಸಾಕಷ್ಟು ಕ್ಷೋಭೆಗೀಡುಮಾಡಿತು. ಧರ್ಮಪೀಠಗಳು, ಕ್ರೈಸ್ತ ಬೋಧಕರು ಸಂಸಾರ ಪರಿತ್ಯಾಗದ ನೀತಿಯನ್ನು ಬೋಧಿಸುವುದು, ಅವ್ಯವಹಾರ್ಯವಾದ ವೈರಾಗ್ಯವನ್ನು ಸಮರ್ಥಿಸುವುದು ಮತ್ತು ಜೀವನದಲ್ಲಿ ಜಿಗುಪ್ಸೆ ಹಾಗೂ ನೈರಾಶ್ಯ ಹುಟ್ಟುವಂತೆ ಜಗತ್ತಿನ ಪ್ರತಿ ವಸ್ತುವಿನಲ್ಲಿ ಅಮಂಗಲ ನಿರೂಪಣೆ ಮಾಡುವುದು ಅವನಿಗೆ ಹೇಯವೆನಿಸಿ ಧಾರ್ಮಿಕ ಭಾವನೆಗೆ ಮತ್ತು ಧರ್ಮ ಜಿಜ್ಞಾಸೆಗೆ ಅವನ ಮನಸ್ಸು 'ನಾಸ್ತಿ' ಎಂದು ಹೇಳುವಂತಾಯಿತು. ಜೀವನದಲ್ಲಿ ಜಾಡ್ಯ, ಸಾವು ನೋವು, ಪರಪೀಡೆ, ದೈನ್ಯ ದಾರಿದ್ರ್ಯಗಳನ್ನು ಕಂಡು (ಗೌತಮ ಬುದ್ಧನ ಹಾಗೆ) ಜಿಗುಪ್ಸೆಗೊಂಡ ನೀಷೆ ಜೀವನ ಮತ್ತು ಅದಕ್ಕೆ ಆಧಾರವಾದ ಈ ಸೃಷ್ಟಿಯ ಬಗ್ಗೆ ಅಷ್ಟೇ ಅನಿಷ್ಟ ಕಲ್ಪನೆಯನ್ನು ತಾಳಿದ. ಈ ಸೃಷ್ಟಿಗೆ ಗೊತ್ತುಗುರಿಯಿಲ್ಲ; ನಿಯಾಮಕ ಶಕ್ತಿಯಿಲ್ಲ–ಮುಂತಾಗಿ ವಾದ ಹೂಡಿ ತಾನು ಪರಮನಾಸ್ತಿಕನೆಂದು ಸಾರಿದ. ಆದರೆ ಅವನು ತೀಕ್ಷ್ಣ ವಿಚಾರಪರನಾದುದರಿಂದ ರೂಸೊ, ಷೋಪೆನ್‌ಹೌರ್, ಸ್ಪೆನ್ಸರ್ ಮುಂತಾದವರಂತೆ (ಅವರ ವಿಚಾರ ಪ್ರಭಾವಕ್ಕೊಳಗಾಗಿದ್ದರೂ) ನೈರಾಶ್ಯಕ್ಕೆಡೆಗೊಟ್ಟು ಜೀವನಕ್ಕೆ 'ನಾಸ್ತಿ' ಎನ್ನಲಿಲ್ಲ. ಅನಿಷ್ಟ ನಿವೃತ್ತಿ ಹಾಗೂ ಇಷ್ಟ ಪ್ರಾಪ್ತಿಗೆ ಮನುಷ್ಯನು ಯತ್ನ ಮಾಡಲೇಬೇಕು. ಮಹಾಪುರುಷರ ಜೀವನಗಳೆಲ್ಲ ಈ ಮಾತನ್ನು ಸಾರಿ ಹೇಳುವುವು ಎಂದು ಹೇಳಿ ಜಾಡ್ಯಗ್ರಸ್ತವಾದ ತನ್ನ ಜೀವನಕ್ಕೆ ಧೃತಿಯನ್ನೂ ಶಾಂತಿಯನ್ನೂ ಒದಗಿಸಿಕೊಂಡುದಲ್ಲದೆ ಮಾನವ ಜೀವಿತಕ್ಕೊಂದು ಗತಿಸಾಮಾನ್ಯ ತತ್ತ್ವವನ್ನೂ ಕಲ್ಪಿಸಲು ಯತ್ನಿಸಿದ್ದಾನೆ. ಆತ ಜೀವನದಲ್ಲಿ ಆಳವಾದ ದೃಷ್ಟಿಯನ್ನು ಹೊಂದಲು ಪ್ರಾಚೀನ ಸಾಹಿತ್ಯವನ್ನು ನಿಷ್ಠೆಯಿಂದ ಅಭ್ಯಸಿಸಿದ, ಕೆಲ ಕಾಲ ಪ್ರಾಕ್ತನ ಶಬ್ದಶಾಸ್ತ್ರದ ಪ್ರಾಧ್ಯಾಪಕನಾಗಿದ್ದಾಗ ಗ್ರೀಕರ ಪ್ರಾಚೀನ

ಸಾಹಿತ್ಯವನ್ನು ಅವಲೋಕಿಸಿದ. ಗ್ರೀಕರ ಭಾವಸೃಷ್ಟಿ ಅವನ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವ ಬೀರಿತು,

ನೀಷೆ ತನ್ನ ತತ್ತ್ವ ನಿರೂಪಣೆಯಲ್ಲಿ ರಾಷ್ಟ್ರನಿಷ್ಠೆ, ಯುದ್ಧ, ಶಾಂತಿ,ನಿಶ್ಶಸ್ತ್ರೀಕರಣ ಮುಂತಾದ ಗಂಭೀರ ಸಮಸ್ಯೆಗಳನ್ನು ಚರ್ಚಿಸಿದ್ದಾನೆ. ಪ್ರಜಾತಂತ್ರ, ಸಮತಾವಾದ ಮೊದಲಾದ ವಿಷಯಗಳನ್ನೂ ಚರ್ಚಿಸಿದ್ದಾನೆ. ಮಾನವಶೀಲ ಸ್ವಭಾವಗಳನ್ನು ಪರಿಶೀಲಿಸಿದ್ದಾನೆ. ಒಂದೊಂದು ವಿಷಯವನ್ನು ಒಂದೊಂದು ಭಾಗವಾಗಿ ನಿರೂಪಿಸಲಾದುದಾಗಿದೆ. ಅಷ್ಟು ಗಹನವಾಗಿದೆ, ಅಷ್ಟು ವಿಚಾರ ಪರಿಷ್ಕೃತವಾಗಿವೆ ಅವನ ತತ್ತ್ವಗ್ರಂಥಗಳು. ವಿಸ್ತಾರ ಭಯದಿಂದ ಈ ಎಲ್ಲ ಅಂಶಗಳನ್ನು ಇಲ್ಲಿ ಎತ್ತಿಕೊಳ್ಳುವುದಿಲ್ಲ.

ನೀಷೆ ಅತ್ಯಂತ ಕ್ರಾಂತಿಕಾರಿ ಎನ್ನುವುದೇನೋ ನಿಜ. ಆದರೆ ಕ್ರಾಂತಿಕಾರಕ ಎನಿಸುವ ಅವನ ವಿಚಾರಗಳ ಹಿನ್ನೆಲೆಯಲ್ಲಿ ನಿಗೂಢ ತತ್ತ್ವಗಳ ಜಿಜ್ಞಾಸೆ, ಪರಾಮರ್ಶೆ ಕಂಡುಬರದೆ ಇರದು. ಅವನು ನಿರೀಶ್ವರವಾದಿಯೂ ಭೌತವಾದಿಯೂ ಆಗಿದ್ದರೂ ಅವನ ವಾದಸರಣಿ, ಕೆಲವು ಸಲ ಭಾರತೀಯ ದರ್ಶನಶಾಸ್ತ್ರದ ಅನೇಕ ವಿಚಾರಗಳನ್ನು ಅನುವಾದ ಮಾಡಿದಂತೆ ಕಾಣುವುದು, ಕುತೂಹಲವನ್ನು ಕೆರಳಿಸುವುದು. ಈ ದೃಷ್ಟಿಯಿಂದ ಸೃಷ್ಟಿ ಸ್ಥಿತಿ ಲಯಗಳು, ಮಾನವ ಜೀವಿತದ ಪುರುಷಾರ್ಥಗಳು ಮತ್ತು ಎಲ್ಲಕ್ಕೂ ಮುಖ್ಯವಾದ ಮಾನವನ ಜ್ಞಾನವನ್ನು (ತಿಳುವಳಿಕೆ) ಕುರಿತು ಅವನು ನಿರೂಪಿಸಿರುವ ಅಂಶಗಳನ್ನು ಇಲ್ಲಿ ಸಂಕ್ಷೇಪವಾಗಿ ಉದಾಹರಿಸಲು ಯತ್ನಿಸಲಾಗಿದೆ.

ಜಗತ್ತು ಬಹು ವಿಚಿತ್ರವಾಗಿದೆ. ಬಹು ಕರಣಗಳಿಂದ ಕೂಡಿದೆ. ಇದಕ್ಕೆ ಆದಿಯಿಲ್ಲ, ಅಂತ್ಯವಿಲ್ಲ. ಗತಿಯೇನು–ಈ ವಿಷಯಗಳು ವಿಚಾರಿಸಿದಷ್ಟು ಗಂಭೀರ ಗುಂಫವೇ ಸರಿ. ವಿವೇಚನೆ ಎಲ್ಲಿ ಜ್ಞಾನೇಂದ್ರಿಯದ ಭೌತಿಕ ಎಲ್ಲೆಯನ್ನು ಮೀರುವುದೋ ಅಲ್ಲಿಂದ ಮುಂದೆ ನೀಷೆ ಯೋಚಿಸುವುದಿಲ್ಲ. (ಪ್ರಾಯಶಃ ಈ ದೃಷ್ಟಿಯಿಂದಲೇ ನಮ್ಮವರು 'ತದಲಮ್ ಬಹುಲೋಕ ವಿಚಿಂತನಯಾ ಎಂದೂ 'ಆ ವಿಚಿತ್ರಕೆ ನಮಿಪೆ' ಎಂದೂ ಹೇಳಿರಬೇಕು). ಜರ್ಮನಿಯ ತತ್ತ್ವದರ್ಶನದ ತತ್ತ್ವಜ್ಞಾನಿಗಳಾದ ಕಾಂಟ್, ಹೆಗಲ್ ಮುಂತಾದವರು ಅತೀಂದ್ರಿಯ ವಸ್ತು ವಿಷಯಗಳ ಜಿಜ್ಞಾಸೆಗೆ ತೊಡಗಿ ಆಧ್ಯಾತ್ಮಿಕ ತತ್ತ್ವ ನಿಷ್ಕರ್ಷಕ್ಕೆ ಯತ್ನಿಸಿದ್ದಾರೆ. ಆದರೆ ನೀಷೆ ಮಾನವ ಜ್ಞಾನವನ್ನು ಭೌತಿಕ ವ್ಯಾಪಾರದ ಅಭಿಜ್ಞಾನದ ಮಟ್ಟಿಗೆ ಪರಿಮಿತಗೊಳಿಸಿದ್ದಾನೆ. ಸಾಮಾನ್ಯವಾಗಿ ಆಧುನಿಕ ಯುಗದ ವಿಚಾರ ಕ್ರಾಂತಿಯೊಂದಿಗೆ ಈ ಬಗೆಯ ವಿವೇಚನೆ ಪಾಶ್ಚಾತ್ಯ ದಾರ್ಶನಿಕರಲ್ಲಿ ಹೆಚ್ಚು ಪ್ರಚಲಿತವೆಂದು ಕಂಡುಬರುವುದು. ಭಾರತೀಯ ಸನಾತನ ಕಲ್ಪನೆಗಳಿಗೆ ಹೋಲುವ, ಮಧ್ಯಯುಗದ ಅನೇಕ ಕ್ರಿಶ್ಚನ್ ತತ್ತ್ವಗಳ ಧಾರ್ಮಿಕ ಹಿನ್ನೆಲೆ, ಸ್ವರ್ಗ ನರಕಗಳ ಕಲ್ಪನೆ, ಪಾಪ ಪುಣ್ಯಗಳ ವಿಚಾರ ಇವು ನೀಷೆ ದೃಷ್ಟಿಯಲ್ಲಿ ತಿರಸ್ಕೃತವಾದಂತೆ ಕಂಡುಬಂದರೂ ನೀಷೆ ವಿಚಾರಸರಣಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅವುಗಳ ಪಾರಲೌಕಿಕ ಅಸ್ತಿತ್ವದ ಬದಲಾಗಿ ಐಹಿಕ ಅಸ್ತಿತ್ವವನ್ನು ಸಮರ್ಥಿಸಿದಂತೆ ಕಂಡುಬರುವುದು. 'ನಾಕನರಕಗಳೆರಡುಮನದಾಕಾರ' ಎಂದು ಹೇಳಿದುದು ಅವನ ಅಭಿಪ್ರಾಯದಲ್ಲಿ ಸರಿಯೇ. 'ಸ್ವರ್ಗಾಪವರ್ಗದ ಭೋಗಭಾಗ್ಯದ ಕಲ್ಪನೆಗಳೆಲ್ಲ ವಾದಂತರ ಮತ್ತು ವಿಪತ್ತಿತರ ಪ್ರಕ್ಷಿಪ್ತ ವಾಚಕಗಳು' ಎಂಬುದೂ ಅವನಿಗೆ ಸಮ್ಮತವೆನಿಸುವುದಾಗಿತ್ತು.

ಜಗದ್ವ್ಯಾಪಾರ ನಿತ್ಯನೂತನವೆಂಬುದನ್ನು ನೀಷೆ ಕಂಡರಿತಿದ್ದಾನೆ. ಹೊಗಳಿ ಹಿಗ್ಗಿದ್ದಾನೆ. ಆದರೆ ಅವನ ರಸೋತ್ಕರ್ಷ 'ರಸೋವೈ ಸಃ' ಎಂಬ ಭಾರತೀಯ ವಿಚಾರಧಾರೆಯ ಅತೀಂದ್ರಿಯ ಮಟ್ಟಕ್ಕೇರಲಿಲ್ಲ. ಮಂಗಳಲೋಕದ ಅಂಗಳಕ್ಕೆ ಹಾರಲಿಲ್ಲ ಅವನ ಪಾದವಿಹಂಗಮ: ಅವನ ತತ್ತ್ವ ವಿವೇಚನೆಯಲ್ಲಿ ಇಂದ್ರಿಯಜನ್ಯಜ್ಞಾನ ಇಂದ್ರಿಯಾರ್ಥಗಳ ಗುಣನಿರೂಪಣೆಯಲ್ಲಿಯೇ ಕೊನೆಗೊಂಡಿದೆ.

ಈ ಸೃಷ್ಟಿಯ ಸಕಲ ಚರಾಚರ ವಸ್ತುಗಳ ಸ್ವರೂಪ ನಿರ್ಣಯಕ್ಕೆ ಮನುಷ್ಯನ ಜ್ಞಾನವೇ

ಸಹಾಯಕವಾದುದು. ಅದೇ ಏಕೈಕ ಸಾಧನ. ಈ ಜ್ಞಾನ ಒಂದು ಸ್ವತಂತ್ರ ತತ್ತ್ವವೇ ಸರಿ. ಆದರೆ ಜ್ಞಾನವನ್ನು ವಿಹಿತ ಮಾರ್ಗದಲ್ಲಿ ನಡೆಸಲು 'ನಿಯತಮತಿಯ ಮಾರ್ಗದರ್ಶನ' ಅನಿವಾರ್ಯವಾಗಿದೆ. ಈ 'ನಿಯಮತಿ' ನಮಗೆ ಶಾಸ್ತ್ರಗಳಿಂದ, ಸನಾತನ ಆಧಾರಗ್ರಂಥಗಳಿಂದಲೇ ದೊರೆಯಬೇಕಲ್ಲವೇ? ಯುಗಯುಗಾಂತರಗಳ ಮಾನವ ಕುಲದ ಅನುಭವ ಪರಿಪಾಕದ ಘನನಿಧಿ ಯಂತಿರುವ ಈ ಸಾಕ್ಷಿಗಳೆದುರಿನಲ್ಲಿ ಬುದ್ಧಿಯ ಸ್ವತಂತ್ರ ಪ್ರಸಕ್ತಿ ಕ್ಷುಲ್ಲಕವೆನಿಸುವುದು. ಅದನ್ನು ನೀಷೆ Serpent Vanity ಎಂದಿದ್ದಾನೆ. ಆದರೆ ಅನುಭವಗಳು ಎಷ್ಟೇ ಹೇರಳವಾಗಿ ಇದ್ದರೂ ಜಿಜ್ಞಾಸೆ ಪ್ರತಿಯೊಬ್ಬ ಜೀವಿಯ ಆದ್ಯ ಕರ್ತವ್ಯವೆಂಬುದನ್ನು ಎಲ್ಲ ವಿಚಾರಪರರೂ ಅಂಗೀಕರಿಸಿದ್ದಾರೆ.

ಪ್ರಪಂಚದ ತಿಳಿವಳಿಕೆಗೆ ಮನುಷ್ಯನ ಜ್ಞಾನೇಂದ್ರಿಯವೇ ಮೂಲಸಾಧನವಾದುದರಿಂದ ಈ ಜ್ಞಾನೇಂದ್ರಿಯ ವ್ಯಾಪಾರವನ್ನೂ ಇದರ ಪ್ರಾಮಾಣ್ಯವನ್ನೂ ಎಲ್ಲಕ್ಕಿಂತ ಮುಂಚೆ ವಿಚಾರಿಸಿದ್ದಾನೆ ನೀಷೆ. ಜ್ಞಾನ ಒಂದು ಸ್ವತಂತ್ರ ತತ್ತ್ವವೇ ಎಂಬುದು ವಾದದ ಮೊದಲ ಹಂತವಾಗಿದೆ.

'ಒಂದೆಡೆ ಮನುಷ್ಯ ಬುದ್ಧಿ'. ಮತ್ತೊಂದೆಡೆ ಅಪಾರ ವಸ್ತು ವೈವಿಧ್ಯ. ಸೃಷ್ಟಿಯಲ್ಲಿ ದೃಗ್ಗೋಚರವಾಗುವ ಸಕಲ ವಸ್ತುಗಳ ಗುಣಧರ್ಮಗಳ ಸ್ವರೂಪ ನಿರ್ಣಯ ಮಾಡಲು ಮಾನವ ಬುದ್ಧಿ ಪ್ರಕೃತಿಸಹಜವಾಗಿಯೇ ಪ್ರಸಕ್ತವಾಗುವುದು. ಜ್ಞಾನೇಂದ್ರಿಯ ಪ್ರಥಮ ದರ್ಶನದಲ್ಲಿ ತಾನು ಗ್ರಹಣ ಮಾಡಿದ ವಸ್ತು ವಿಷಯಗಳಿಗೆ ಅರ್ಥವನ್ನೂ ಸಂಜ್ಞೆಯನ್ನೂ ನೀಡುವುದು. ಅರ್ಥಾತ್ ಪ್ರಥಮ ಪ್ರಸಕ್ತಿಯಲ್ಲಿ ತನ್ನ ಸಾಮರ್ಥ್ಯಕ್ಕನುಗುಣವಾಗಿ' ವಸ್ತುವಿನಲ್ಲಿ ಗುಣಾರೋಪಣೆ ಮಾಡುವುದು. ಕೂಡಲೇ ಆ ಬಗ್ಗೆ ಜಿಜ್ಞಾಸೆಗೆ ತೊಡಗಿ ಅದನ್ನೇ ವಿಮರ್ಶಾತ್ಮಕವಾಗಿ ಪುನರ್ಗ್ರಹಣ ಮಾಡುವುದು. 'Man ultimately finds in things what he has put into them. ಹೀಗೆ ಜ್ಞಾನೇಂದ್ರಿಯದ ಸಾಮಾನ್ಯ ವ್ಯಾಪಾರದಿಂದ ವಸ್ತುಗತ ಗುಣ ಧರ್ಮಗಳನ್ನು ತಿಳಿಯಲು ಮತ್ತು ವಿಶೇಷ ವ್ಯಾಪಾರದಿಂದ ಆಯಾ ಗುಣ ಧರ್ಮಗಳ ತಾತ್ತ್ವಿಕ ವಿವೇಚನೆ ಮಾಡಲು ಬುದ್ಧಿ ಸಾಧಕವಾಗಿದೆ. ಆದರೆ ಈ ಬುದ್ಧಿ ಜ್ಞಾನಗಳು ತಮ್ಮ ಪರಮ ಸಮರ್ಥ ದೆಸೆಯಲ್ಲಿ ಸೃಷ್ಟಿ ಸಾಮರ್ಥ್ಯ ಹೊಂದಿರುವುದಲ್ಲದೆ ಜ್ಞೇಯವಾದ ವಸ್ತುವಿಗೆ ನಾಮ–ರೂಪ–ಶಬ್ದಗಳ ಕವಚ ತೊಡಿಸಿ ಬಾಹ್ಯ ಪ್ರಪಂಚದ ಅನುಭವಕ್ಕೆ ವಸ್ತುಸಂಬಂಧವನ್ನು ಕಲ್ಪಿಸಿಕೊಡುವುವು. ಬುದ್ಧಿ–ಜ್ಞಾನೇಂದ್ರಿಯಗಳು ವಸ್ತುವಿನ ಕೇವಲ ಛಾಯಾಗ್ರಹಣ ಮಾಡುವ ನಿರ್ಜೀವ ದರ್ಪಣಗಳಲ್ಲ. 'ಇದಮಿತ್ಥಮ್' ಎಂದು ನಿರ್ಣಯಿಸುವ ಚೇತನ ಸಾಮರ್ಥ್ಯವನ್ನು ಈ ಇಂದ್ರಿಯಗಳು ಹೊಂದಿವೆ. ವಸ್ತುವಿನ ಬಗ್ಗೆ ತಿಳಿವಳಿಕೆ ಎಂದರೇನು? ಈ ತಿಳಿವಳಿಕೆ ಎಂಬುದು, ತಿಳಿದ ವಸ್ತುವಿನೊಂದಿಗೆ ತಿಳಿದವನು ಏರ್ಪಡಿಸಿಕೊಂಡಿರುವ ಒಂದು ಜ್ಞಾನ ಸಂಬಂಧವನ್ನು ಸೂಚಿಸುವುದೇ ಹೊರತು ಇನ್ನೇನನ್ನೂ ಅಲ್ಲ. ವಸ್ತುಜ್ಞಾನಕ್ಕೆ ವಿಷಯವಾದ ವಸ್ತುಸ್ವರೂಪದಲ್ಲಿ ನೈಸರ್ಗಿಕ ಅವಸ್ಥಾಂತರವಾದಾಗ ತತ್ಪೂರ್ವದ ಜ್ಞಾನಕ್ಕೆ ಬಾಧೆ ಬರುವುದು. ಆಗ ಜ್ಞಾನೇಂದ್ರಿಯ ಯಥಾವತ್ತಾಗಿ ಮತ್ತೆ ಆ ಅವಸ್ಥಾಂತರ ಹೊಂದಿದ ವಸ್ತು ಸ್ವರೂಪ ನಿರ್ಣಯಕ್ಕೆ ಪ್ರಸಕ್ತವಾಗುವುದು ಈ ನಿರಂತರ ಕಾರ್ಯ ಅಂತರ್ಮುಖವಾಗಿರುವಾಗ ಅದು ಅನುಭಾವ, ಅಪರೋಕ್ಷ ಜ್ಞಾನ (Mystic and intuitional Experience) ಎಂದು ಕರೆಯಿಸುವುದು. ಅದು ಪ್ರಕಟವಾಗಿ ಬಾಹ್ಯ ಪ್ರಪಂಚಕ್ಕೆ ಪ್ರಸ್ತುತವಾದಾಗ ಶಬ್ದರೂಪ ತಾಳಿ ಆಧಾರವಾಗಿ ಉಳಿದು ಪ್ರಮಾಣ ಎನಿಸುವುದು.

ಜ್ಞಾನವನ್ನು ಜ್ಞೇಯವಾದ ವಸ್ತುವಿನಿಂದ ಭಿನ್ನವೆಂದು ಹೇಳಬೇಕೊ ಬೇಡವೋ ಎಂಬುದು ಮತ್ತೊಂದು ಗಂಭೀರ ಪ್ರಶ್ನೆಯಾಗಿದೆ ಎನ್ನುತ್ತಾನೆ ನೀಷೆ. ಜ್ಞೇಯವಾದ ವಸ್ತುವೇ ಜ್ಞಾನಕ್ಕೆ ಪರಮ ತಾತ್ಪರ್ಯವೆಂದಾದ ಮೇಲೆ ಜ್ಞಾನ ಎನಿಸಿದುದೇ ಜ್ಞೇಯವಾದ ವಸ್ತು ಸ್ವರೂಪ. ಜ್ಞೇಯವಾದುದೇ ಜ್ಞಾನಕ್ಕೆ ಪರಮತಃ ಅಧಿಗಮ್ಯವಾದುದು ಎಂಬ ಅನ್ಯೋನ್ಯ ಭಾವವನ್ನು ನೀಷೆ

ಈ ಘಟ್ಟದಲ್ಲಿ ಸೂಚಿಸಿರುವುದು ಬಹು ಚಮತ್ಕಾರವಾಗಿದೆ.* ಈ ವಿವೇಚನೆಯನ್ನು ಪರಿಶೀಲಿಸುವಾಗ 'ಸತ್ಯಮ್, ಜ್ಞಾನಮ್, ಅನಂತಮ್ ಬ್ರಹ್ಮ' ಎಂಬ ಉಪನಿಷದ್ವಾಕ್ಯ ನೆನಪಿಗೆ ಬರುವುದು. ಕೊನೆಗೆ ಈ ಜ್ಞಾನ ಜ್ಞೇಯಗಳ ಭೇದಾನುಭವ ನಿಜವಾಗಿ ಪರಮ ರಹಸ್ಯವೇ ಸರಿ ಎಂದಿದ್ದಾನೆ ನೀಷೆ. ಈ ವಾದವೂ 'ವೇದ ಅಪೌರುಷೇಯ' ವಾದದಷ್ಟೇ ಜಟಿಲವಾಗಿದೆ, ರಹಸ್ಯಮಯವಾಗಿದೆ.

ಇನ್ನು ಜಗದ್ವ್ಯಾಪಾರವನ್ನು ಕುರಿತು ಅನ್ವೀಕ್ಷಣೆ ಮಾಡಲು ಈ ಬುದ್ಧೀಂದ್ರಿಯ ಪ್ರಬಲ ಸಾಧನವೂ ಉಪಕರಣ ವಿಶೇಷವೂ ಎನಿಸಿಕೊಂಡುದರಿಂದ ಅದೇ ಜಗದ್ವ್ಯಾಪಾರದ ಪರಮ ಸಾಕ್ಷಿಯೂ ಹೌದು ಎನ್ನುತ್ತಾನೆ. ಈ ನಿರೂಪಣೆ ಭಾರತೀಯ ತತ್ತ್ವವಿವೇಚನೆಯಲ್ಲಿ ಬರುವ ಸಾಕ್ಷೀ ಪ್ರಮಾಣ, ಸಾಕ್ಷಿಪ್ರತ್ಯಕ್ಷವಾದಗಳಿಗೆ ಅದೆಷ್ಟು ಹತ್ತಿರವೆಂಬುದನ್ನು ವಾಚಕರೇ ಗಮನಿಸಬೇಕು.

ಈ ಘಟ್ಟದಲ್ಲಿ ಜ್ಞಾನೇಂದ್ರಿಯದ ವ್ಯಾಪಾರವನ್ನು ನೀಷೆ ಎರಡು ಭಾಗ ಮಾಡಿದ್ದಾನೆ. ಒಂದು ಬಾಹ್ಯಪ್ರಜ್ಞೆ, ಮತ್ತೊಂದು ಅಂತಃಪ್ರಜ್ಞೆ. ಬಾಹ್ಯಪ್ರಜ್ಞೆ ಅಷ್ಟೊಂದು ಯಥಾರ್ಥವಾಗಿರುವುದಿಲ್ಲ. ಅನೇಕ ಕೃತ್ರಿಮ ಅಂಗಗಳು ಅದರಲ್ಲಿ ಸೇರಿರುವುವು. ಆದರೆ ಅಂತಃಪ್ರಜ್ಞೆ ವಸ್ತುಸ್ವರೂಪವನ್ನು ಪ್ರಕೃತಿ ಸಹಜವಾಗಿ ನಿರ್ಣಯಿಸಿಬಿಡುವುದು. ಅಂತಃಪ್ರಜ್ಞೆಯ ನಿರ್ಣಯ ಯಥಾರ್ಥವಾಗಿರುವುದು. ಈ ವಾದ ಬಹು ವಿಚಿತ್ರವೆನಿಸಬಹುದು. ಇದರಿಂದ ಮನುಷ್ಯನ ಬಾಹ್ಯ ಪ್ರಜ್ಞೆಯನ್ನು ಅವಲಂಬಿಸಿದ ವಿವೇಕ ಜ್ಞಾನವನ್ನು ಅಲ್ಲಗಳೆದಂತಾಗುವುದು. ಆದುದರಿಂದ, ಈ ವಾದ ಸಮರ್ಪಕವಾದುದಲ್ಲವೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಆದರೆ ನೀಷೆ ಈ ತನ್ನ ವಾದಕ್ಕೆ ಜೆ. ಎಸ್. ಮಿಲ್ಲನ ವಾದದಿಂದ ಪ್ರೋತ್ಸಾಹ ಪಡೆದಿದ್ದಾನೆ. 'ನ್ಯಾಯ ನಿರ್ಣಯದಲ್ಲಿ ಪರಿಶ್ರಮವಿಲ್ಲದ ನ್ಯಾಯಾಧೀಶ ತನ್ನ ನಿರ್ಣಯಕ್ಕೆ ಕಾರಣ ಕೊಡಲು ಹೋದರೆ ನಿರ್ಣಯವೇ ತಪ್ಪಾದೀತು. ಆದರೆ ಅವನು ತನ್ನ ಸಹಜಪ್ರವೃತ್ತಿಯಿಂದ ನಿರ್ಣಯಿಸುವುದಾದರೆ ಅದು ಧರ್ಮಸಮ್ಮತವಾದ ನಿರ್ಣಯವಾದೀತು.' (ಜೆ. ಎಸ್. ಮಿಲ್) ಅರ್ಥಾತ್ ವಸ್ತುಸ್ವರೂಪ ನಿರ್ಣಯಕ್ಕೆ ತರಬೇತಿ ಹೊಂದಿದ ವಿವೇಚನೆಗಿಂತಲೂ ಯಥಾರ್ಥ ಜ್ಞಾನವೇ ಹೆಚ್ಚು ಉಪಯುಕ್ತವೆಂದಂತಾಗಲಿಲ್ಲವೇ? ಪ್ರಾಯಶಃ ಈ ದೃಷ್ಟಿಯಿಂದಲೇ ನ್ಯಾಯಾಲಯಗಳಲ್ಲಿ ಅನುಭವ ಹೊಂದಿದ ಜನಸಾಮಾನ್ಯರನ್ನು 'ಜೂರಿ'ಗಳೆಂದು ನಿಯಮಿಸುವ ರೂಢಿ ಪ್ರಚಲಿತವಾಗಿರಬೇಕು.

ಇನ್ನು ಬುದ್ಧಿ ಮನುಷ್ಯ ಗ್ರಹಿಸುವುದೆಲ್ಲ ಸತ್ಯವೆಂದು ನಂಬುವುದು ಹೇಗೆ ಎಂಬ ಪ್ರಶ್ನೆಯನ್ನು ಕುರಿತು ವಿಚಾರಿಸುತ್ತಾನೆ. ದೇಶಕಾಲ ಅವಸ್ಥಾ ಮರ್ಯಾದೆಗಳಲ್ಲಿ ಅತ್ಯಂತ ಪರಿಮಿತವಾದ ಮನುಷ್ಯ ಬುದ್ಧಿಗೆ ಆತ್ಯಂತಿಕ ತತ್ತ್ವಗ್ರಹಣ ಮಾಡುವ ಸಾಮರ್ಥ್ಯವಿದೆಯೇ ಎಂದೂ ಪ್ರಶ್ನಿಸಿಕೊಂಡಿದ್ದಾನೆ. ಈ ಪ್ರಶ್ನೆ, ಈ ಶಂಕೆ ತಲೆದೋರಿದಾಗ ಆತ್ಮಾನುಭವವೇ ಪ್ರಮಾಣವೆನ್ನುತ್ತಾನೆ. ಪ್ರತ್ಯಕ್ಷಾನುಭವಕ್ಕೆ ಬಾಧೆ ಬಾರದಿದ್ದರೆ ಶಬ್ದಪ್ರಾಮಾಣ್ಯ ಅರ್ಥಾತ್ ಪ್ರಮಾಣಾಧಾರಗಳನ್ನು ಒಪ್ಪುತ್ತಾನೆ. ಆದರೆ, ಈ ತರದ ಪ್ರತ್ಯಕ್ಷಾನುಭವವನ್ನೂ ಪ್ರಮಾಣಾಧಾರವನ್ನೂ ವೀಕ್ಷಿಸುವ ಜ್ಞಾನೇಂದ್ರಿಯ ತನ್ನ ಸಾಮರ್ಥ್ಯದಲ್ಲಿ ತಾನೇ ಸಂಶಯಕ್ಕೊಳಗಾದರೆ ಗತಿಯೇನು? ಹಾಗಾದರೆ ಜಗತ್ತಿನ ಜ್ಞಾನವೇ ಅಸಂಭಾವ್ಯ. ಜ್ಞಾನ ಅರ್ಥರಹಿತವಾಗುವುದು. ಅಂಥ ಸ್ಥಿತಿ ಅಕಲ್ಪನೀಯವೆಂದು ನಿರ್ಣಯಿಸಿ ಈ ಬಗೆಯ ಸಂಶಯ ಆತ್ಮನಾಶಕ್ಕೆ ಕಾರಣವಾಗುವುದೆಂದು ಸ್ಪಷ್ಟವಾಗಿ ಹೇಳುತ್ತಾನೆ. 'ಸಂಶಯಾತ್ಮಾ ವಿನಶ್ಯತಿ' ಎಂದು ಗೀತೆ ಎಂದೋ ಸಾರಿಲ್ಲವೇ?

---

*ಪಾರಮಾರ್ಥಿಕ ಸತ್ಯಾನ್ವೇಷಣೆಯಲ್ಲಿ ತೊಡಗಿದ ವೈದಿಕತತ್ತ್ವ ವಿವೇಚನೆ ಇಂಥದೇ ಒಂದು ಘಟ್ಟವನ್ನು ತಲುಪಿದಾಗ, 'ವೇದೈಶ್ಚ ಸರ್ವೈರಹಮೇವ ವೇದ್ಯಃ ವೇದಾಂತ ಕೃತಿ ವೇದವಿದೇವ ಚಾಹಮ್' ಎಂಬ ಪ್ರಾಸಾದಿಕವಾಣಿ ಬುದ್ಧಿಗೆ ಸಮಾಧಾನವನ್ನು ಹೇಳಿರುವುದು ಭಾರತೀಯ ದರ್ಶನದ ವೈಶಿಷ್ಟ್ಯವನ್ನು ಸೂಚಿಸುವುದು.

ಮನುಷ್ಯರಲ್ಲಿ ಕಂಡುಬರುವ ಜ್ಞಾನ ತನ್ನಷ್ಟಕ್ಕೆ ಪರಿಪೂರ್ಣವಲ್ಲ. ಅದು ಅನಂತತೆಯ ಏಕದೇಶ ಮಾತ್ರ. ಜ್ಞಾನದೃಷ್ಟಿ ಕೂಡ ಒಮ್ಮೊಮ್ಮೆ ಮಾಯೆಯಿಂದ ಮರೆಮಾಚಬಹುದಾಗಿದೆ ಎಂದು ಹೇಳುವ ನೀಷೆಯ ಮಾತು 'ಪ್ರಕೃತಿ ಬಂಧ' ಸೂಚಕವಾಗಿದೆ. ಏಕದೇಶವಾದ ಈ ಜ್ಞಾನ ಆತ್ಯಂತಿಕ ಪರಮಸತ್ಯದ ಪೂರ್ಣದರ್ಶನ ಮಾಡಿಸಲು ಅಸಮರ್ಥವೆಂದಾದ ಬಳಿಕ, ಜಗದ್ವ್ಯಾಪಾರದ ಪರಮರಹಸ್ಯವನ್ನು ಆತ್ಯಂತಿಕವಾಗಿ ವಿವೇಕಿಸಿ ಯಾವುದು ಸರಿ, ಯಾವುದು ತಪ್ಪು ಎಂದು ಪ್ರಭು ಸಮ್ಮಿತವಾಗಿ ಹೇಳಲಸಮರ್ಥವೇ ಸರಿ ಎನ್ನುತ್ತಾನೆ. ಹಾಗಾದರೆ ಈ ಕಾರ್ಯವನ್ನು ನಿರ್ವಹಿಸುವ ಪ್ರಜೇಸನೊಬ್ಬನಿರುವನೋ ಎಂದೂ ಊಹಿಸುತ್ತಾನೆ. ಆದರೆ ಅಂಥ ಪ್ರಜೇಸನ ಪ್ರತ್ಯಕ್ಷಾನುಭವ ನಮಗೆ ಅಸಾಧ್ಯ. ಆದುದರಿಂದ ಸಮಸ್ಯೆಗೆ ಪರಿಹಾರವಿಲ್ಲ ಎನ್ನುವನು. ಕೊನೆಗೆ "ನಾನು ಹೇಳುವುದೆಲ್ಲ ತ್ರಿಕಾಲಾಬಾಧಿತ ಸತ್ಯವೆಂದು ನನಗೆ ಹಟವಿಲ್ಲ" ಎಂದು ನುಡಿದು ತನ್ನ ಭೌತಿಕವಾದದ ಪರಮಸೀಮೆಯನ್ನು ಗುರುತಿಸಿದ್ದಾನೆ. ಆಧಿದೈವಿಕ ಸತ್ಯಾನ್ವೇಷಣೆಗೆ ಅನೇಕ ದೃಷ್ಟಿಗಳಿವೆ, ಅನೇಕ ಮಾರ್ಗಗಳಿವೆಯೆಂಬುದನ್ನು ಮಾತ್ರ ಒಪ್ಪಿದ್ದಾನೆ. (ಪರತತ್ತ್ವದ ಜ್ಞಾನಗಮ್ಯತ್ವವನ್ನೂ, ಶಾಸ್ತ್ರೈಕ ಅಧಿಗಮ್ಯತ್ವವನ್ನೂ ಸೂಚಿಸಲು ಅವನ ಈ ಮಾತೇ ಸಾಕ್ಷಿ ಆಗಿದೆಯೆಂದು ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ.)

ಇದರ ಮುಂದಿನ ಘಟ್ಟದಲ್ಲಿ ಅವನು ಸೃಷ್ಟಿ ಸ್ವರೂಪವನ್ನು ನಿರೂಪಿಸುವನು. ಈ ಚಿತ್ರ ವಿಚಿತ್ರವಾದ ಸೃಷ್ಟಿಯ ರಹಸ್ಯವನ್ನರಿತುಕೊಳ್ಳಲು ನಮ್ಮ ಅಸ್ತಿತ್ವವನ್ನು ನಿರಂತರ ನಮಗೆ ಜ್ಞಾಪಿಸಿ ಕೊಡುವ ಅತ್ಯಂತ ಜಾಗೃತ ಭಾವನೆಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು ಎನ್ನುತ್ತಾನೆ. ಜಗತ್ತಿನ ಪ್ರಾಕೃತಿಕ ರಚನೆಯನ್ನು ಸೂಚಿಸಲು ಎಷ್ಟು ವಸ್ತುಗಳನ್ನು ಅನಾದಿಯೆಂದು ಗೃಹಿಸಬೇಕೋ ಅಷ್ಟನ್ನೆ ಅನಾದಿಯೆಂದು ಗ್ರಹಿಸಬೇಕು. ಅನಾವಶ್ಯಕ ಪದಾರ್ಥಗಳನ್ನೆಲ್ಲ ಅನಾದಿಯೆಂದು ಗ್ರಹಿಸ ಕೂಡದು. ಪ್ರಕೃತಿ, ಕಾಲ, ಆಕಾರ ಅವು ಅನಾದಿಯೆಂದು ಅವನು ಗೃಹಿಸಿದಂತೆ ತೋರುವುದು. ಇನ್ನು ಈ ಪ್ರಕೃತಿಯಲ್ಲಿ ಕಂಡುಬರುವ ಅನಂತಮುಖವಾದ ಈ ಚೇತನ ವ್ಯಾಪಾರವನ್ನು ಏನೆಂದು ಹೇಳುವುದು ? ಅನಂತ ಈಕ್ಷಣಗಳು, ಈಪ್ಸಿತಗಳು, ಅರ್ಥಾತ್ ಇಚ್ಛೆಗಳೇ ಈ ಜಗತ್ಸೃಷ್ಟಿಗೆ ಕಾರಣವಾಗುವುವು. ಇಚ್ಛೆಯ ಪ್ರಕಟ ಸ್ವರೂಪವೇ ಸೃಷ್ಟಿ. ಇಚ್ಛೆಯೇ ಸೃಷ್ಟಿಗೆ ಪ್ರೇರಕ ಸಾಮಗ್ರಿಯಾಗಿರುವುದು. † ಈ ಇಚ್ಛಾಶಕ್ತಿ ವ್ಯಕ್ತಿಯಲ್ಲಿ ಉತ್ಕರ್ಷ ಹೊಂದಿದಾಗ ಸಮಾಜ ವ್ಯಕ್ತಿನಿಷ್ಠವಾಗುವುದು ; ಸಮಷ್ಟಿಯಲ್ಲಿ ಉತ್ಕರ್ಷ ಹೊಂದಿದಾಗ ಈ ವ್ಯಕ್ತಿ ಸಮಾಜ ನಿಷ್ಠನಾಗುವನು. ಈ ಅವಸ್ಥಾಭೇದದ ಅತ್ಯಂತ ಸುಸಂಸ್ಕೃತ ಸ್ವರೂಪವೇ ರಾಷ್ಟ್ರನಿಷ್ಠೆ ಎನಿಸುವುದು. ಅದು ಹಾಗೆಯೇ ವೃದ್ಧಿ ಹೊಂದಿ ವಿಶ್ವನಿಷ್ಠೆಗೂ ವಿಶ್ವಬಾಂಧವ್ಯಕ್ಕೂ ನಾಂದಿಯಾಗುವುದು. ಈ ಪ್ರಬಲವಾದ ಇಚ್ಛಾಶಕ್ತಿ ಜಡದಲ್ಲಿ ಆವಿಷ್ಟವಾದಾಗ ಕೊರಡು ಕೊನರುವುದು, ಬನ ನಲಿಯುವುದು. ಜಗದಭೀಷ್ಟವನ್ನು ಸಲ್ಲಿಸಲು ಈ 'ಇಚ್ಛೆ' ಸಾವಿರ ರೂಪ ತಾಳುವುದು. ಸೃಷ್ಟಿಯಲ್ಲಿ ಸ್ವರಸಮ್ಮೇಳನ ಕಂಡುಬರುವುದು. (ಇದೇ ಸಾಮಗಾನವೂ ಎನಿಸುವುದು.) Wagner endowed every-thing in nature with the power of speech. He refused to admit that anything is dumb in nature. Hill and dale, nest aud forest, day and night and noonlight too sing their own melody.' ಇಷ್ಟೆಲ್ಲ ಹೇಳಿದ ನೀಷೆ ಈ ಇಚ್ಛಾಶಕ್ತಿಯ ಆಧಿದೈವಿಕ ವ್ಯಾಪ್ತಿಯನ್ನು ಮಾತ್ರ ವಿಸ್ತರಿಸಿಲ್ಲ. ಈ ಸರ್ವ

---

† 'ಇಚ್ಛಾ ಮಾತ್ರದಲೆ ಸೃಜಿಸುವನು ಜಗವಾ' ಮುಂತಾದ ದಾಸರ ವಚನಗಳು ಇದನ್ನೇ ಸೂಚಿಸುವುವು.

ಪ್ರೇರಕ ಇಚ್ಛಾಶಕ್ತಿಯೇ ಸರ್ವವ್ಯಾಪಿಯಾಗಿ 'ಈಶಾವಾಸ್ಯಮ್ ಇದಮ್ ಸರ್ವಮ್' ಎನಿಸಿಕೊಂಡಿದೆ ಭಾರತೀಯ ದರ್ಶನದಲ್ಲಿ.

ಕಾಲವೂ ಅನಾದಿ ನಿತ್ಯವೆಂದು ನೀಷೆ ಗ್ರಹಿಸಿದ್ದಾನೆ. ಈ ಕಾಲ ಪರಿವೇಶದಲ್ಲಾಗಲಿ ಅನಂತತೆಯಲ್ಲಾಗಲಿ ಎಂದೂ ಬದಲಾಗಿಲ್ಲ. ಕಾಲಗರ್ಭದಲ್ಲಿ, ಇಚ್ಛಾಕ್ರಿಯಾಶಕ್ತಿಗಳು ಎಡೆಬಿಡದೆ ತುಂಬಿಕೊಂಡಿವೆ. ಹೀಗೆ ತುಂಬಿಕೊಳ್ಳಲು ಕಾಲಗರ್ಭದಲ್ಲಿರುವ ಅವಕಾಶವನ್ನೇ ನೀಷೆ 'ಆಕಾಶ'ವೆಂದು ಕರೆದಿದ್ದಾನೆ. ಆ ಕಾರಣದಿಂದಲೇ ಆಕಾಶವನ್ನು ಅನಾದಿಯೆಂದೂ ಗ್ರಹಿಸಿದ್ದಾನೆ. ಕಾಲದ ಮತ್ತು ಆಕಾಶದ ಪರಿವೇಶದಲ್ಲಿ ಈ ಇಚ್ಛಾ ಕ್ರಿಯಾ ಶಕ್ತಿಗಳು ಪರಸ್ಪರ ಸಂಬಂಧ ಹೊಂದಿ ಪ್ರಕಟವಾಗುವುದೇ ಸೃಷ್ಟಿ. ಈ ಸಂಯೋಜನೆಗಳಲ್ಲಿ ಅನೇಕ ವ್ಯತ್ಯಾಸಗಳಾಗುವುದುಂಟು. ಈ ವ್ಯತ್ಯಾಸಗಳಿಂದ ಈ ಸಂಯೋಜನೆ ಮುರಿದುಹೋದರೆ ಅದೇ ವಿಸರ್ಜನೆ. ಅದನ್ನು ಲಯವೆಂದೂ ಕರೆಯುವುದುಂಟು. ಹೀಗೆಯೇ ಈ ಇಚ್ಛಾ ಕ್ರಿಯಾಶಕ್ತಿ ಕೇಂದ್ರಗಳ ಸಂಘಟನೆ ವಿಸರ್ಜನೆ ನಿರಂತರವಾಗಿ ನಡೆಯುತ್ತಾ ಅನಾದಿಕಾಲದಿಂದ ನಡೆದು ಬಂದಿದೆ. ಇದನ್ನು 'System of Eternal Recurrence 'ಎಂದು ಕರೆದಿದ್ದಾನೆ. ಈ ಕಲ್ಪನೆ, ಚತುರ್ಯುಗಗಳು ಸಹಸ್ರಾರು ಸಲ ಸುತ್ತುವವು, ಮಹಾ ಪ್ರಳಯವಾದ ನಂತರ ಪುನಃ ಸೃಷ್ಟಿಯಾಗುವುದು ಮುಂತಾದ ಭಾರತೀಯ ಕಲ್ಪನೆಗಳಿಗೆ ಹತ್ತಿರವಾಗುವುದಿಲ್ಲವೆ ? World is a circular movement and plays its game for all Eternity ಎಂದೂ ಹೇಳುತ್ತಾನೆ. ಇನ್ನೂ ಮುಂದೆ ಹೋಗಿ, ಮಕ್ಕಳು ಮರಳಿನ ಮನೆ ಕಟ್ಟಿ, ಕೆಡಿಸಿ, ಮತ್ತೆ ಕಟ್ಟುವ ಆಟದಂತಿದೆ ಈ ಸೃಷ್ಟಿ ಲಯ ಕ್ರಮವೆಂದು ಉದ್ಗರಿಸುತ್ತಾನೆ. ಸೃಷ್ಟಿಗೆ ಬೇಕಾದ ವಸ್ತುಗಳು ಲಯವಾದಾಗ ಪುನಃ ಸೃಷ್ಟಿಗೆ ಉಪಯೋಗವಾಗುವ ರೀತಿಯಲ್ಲಿ ಮೂಲಧಾತುಗಳ ವಿಶ್ಲೇಷಣೆಯಾಗುವುದೆಂದು ಹೇಳುವ ಮಾತು ಅದೆಷ್ಟು ಯುಕ್ತಿಯುಕ್ತವಾಗಿರುವುದೆಂಬುದನ್ನು ಛಾಂದೋಗ್ಯದಲ್ಲಿ ಈ ವಿಷಯವನ್ನು ಕುರಿತು ಓದಿದವರು ಮನಗಾಣಬಹುದು. ಆದರೆ ಈ ಸೃಷ್ಟಿಲಯಗಳಿಗೆ ಕಾರಣವಾಗಬಹುದಾದ ನಿಯಾಮಕ ತತ್ತ್ವದ ರಹಸ್ಯವನ್ನು ಮಾತ್ರ ನೀಷೆ ಸೂಚಿಸಿಲ್ಲ. ಈ ಭೌತಿಕ ಸಂಯೋಜನೆಯಿಂದ ರೂಪಗೊಳ್ಳುವ ಸೃಷ್ಟಿ ಅನಿತ್ಯವೆಂಬುದನ್ನು ಮಾತ್ರ ಅವನ ಈ ಮಾತುಗಳಿಂದಲೇ ಮನಗಾಣಬಹುದಾಗಿದೆ : Cosmic elements are not fixed but changeable, spontaneously unstable.

ಈ ಸೃಷ್ಟಿ ತನ್ನ 'ನಿರಂತರ ಪುನರಾವೃತ್ತಿ' ಕ್ರಮದಲ್ಲಿ ಅತ್ಯಂತಿಕ ಅನಂತತೆಯನ್ನು ತಲುಪಿದಾಗ ಮರ್ತ್ಯರು ಅಮೃತರಾಗುವ ಮಟ್ಟವನ್ನು ಮುಟ್ಟುವರು. ಮತ್ತೆ ಅವರೋಹಣ ಕ್ರಮದಲ್ಲಿ ಅಧಮಗತಿಯನ್ನೈದುವರು. (ಈ ಕಲ್ಪನೆ ನಿತ್ಯ ಸಂಸಾರಿಯಾದ ರಾಜಸಗುಣಧರ್ಮಕ್ಕೆ ಅನ್ವಯಿಸುವುದೇ ಹೊರತು ಸ್ವರ್ಗದ ಜ್ಞಾನವಾದ ಅಥವಾ ಪ್ರಕೃತಿ ಬಂಧ ನಿವೃತ್ತವಾದ ಮುಮುಕ್ಷು ಜೀವಿಗಳಿಗೆ ಅನ್ವಯಿಸುವುದಿಲ್ಲವೆಂಬುದು ಭಾರತೀಯ ದೃಷ್ಟಿಯಾಗಿದೆ). ಹೀಗೆ ಅದು ಅನೇಕ ಸಲ ತನ್ನ ಅಂತಿಮ ಕಲ್ಪವನ್ನು ಮುಟ್ಟುವುದು. ಸೃಷ್ಟಿಯಲ್ಲಿ ಕಂಡುಬರುವ ಚೇತನ ವ್ಯಾಪಾರಗಳೆಲ್ಲ ಈ ಮಟ್ಟವನ್ನು ತಲುಪುವ ಸಾಧನಗಳು ಸರಿ ಎಂದಿದ್ದಾನೆ. ಇದನ್ನು 'Will to power 'ಎಂದು ಕರೆದಿದ್ದಾನೆ. 'God is the culminating movement. Life an eternal Process of defying and undefying ಎಂದು ಹೇಳಿ ಸದ್ಯಕ್ಕಿರುವ ದೈವಿಕ ಧಾರ್ಮಿಕ ಕಲ್ಪನೆಗಳೆಲ್ಲ ಜನಸಾಮಾನ್ಯರ ನಿತ್ಯ ಜೀವನದ ಮಾರ್ಗದರ್ಶನಕ್ಕೆ ಉಪಯುಕ್ತವಾಗಿವೆ ಎಂದಿದ್ದಾನೆ. ಈ ಸಂಬಂಧದಲ್ಲಿ ತಲೆದೋರುವ ವಾದಗಳನ್ನೆಲ್ಲ 'ಆಸ್ತಿಕ ನಾಸ್ತಿಕ' ವಾದಗಳೆಂದು ಹೇಳುವುದಕ್ಕಿಂತ 'ಉಪಯುಕ್ತ ಅನುಪಯುಕ್ತ' ವಾದಗಳೆಂದು ಕರೆಯುವುದು ಲೇಸೆಂದೂ ಹೇಳಿದ್ದಾನೆ. ಈ ದೇವತ್ವದ ವಾದ ನಿರಂತರವಾಗಿ ಉಳಿಯುವ ಸ್ಥಾಯಿಭಾವವಲ್ಲವೆಂದು ಹೇಳಿ ಭೌತಿಕವಾದವನ್ನು ಸಮರ್ಥಿಸಿ

ಕೊಂಡಿದ್ದಾನೆ, ಈ ಸೃಷ್ಟಿಲಯಗಳ ಸಂಯೋಜನ ವಿಸರ್ಜನ ರೂಪವಾದ ಕಾರ್ಯ ಅಘಟನಾಘಟನ ಸಾಮರ್ಥ್ಯವನ್ನು ಸೂಚಿಸುವುದೆಂದೂ ಈ ವಿಶ್ವ ಅಚಿಂತ್ಯಾದ್ಭುತ ಶಕ್ತಿಯುಳ್ಳದ್ದೆಂದೂ ನಿರೂಪಿಸಿದ್ದಾನೆ. 'This Universe is a monster of energy without beginning or end

ಕೊನೆಯದಾಗಿ ಮಾನವ ಜೀವನ ಮತ್ತು ಪುರುಷಾರ್ಥ ಸಿದ್ಧಿಯನ್ನು ಕುರಿತು ವಿಚಾರಿಸಿದ್ದಾನೆ. ಈ ಪುರುಷಾರ್ಥ ಸಿದ್ಧಿಯನ್ನು ವಿವೇಚಿಸಲು ಜೀವರಲ್ಲಿ ನೈಸರ್ಗಿಕವಾಗಿ ಕಂಡುಬರುವ ಯೋಗ್ಯತಾ ತಾರತಮ್ಯವನ್ನು ಗಮನಿಸುವುದು ಅನಿವಾರ್ಯ ಎನ್ನುವನು. All men are not and never will be equal. All men are not allround men. Thers is a natural ranking among men'.

ಈ ಯೋಗ್ಯತಾ ತಾರತಮ್ಯ ಆನುವಂಶಿಕವಾಗಿ ಬರತಕ್ಕದಲ್ಲ. ಅದು ಜೀವರ ಗುಣ ಕರ್ಮ ಸ್ವಭಾವಗಳನ್ನವಲಂಬಿಸಿರುವುದು "It is determined by what he is, and not by what his father or forefather was' ಎಂದೂ, 'Henceforth let It be your honour, not whence you come, but wither you go' ಎಂದೂ ನಿರೂಪಿಸಿದ್ದಾನೆ, ಈ ಮಾತು 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ' ಎಂಬುದಕ್ಕೆ ಎಷ್ಟು ಹತ್ತಿರವೆನಿಸುವುದೆಂಬುದನ್ನು ವಾಚಕರು ಗಮನಿಸಬೇಕು.

'Is life worth living?' 'ಮುಂತಾಗಿ ಕೇಳುವ ಪ್ರಶ್ನೆಗಳಿಗೆ ನೇರವಾಗಿ ಇವನು ಏನನ್ನೂ ಹೇಳಬಯಸುವುದಿಲ್ಲ. ಜೀವನಕ್ಕೆ 'ಅಸ್ತುನಾಸ್ತಿ' ಎಂದು ಹೇಳುವುದು ಜೀವನದ ಮೌಲ್ಯವನ್ನಲಂಬಿಸಿದೆ. ಆದರೆ ಜೀವನದ ಮೌಲ್ಯ ಮಾಪನ ಬಾಹ್ಯಲಕ್ಷಣಗಳಿಂದ ಅಥವಾ ಪ್ರಮಾಣಗಳಿಂದ ಸಾಧ್ಯವಿಲ್ಲ. ಜೀವನವೇ ಜೀವನದ ಅಳತೆಗೋಲು. 'Life itself urges us to det. ermine values.' Again life itself values lhrough us when we determine values.

ಸಾಮಾನ್ಯವಾಗಿ ಜೀವನ ಸುಗಮವಾಗಿ ಆನಂದದಾಯಕವಾದಾಗ ನಾವು ಅದಕ್ಕೆ 'ಅಸ್ತು' ಎನ್ನುತ್ತೇವೆ, ಭಾರವಾಗಿ ನರಕವೆನಿಸಿದಾಗ 'ನಾಸ್ತಿ' ಎನ್ನುತ್ತೇವೆ. ಪಳಿಯುತ್ತೇವೆ. ಜೀವನಕ್ಕೆ ನಾಸ್ತಿಯೆಂದು ಹೇಳುವುದು ಆತ್ಮದೌರ್ಬಲ್ಯದ ಲಕ್ಷಣ. ಅದೇ ವಿರಸ ರೂಪವಾದ ಮರಣವೆನಿಸುವುದು. ಆದುದರಿಂದ ಎಲ್ಲ ಮಾನವರೂ ಭವ್ಯ ಜೀವನ ನಿರ್ಮಾಣಕ್ಕಾಗಿ ಹೋರಾಡಬೇಕು, ಎಂಥ ವಿಪ್ರತಿಪನ್ನಾವಸ್ಥೆಯಲ್ಲಿಯೂ ಧೃತಿಗೆಡಬಾರದು. ಜೀವನಕ್ಕೆ ಬೆನ್ನು ತೋರಬಾರದು. 'ಧೀರಸ್ತತ್ರ ನ ಮುಹ್ಯತಿ' ಎಂದಂತೆ. Manliness is the highest virtue in its original sense. ಪರಾಭವಕ್ಕಳುಕದ ಗಂಡೆದೆ ಬೇಕು. ಇಲಿಯಾಗಿ ಬಾಳುವುದಕ್ಕಿಂತ ಹುಲಿಯಾಗಿ ಮಡಿಯುವುದು ಲೇಸು. ಇದು ಎಲ್ಲರಿಗೂ ಸಾಧ್ಯವಿಲ್ಲ. ಸರ್ವಾಂಗಸುಂದರವಾದ ಉತ್ತರೋತ್ತರ ಕಲ್ಯಾಣಮಯವಾದ ಪುರುಷಾರ್ಥಸಿದ್ಧಿ ಸುಲಭಸಾಧ್ಯವಲ್ಲ. ಆತ್ಮ ನಿಗ್ರಹ, ದಿವ್ಯದೀಕ್ಷೆ ಇದ್ದವರಿಗೆ ಅದು ಸಾಧ್ಯ. ಅಂಥ ಲಕ್ಷಣಗಳನ್ನುಳ್ಳವರೇ ಮಹಾಪುರುಷರು (Supermen). ಮಹಾಪ್ರಯತ್ನಗಳು ಅವರ ಪ್ರಯತ್ನದಿಂದಲೇ ಫಲರೂಪವಾಗುವುವು. ಅವರು ತಮ್ಮ ಇಷ್ಟಸಿದ್ಧಿಯನ್ನರಿತವರಾಗಿರುವರು. ಅಂಥ ವಿಭೂತಿ ಪುರುಷರಲ್ಲಿ ಎಲ್ಲ ಮಹಾಗುಣಗಳೂ ಸಮಗ್ನಿಧಾನದಲ್ಲಿ ಸಂಯೋಜಿತವಾಗಿರುವುವು. Wealth of great capacities completely coordinated.

ಪರಸ್ಪರ ವಿರುದ್ಧ ಧರ್ಮಗಳು ಕೂಡ ಅಂಥ ಮಹಾಪುರುಷರಲ್ಲಿ ಸಮವರ್ತಿಯಾಗಿರುವುವು. ಅಂಥ ಮಹಾಪುರುಷರ ಜೀವನ ಶುದ್ಧವಾಗಿರುವುದು. ಅವರು ಮಹಾಧೀರರಾಗಿಬಹುದು, ವೀರರಾಗಿರಬಹುದು, ಮಹಾ ಮೇಧಾವಿಗಳಾಗಿ ಇರಬಹುದು. ಇತಿಹಾಸವುದ್ದಕ್ಕೂ ಇಂಥ ಮಹಾ

ಪುರುಷರು ಕಂಡುಮ ಅತಿ ವಿರಳ. ಅತಿಮಾನುಷ ಲಕ್ಷಣಗಳೊಂದಿಗೆ ಅಮಾನುಷ ಲಕ್ಷಣಗಳೂ ಅನೇಕ ಸಲ ಕಂಡುಬರುವುದರಿಂದ ಇಂಥ ಮಹಾಪುರುಷರಾರೆಂಬುದನ್ನು ವ್ಯಕ್ತಿಗತವಾಗಿ ಸೂಚಿಸುವುದು ದುಸ್ಸಾಧ್ಯವೇ ಸರಿ ಎನ್ನುತ್ತಾನೆ. ಯೋಗ್ಯತೆಯಲ್ಲಿ ಧೀರರಾದವರಿಗೆ, ಅನೈತಿಕ ಅಭಿಪ್ರಾಯದಲ್ಲಿ ಪರಾವಲಂಬಿಗಳಾದವರಿಗೆ ಕರ್ಮಗಳಲ್ಲಿ ನಿರತರಾದವರಿಗೆ ಇಂಥ ಜೀವನ ಸಾಧಿಸದು. ನೈಸರ್ಗಿಕವಾಗಿ ಪರಮ ಸಮರ್ಥರಾದವರು, ನೈಸರ್ಗಿಕವಾಗಿ ಸತ್ಪ್ರವೃತ್ತಿಯುಳ್ಳವರೇ ತಮ್ಮ ಪರಮ ಪುರುಷಾರ್ಥವನ್ನು ಈಡೇರಿಸಿಕೊಳ್ಳಬಲ್ಲರು. ಈ ಕಾರ್ಯಕ್ಕೆ ಆತಂಕಗಳು ಬಹಳ. ಅಧಮ ಜೀವರಿಂದ ಕಿರುಕುಳ, ಉಪದ್ರವ, ಪೀಡೆಗಳುಂಟಾಗಿ ಮಹಾತ್ಮರ ಕಾರ್ಯ ಇನ್ನೂ ಕಷ್ಟವಾಗುವುದು. ಕಷ್ಟ ಸಹಿಸ ಸಾಮರ್ಥ್ಯ ಮಹಾಪುರುಷರಲ್ಲಿ ಅಪಾರವಾಗಿರುವುದರಿಂದ ಅವರು ಹಿಂಜರಿಯುವುದಿಲ್ಲ. 'ನಾನು ನನ್ನ ಧ್ಯೇಯಕ್ಕಾಗಿ ಹೋರಾಡುತ್ತೇನೆ, ನನ್ನ ಸುಖಕ್ಕಾಗಿ ಅಲ್ಲ.' ಎನ್ನುವ ಧೀರವಾಣಿ ಅವರದು. ದೈವಹೀನರಿಗಾಗಿ ಅವರ ಅಭಯ ಹಸ್ತ ಯಾವಾಗಲೂ ಕಾದಿರುವುದು. ಪರೋಪಕಾರ ಅವರಲ್ಲಿ ಸಹಜಪ್ರವೃತ್ತಿ. ಜಗತ್ತಿನಿಂದ ತಮಗೆ ಯಾವ ಪ್ರಯೋಜನವಿರದಿದ್ದರೂ ಜಗತ್ಕಲ್ಯಾಣಕ್ಕಾಗಿ ಅವರ ಜೀವನ ಮುಡುಪಾಗಿ ಇರುವುದು.

'ಸ್ಥಿತಪ್ರಜ್ಞಸ್ಯ ಕಾ ಭಾಷಾ, ಶಿಷ್ಠತಿ ಕಿಮ್, ವ್ರಜೇತ ಕಿಮ್,' ಎಂದು ಕೇಳಿದಾಗ ದೊರೆತ ಉತ್ತರದಂತಿದೆ ಈ ವರ್ಣನೆ. ಈ ವರ್ಣನೆ ಎಲ್ಲ ಜೀವರಿಗೆ ಸಮಾನವಾಗಿ ಸರಿಹೋಗುವುದೇ ಎಂದಾಗ 'ಇಲ್ಲ' ಎನ್ನುತ್ತಾನೆ ನೀಷೆ. ಜೀವರ ಯೋಗ್ಯತಾ ತಾರತಮ್ಯವನ್ನವಲಂಬಿಸಿ ಜೀವನ ಮೌಲ್ಯ ನಿರ್ಣಯವಾಗುವುದರಿಂದ ಜೀವರ ಸಿದ್ಧಿಯಲ್ಲಿ ಆನಂದದಲ್ಲಿ ಕೂಡ ವ್ಯತ್ಯಾಸಗಳುಂಟಾಗುವುವು ಎಂದು ನಿರೂಪಿಸುತ್ತಾನೆ. ಹಾಗಾದರೆ ಎಲ್ಲವೂ ಪೂರ್ವಭಾವಿಯಾಗಿ ನಿರ್ಣಯವಾದಂತೆ ಆಯಿತಲ್ಲವೇ ? ಪ್ರಯತ್ನದಿಂದ ಫಲವೇನು ? 'ಮಾನಿಸರ ಕಣ್ಣೀರನೊಂದನೀಯಿಸದು' ಎಂದು ಹೇಳಿ ವಿಧಿವಾದವನ್ನು ಒಪ್ಪಿಕೊಳ್ಳಬೇಕೇ ಎಂಬ ಪ್ರಶ್ನೆಗಳು ತಲೆದೋರಿದಾಗ, ಜಗದ್ವ್ಯಾಪಾರ ಅನಾದಿ ಅನಂತವಾಗಿರುವುದರಿಂದ ಅದಕ್ಕೊಂದು ನಿಶ್ಚಿತ ಗಡಿಯಿದ್ದರೂ, ಜೀವರು ತಮ್ಮ ಗುಣಕರ್ಮ ಸ್ವಭಾವ ರೂಪಯೋಗ್ಯತೆಗೆ ಅನುಗುಣವಾಗಿ ದುಷ್ಕರ್ಮ ನಿವೃತ್ತಿ, ಸತ್ಕರ್ಮ ಪ್ರವೃತ್ತಿಯಿಂದ ಜೀವನವನ್ನು ಉದ್ಧಾರ ಮಾಡಿಕೊಳ್ಳಬಹುದಾಗಿದೆ ಎಂದು ಧೈರ್ಯ ಹೇಳಿದ್ದಾನೆ. 'While supposition of thorough going chance cannot be predetermined.'

'ಆತ್ಮದ ಉದ್ಧಾರಕ್ಕೆ ಪ್ರಯತ್ನಿಸುವ ಸ್ವಾತಂತ್ರ್ಯ ಜೀವರಿಗೆ ಇದೆ. ಈ ಸ್ವಾತಂತ್ರ್ಯವಿರುವುದರಿಂದಲೇ ಜೀವರಿಗೆ ಜಿಜ್ಞಾಸೆ ಅವಶ್ಯವೆಂದು ಎಲ್ಲ ದರ್ಶನಗಳೂ ಸಾರಿವೆ. ಆದರೆ ಈ ಸ್ವಾತಂತ್ರ್ಯ ಪರಿಪೂರ್ಣವಾದುದಲ್ಲವೆಂದು ನೀಷೆಯ ಹಟ. ಭಾರತೀಯ ದರ್ಶನದಲ್ಲಿ ಬರುವ ದತ್ತ ಸ್ವಾತಂತ್ರ್ಯ ವಿಚಾರವನ್ನು ಗಮನಿಸಿದವರಿಗೆ ಅವನ ಈ ಹಟ ಸೋಜಿಗವೆನಿಸದು.

ಯೋಗ್ಯತೆಯಲ್ಲಿ ಅಧಮರಾದವರು, ನಿಯಾಮಕ ಸಾಮರ್ಥ್ಯವುಳ್ಳ ಮಹಾಪುರುಷರ ಜೀವನವನ್ನು ಆದರ್ಶವಾಗಿಟ್ಟುಕೊಳ್ಳಬೇಕು. ಕಾರ್ಲೈಲ್ ಹಾಗೆ ನೀಷೆ ಕೂಡ ವ್ಯಕ್ತಿಪೂಜಕನಾದುದರಿಂದ ತನ್ನ ಈ ಆದರ್ಶವಾದವನ್ನು ಬಲವಾಗಿ ಸಮರ್ಥಿಸುತ್ತಾನೆ. ಸಾಮಾನ್ಯ ಜೀವರು ತಮ್ಮ ಪ್ರಯತ್ನಕ್ಕೆ ನಿಲುಕದ ಮಹತ್ಸಾಧನೆಗಳನ್ನು ಮಹಾಪುರುಷರಿಗೆ ಒಪ್ಪಿಸಿ ನಿಶ್ಚಿಂತರಾಗಬೇಕು. ಮಹಾಪುರುಷರಾದವರೋ ಜನಸಾಮಾನ್ಯರ ಜೀವನದ ಸುಖಶಾಂತಿಗಳಿಗೆ ಭಂಗ ಬಾರದಂತೆ ನೋಡಿಕೊಳ್ಳಬೇಕು. ಶಾಂತಿಯನ್ನು ಕಾಪಾಡಬೇಕು. ಜನಾಂಗಕ್ಕೆ ಜಗತ್ತಿಗೆ ಮಾರ್ಗದರ್ಶನ ಮಾಡಬೇಕು. ಅದು ಅವರ ಹೊಣೆ. ಈ ಹೊಣೆ, ಈ ಕಠೋರ ದೀಕ್ಷೆ ಜನಸಾಮಾನ್ಯರಿಗೆ ಅಸಾಧ್ಯವಾದುದರಿಂದ ಅವರೇ ಧನ್ಯರು. 'It is a joy to be a mediocre ಎಂದಿದ್ದಾನೆ. ಬ್ರಹ್ಮಚರ್ಯಾದಿ ಕಠೋರ ಆಶ್ರಮಗಳನ್ನು ಪಾಲಿಸುವವರು 'ಧನ್ಯೋ ಗೃಹಸ್ಥಾಶ್ರಮೀ' ಎಂದಂತಿದೆ ಈ ಮಾತು.

ಮಹಾಪುರುಷರ ಜೀವನವನ್ನು ಜನ ಅರ್ಥ ಮಾಡಿಕೊಂಡು ಅಂಥವರ ಪ್ರಾದುರ್ಭಾವಕ್ಕೆ ಜನಾಂಗ ಅಗತ್ಯವಾದ ವಾತಾವರಣ ಕಲ್ಪಿಸಬೇಕು. ಯೋಗ್ಯತೆಯಲ್ಲಿ ತಾರತಮ್ಯವಿರುವುದರಿಂದ

ಉತ್ತಮರು ಹೆಮ್ಮೆ ಪಡುವ ಮತ್ತು ಅಧಮರು ಜಿಗುಪ್ಸೆ ಹೊಂದುವ ಕಾರಣವಿಲ್ಲ. ಅದು ವಸ್ತುಸ್ಥಿತಿ. ಎಲ್ಲರೂ ತಮ್ಮ ಯೋಗ್ಯತೆಯನ್ನರಿತು, ತಮಗೆ ತಕ್ಕ ಸ್ಥಾನಮಾನಗಳಲ್ಲಿದ್ದು, ಪ್ರಾಮಾಣಿಕತನದಿಂದ ಯಾವ ವಿಷಾದಕ್ಕೂ ಎಡೆಗೊಡದೆ ದುಡಿದರೆ ಸಾಕು. ಅದರಿಂದ ರಾಷ್ಟ್ರಾಭಿವೃದ್ಧಿಯಾಗುವುದು, ಜಗತ್ಕಲ್ಯಾಣವಾಗುವುದು. ಈ ಬಗೆಯ ವಾತಾವರಣ ಉಂಟಾದಾಗ ವಿರೋಧಿಗಳೇ ಆತ್ಮರಕ್ಷಕರಾಗುವರು. ಪ್ರಜಾತಂತ್ರದಲ್ಲಿ ವಿರೋಧ ಪಕ್ಷವನ್ನು ಪೋಷಿಸಿಕೊಂಡು ಬರುವುದು ಈ ದೃಷ್ಟಿಯಿಂದಲೇ. ಮನುಷ್ಯ ತನ್ನ ಯೋಗ್ಯತೆಗೆ ತಕ್ಕ ಸೇವೆಯನ್ನು ಮಾಡಲು ನಿರಾಕರಿಸಕೂಡದು. Many a one hath cast away his final worth when he cast away his servitude.

ಸೇವಾಧರ್ಮಃ ಪರಮಗಹನೋ ಯೋಗಿನಾಮಪಿ ಅಗಮ್ಯಃ.

ನೀಷೆ ಸೂಚಿಸಿರುವ ಮಹಾಪುರುಷರ ಲಕ್ಷಣಗಳನ್ನು ತಮ್ಮಲ್ಲಿ ಆರೋಪಿಸಿಕೊಂಡು, ತಾವೇ ಪೂರ್ಣ ಶ್ರೇಷ್ಠರೆಂದೂ, ವಿಶ್ವಕ್ಕೆ ಮಾರ್ಗದರ್ಶಕರೆಂದೂ ಘೋಷಿಸಿ ಅನೇಕ ಜರ್ಮನರು ಸಾಹಸಪ್ರಿಯತೆ, ಯುದ್ಧಪ್ರಿಯತೆ ಮತ್ತು ಆಕ್ರಮಣಶೀಲತೆಗಳಿಗೆ ಕ್ರಮವಾಗಿ ಎಡೆಗೊಡುತ್ತಿರುವುದನ್ನು ಕಂಡು ನೀಷೆ ಮರುಗಿದ್ದಾನೆ. 'ಭವ್ಯ ಜರ್ಮನ್' ಭಾವನೆಯನ್ನು 'ಜರ್ಮನ್ ಸಾಮ್ರಾಜ್ಯಶಾಹಿಗೆ' ಬಲಿಗೊಡುತ್ತಿದ್ದಾರೆ ಎಂದು ಬಂಡೆಬ್ಬಿಸಿದ್ದಾನೆ. ಅವನು ಜನತೆಯ ಮುಂದಿಟ್ಟ ಅನೇಕ ಕುತೂಹಲಕಾರಿ ತತ್ತ್ವಗಳನ್ನು ಜನ ಅರಿತುಕೊಳ್ಳದೆ ಅವನ ವಿಚಾರಗಳಿಗೆ ತಮ್ಮ ಹುಲಿಯ ವೇಷ ತೊಡಿಸಿ ವಿಶ್ವದ ಹೋಳಿಯಾಡಿದರೆ ಅದರ ಹೊಣೆ ನೀಷೆ ತಲೆಗೆ ಕಟ್ಟುವುದು ನ್ಯಾಯವೇ ಎಂದಿದ್ದಾರೆ ಅನೇಕ ವಿಮರ್ಶಕರು. ಅವನಲ್ಲಿ ರಾಜ್ಯಲಾಲಸೆ, ಸಮರಲಾಲಸೆಗಳಿರಲಿಲ್ಲ. ವಿಶ್ವಮೈತ್ರಿಯಕ್ಕೆ ಅವನ ಒಪ್ಪಿಗೆಯಿತ್ತು, ಎಂಬುದನ್ನು ಸೂಚಿಸಲು ಹೇರಳವಾದ ಸಾಕ್ಷ್ಯಗಳನ್ನು ಅವನ ತತ್ತ್ವನಿರೂಪಣೆಯಲ್ಲಿ ಕಾಣಬಹುದಾಗಿದೆ. ಸಮಾಜವಾದ, ಸಮತಾವಾದಗಳು ಜನರಲ್ಲಿ ಅನಾವಶ್ಯಕವಾಗಿ ಆಸೆಯನ್ನು ಕೆರಳಿಸುವುವು ಎಂದು ಹೇಳಿದ್ದರೂ ಪ್ರಜಾತಂತ್ರದ ತತ್ತ್ವಕ್ಕೆ ಅವನು ವಿರೋಧ ಸೂಚಿಸಿಲ್ಲ, 'Not that all men should be alike, but all alike should have equal opportunity' ಎಂದು ಹೇಳಿ ಅದನ್ನು ಪ್ರಜಾತಂತ್ರದ ತಳಹದಿಯಾಗಿಟ್ಟುಕೊಳ್ಳಬೇಕು ಎಂದಿದ್ದಾನೆ. ಶಾಂತಿಸಮಯದಲ್ಲಿ ಸೇನೆ ಅನಾವಶ್ಯಕ ಎನ್ನುವ ಅವನ ಮಾತು ಗಾಂಧೀವಾದಕ್ಕೆ ಹತ್ತಿರವೆನಿಸುವುದು. ಈ ಅಂಶಗಳನ್ನು ವಿಸ್ತಾರ ಭಯದಿಂದ ಇಲ್ಲಿ ಕೂಲಂಕಷವಾಗಿ ಚರ್ಚಿಸುವುದು ಅನುಚಿತ. ಸದ್ಯ, ಇಲ್ಲಿ ನಿರೂಪಿತವಾದ ನೀಷೆವಾದದ ಕೆಲವು ಮುಖ್ಯಾಂಶಗಳು ವಾಚಕರಿಗೆ ವಿದಿತವಾದರೆ ಸಾಕು.

ಬೇರೆ ಬೇರೆ ಪ್ರಮಾಣಗಳಿಂದ ದೊರಕುವ ಫಲಗಳಿಗೆ ಸಾಮಾನ್ಯವಾಗಿ ನೀಡಿರುವ ಹೆಸರು ದರ್ಶನ. ಅದರ ಅಕ್ಷರಾರ್ಥ 'ಕಾಣ್ಕೆ'. ಭಾರತೀಯರು ತತ್ತ್ವ ಚಿಂತನೆಯಿಂದ ಬಯಸಿದ್ದು ಅಂತಿಮ ಸತ್ಯದ ಪರೋಕ್ಷ ಜ್ಞಾನವನ್ನಲ್ಲ. ಅದರ ಅಪರೋಕ್ಷ ದರ್ಶನವನ್ನು ಎಂಬುದನ್ನು ಇದು ಸೂಚಿಸುತ್ತದೆ. ಹಾಗಾದಲ್ಲಿ, ಭಾರತೀಯ ತತ್ತ್ವಚಿಂತನೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಒಂದು ವಿಶಿಷ್ಟ ಲಕ್ಷಣವನ್ನು ಆ ಪದವು ಹೇಳುತ್ತದೆ ಎನ್ನಬಹುದು. ಅದೆಂದರೆ, ಕೇವಲ ಬೌದ್ಧಿಕವಾದ ನಂಬಿಕೆಯಿಂದ ತೃಪ್ತರಾಗಿ ನಾವು ಸುಮ್ಮನಿದ್ದುಬಿಡಬಾರದು, ಅಂಥ ನಂಬಿಕೆಯನ್ನು ಪ್ರತ್ಯಕ್ಷಾನುಭವವಾಗಿ ಮಾರ್ಪಡಿಸಲು ಪ್ರಯತ್ನಿಸಬೇಕು. ಆದರೆ ದರ್ಶನ ಎಂಬುದು ಇಲ್ಲಿ ಅದಕ್ಕೆ ಪರ್ಯಾಯವಾಗಿ ಬರುವ, ಅದರ ಸಮಾನಾರ್ಥಕವಾದ 'ದೃಷ್ಟಿ' ಎಂಬುದರಂತೆಯೇ ಒಂದು 'ತಾತ್ತ್ವಿಕ ಅಭಿಪ್ರಾಯ' ಎಂಬ ಅರ್ಥವನ್ನು ನೀಡಿ ಇತರವುಗಳಿಗಿಂತ ಭಿನ್ನವಾದ ಒಂದು ನಿರ್ದಿಷ್ಟ ಚಿಂತನೆಯ ಪಂಥವನ್ನು ಸೂಚಿಸುತ್ತದೆ ಎಂಬುದೇ ಹೆಚ್ಚು ಸಂಭವವಾಗಿ ತೋರುತ್ತದೆ.

—ಎಂ. ಹಿರಿಯಣ್ಣ†

---

†ಭಾರತೀಯ ತತ್ತ್ವ ಶಾಸ್ತ್ರದ ರೂಪುರೇಷೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ (1973), ಪು. 196

ವಿ. ಎನ್. ಶೇಷಗಿರಿರಾವ್

ಎಪಿಕ್ಯೂರಿಯನ್ನರು ಮತ್ತು ಚಾರ್ವಾಕರು

ಸಾಕ್ರಟೀಸನ ಘನವ್ಯಕ್ತಿತ್ವವನ್ನೂ ಅವನ ಹಿರಿಮೆಗರಿಮೆಗಳನ್ನೂ ಸದಾಚಾರ ಸಂಪನ್ನತೆಯನ್ನೂ ಪ್ರಶಂಸಿಸದವರು ಅತಿ ವಿರಳ. ಅಂದಿನ ಆ ಜನರ, ಅದರಲ್ಲೂ ಯುವಕ ಪೀಳಿಗೆ ಸನ್ಮಾರ್ಗ ಪ್ರವರ್ತಕವಾಗುವಂತೆ ಮಾಡುವಲ್ಲಿ ಸಾಕ್ರಟೀಸನ ಸಾಹಸ ಸಾಮರ್ಥ್ಯ ಮೆಚ್ಚುವಂಥಾದ್ದು. ಅವನ ಸನ್ಮಾರ್ಗ ಪ್ರವರ್ತನೆಯನ್ನು ಸಾಹಿತ್ಯದ ಮೂಲಕ ವ್ಯಕ್ತೀಕರಿಸಿ 'ಘನವಂತ ಸಾಕ್ರಟೀಸ್' ಜನಸಾಮಾನ್ಯರ ನಾಲಗೆಯ ಮೇಲೆ ಬೇರೂರುವಂತೆ ಮಾಡಿದ ಪ್ಲೇಟೋ ; ಗುರುವಿನೊಡನೆ ಹಲಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರೂ, ತನ್ನ ಪರಮಗುರು ಹಾಕಿಕೊಟ್ಟ ದಾರಿಯಲ್ಲಿ ನಡೆದರೆ ಶ್ರೇಯಸ್ಸೆಂದು ನಂಬಿ ಹೊರಟ ಅರಿಸ್ಟಾಟಲ್ ಮುಂತಾದ ಮಹಾನುಭಾವರ ಕಾಲದ ಅನಂತರ, ಗ್ರೀಕ್ ತತ್ತ್ವಶಾಸ್ತ್ರದ ತವರು ಮನೆಯಾದ ಅಥೆನ್ಸಿನಲ್ಲಿ ಅವರ ಶಿಷ್ಯಪರಂಪರೆ ತಮ್ಮ ಗುರುಪರಂಪರೆಯ ಬೋಧನೆಗಳನ್ನು ಪ್ರಚಾರಪಡಿಸುವುದರಲ್ಲಿ ಹೆಣಗಿತೇ ಹೊರತು ತನ್ನದೇ ಆದ ಯಾವ ತತ್ತ್ವಜ್ಞಾನವನ್ನೂ ರೂಪಿಸಲು ಅಸಮರ್ಥವಾಯಿತು.

ಆ ಕಾಲದಲ್ಲಿ ಗ್ರೀಸಿನ ಪ್ರಭುತ್ವಕ್ಕೇ ಏಟುಬೀಳುವ ಪರಿಸ್ಥಿತಿಗಳು ಬಂದೊದಗಿದುವು. ಗ್ರೀಸ್ ಯುದ್ಧಗಳ ಆವಾಸಸ್ಥಾನವಾಯಿತು. ಎಲ್ಲೆಲ್ಲಿಯೂ ಭಯ, ಹಾಹಾಕಾರ, ನಿರಾಶಾವಾದ ಕವಿದುವು. ಜನರು ಮತಿಹೀನರಾದರು. ಮನುಷ್ಯ ಸ್ವಭಾವವಾದ ದುಷ್ಟಪ್ರವೃತ್ತಿಯೆಂಬ ಬೆಂಕಿಗೆ ತುಪ್ಪವನ್ನು ಸುರಿದಂತಾಗಿತ್ತು. ನೀತಿ ನಡತೆ ಸಹಿಸಲಸಾಧ್ಯವಾದಷ್ಟು ಕೆಟ್ಟಿತ್ತು. ಯುದ್ಧದ ದುಷ್ಪರಿಣಾಮಗಳು ಅಂದಿನ ಜನರಲ್ಲಿ ಮನೆ ಮಾಡಿಕೊಂಡಿದ್ದುವು. ಜನರು ಇಹಲೋಕ ಸುಖಸಾಗರದಲ್ಲಿ ಮೈಮರೆತರು. ದೇಶದಲ್ಲೆಲ್ಲ ಅನೈತಿಕತೆ, ಅಕ್ರಮ, ಅಶ್ಲೀಲ ಚಟುವಟಿಕೆಗಳು ತಾಂಡವವಾಡಲು ಉಪಕ್ರಮಿಸಿದ್ದುವು. ಜನರ ನಡುವೆ ಇದ್ದ ಮೈತ್ರಿ ಸಡಿಲವಾಗತೊಡಗಿತ್ತು. ಮ್ಯಾಸಿಡಾನಿನ ಪ್ರಸಿದ್ಧ ರಾಜನಾದ ಅಲೆಕ್ಸಾಂಡರನಿಗೆ ಗ್ರೀಸ್ ನೀರು ಕುಡಿಯುವಷ್ಟು ಸುಲಭವಾಗಿ ಅಧೀನವಾಯಿತು.

ಈ ಘಟನೆಗಳು ನಡೆದ ಅನಂತರ ಆ ಜನರ ಪೈಕಿ ಕೆಲವರು ಆತ್ಮಪರೀಕ್ಷೆ ಮಾಡಿಕೊಳ್ಳತೊಡಗಿದರು. ತತ್ತ್ವಜ್ಞಾನ ಸರಿಯಾಗಿ ಪ್ರಾರಂಭವಾಗುವುದು ಒಬ್ಬ ವ್ಯಕ್ತಿ ಒಂದು ಬಿಕ್ಕಟ್ಟಿನ ಸ್ಥಿತಿಯನ್ನು ನಿಲುಕಿದಾಗಲೇ. ತತ್ತ್ವಜ್ಞಾನ ಕುತೂಹಲದಿಂದಲೂ, ದೊಡ್ಡ ದೊಡ್ಡ ಗ್ರಂಥಗಳನ್ನು ಅವಲೋಕಿಸುವುದರಿಂದಲೂ ಪ್ರಾರಂಭವಾಗುವುದೆಂದು ಕೆಲವು ಪಾಶ್ಚಾತ್ಯರು ಅಭಿಪ್ರಾಯಪಟ್ಟರೂ ಅವುಗಳಲ್ಲೆಲ್ಲ ತಿಲಕಪ್ರಾಯವಾಗಿ ನಿಲ್ಲುವುದು ಆ ವ್ಯಕ್ತಿಯ ಜೀವನದಲ್ಲಿ ನಡೆಯುವ ಘಟನೆಗಳು ; ಆ ಘಟನೆಗಳನ್ನು ಆ ವ್ಯಕ್ತಿ ನೋಡುವ ವಿಮರ್ಶಿಸುವ ದೃಷ್ಟಿಯೇ ಆ ವ್ಯಕ್ತಿಯ ತತ್ತ್ವಜ್ಞಾನದ ಪ್ರೇರಣಾಂಶದ ಬುನಾದಿಯಾಗುತ್ತದೆ. ಅಪಕೀರ್ತಿ, ಕಷ್ಟನಷ್ಟಗಳು, ಸೋಲು, ಗುಲಾಮಗಿರಿತನ ಮುಂತಾದವು ಅಂದಿನ ಗ್ರೀಸ್ ಜನತೆಗೆ ದುರ್ಭಾರವಾಗಲು ಅವರು ಮೆಲ್ಲಗೆ ಜೀವನದೆಡೆಗೆ ಕಣ್ಣು ತೆರೆಯಲಾರಂಭಿಸಿದರು, ಈ ಗುಂಪಿನ ಜನರಲ್ಲಿ ಎಪಿಕ್ಯೂರಿಯನ್ನರು ಮತ್ತು ಸ್ಟೋಯಿಕರು ಮುಖ್ಯರಾದವರು. ಗ್ರೀಸಿನಲ್ಲಿ ಮೇಲೆ ಹೇಳಿದ ಘಟನೆಗಳು ನಡೆದ ಅನಂತರ ಆ ಜನರು ತಾವ್ಯಾರು, ತಮ್ಮ ದೆಸೆ ಎಲ್ಲಿ, ಸಂಸಾರ ಎಂದರೇನು, ನಿಜವಾದ ಸುಖ ಯಾವುದು, ಪ್ರಪಂಚದ ಜಂಜಾಟದಲ್ಲಿ ಇದ್ದೂ ಹರ್ಷಚಿತ್ತ

ರಾಗಿರುವುದೆಂತು, ಸುಖ ವ್ಯಕ್ತಿನಿಷ್ಠವೇ ಅಥವಾ ವಸ್ತು ನಿಷ್ಠವೇ–ಮುಂತಾದ ಗಹನವಾದ ಪ್ರಶ್ನೆಗಳಿಗೆ ತಮ್ಮ ಮನಸ್ಸಿನಲ್ಲಿ ಪುನಃ ಸ್ಥಳಕೊಟ್ಟು ಅವುಗಳಿಗೆ ಉತ್ತರವನ್ನು ಹುಡುಕುವುದರಲ್ಲಿ ಮಗ್ನರಾದರು.

೨

ಎಪಿಕ್ಯೂರಸ್ ಎಂಬ ತಾತ್ತ್ವಿಕನೇ 'ಎಪಿಕ್ಯೂರಿಯನ್ ಸಿದ್ಧಾಂತದ ನಾಯಕ, ಇವನು ಕ್ರಿ.ಪೂ. 341ರಲ್ಲಿ ಜನಿಸಿದ. ಇವನ ತತ್ತ್ವ ಸಿದ್ಧಾಂತದ ಮುಖ್ಯಾಂಶಗಳೆಲ್ಲಾ ಡೆಮಾಕ್ರೈಟಸ್ ಮತ್ತು ಡಯೋಜಿನೀಸನಿಂದ ಎರವಲು ಪಡೆದವು. ಮೇಲೆ ಹೇಳಿದ ಇಬ್ಬರು ಗುರುಗಳ ಬರವಣಿಗೆಗಳನ್ನು ಆಳವಾಗಿ ಅಭ್ಯಾಸಮಾಡಿ ಬೋಧಿಸಿ, ಅವನ್ನು ಸಂರಕ್ಷಿಸಲು ಇವನು ಅಥೆನ್ಸಿನಲ್ಲಿ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಿದ. ಇವನ ವೈಶಿಷ್ಟ್ಯವೆಂದರೆ ಹೆಂಗಸರೂ ಈತನ ತತ್ತ್ವಸಿದ್ಧಾಂತಕ್ಕೆ ಮೊರೆಹೋಗಿ ಈತನ ಶಿಷ್ಯರಾದರು.

ಹೀಗೆ ಗ್ರೀಸಿನಲ್ಲಿ ಮೊದಲು ಬೆಳೆದಿದ್ದ ತತ್ತ್ವಜ್ಞಾನ ಕಾಲಕ್ರಮೇಣ ದುರ್ಬಲವಾಗಿ ಕೊನೆಗೆ ಗ್ರೀಸ್ 'ಪಿಕ್ನಿಟ್' ನಲ್ಲಿ ಶಿಕ್ಷಣ ಪುನಃ ಚೇತನಗೊಂಡು ಪ್ರಬಲವಾಯಿತು. ಭಾರತದಲ್ಲಿ ಸಾವಿರಾರು ವರ್ಷಗಳಿಂದ ಹಿಂದಿನಿಂದ ಬರುತ್ತಿದ್ದ ವೈದಿಕ ತತ್ತ್ವಗಳನ್ನು ಧಿಕ್ಕರಿಸಿ ತಮ್ಮ ಸ್ವಂತ ಚಿಂತನೆಯಿಂದ ಲೌಕಿಕ ತತ್ತ್ವಜ್ಞಾನದ ಚಕ್ರವನ್ನು ಕೆಲವರು ಉರುಳಿಸಿದವರಲ್ಲಿ ಚಾರ್ವಾಕರು, ಜೈನರು ಮತ್ತು ಬೌದ್ಧರು ಮುಖ್ಯರಾದವರು. ಇವರಲ್ಲಿ ಚಾರ್ವಾಕರಿಂದ ವೇದಗಳ ನಿಂದನೆ ನಿರಂತರವಾಗಿ ಸಾಗಿತು. ಸ್ವಚ್ಛಂದ ಪ್ರವೃತ್ತಿಶೀಲರಾದ ಇವರು ವೇದಗಳು ಕಾಪಟ, ಪುರೋಹಿತರ ಸ್ವಾರ್ಥ ಆಲಾಪವೆಂದೂ ಜನಸಾಮಾನ್ಯರನ್ನು ಮೋಸ ಹಿಡಿತದಲ್ಲಿಟ್ಟುಕೊಳ್ಳುವ ಭಾರಿ ಉಪಾಯವೆಂದೂ ಹೇಳತೊಡಗಿದರು.

ಎಪಿಕ್ಯೂರಿಯನ್ನರ ತತ್ತ್ವಜ್ಞಾನದ ಸಾರ ಹೀಗಿದೆ : ಮಾನವ ಸ್ವಭಾವತಃ ಸುಖಾಪೇಕ್ಷೆಯುಳ್ಳವನು. ಸುಖವನ್ನು ಅರಸುವುದು ಅವನ ಹುಟ್ಟುಗುಣ. ಸುಖವನ್ನು ಪಡೆಯಬೇಕೆಂದು ಅವನು ತವಕಪಡುತ್ತಿರುತ್ತಾನೆ. ಸಾಧ್ಯವಾದಷ್ಟು ಅಸುಖ, ನೋವು, ದುಃಖ ಇವುಗಳಿಂದ ದೂರವಿರಲು ತೀವ್ರವಾಗಿ ಬಯಸುತ್ತಾನೆ. ಸುಖವನ್ನು ಅರಸುವ ಗುಣ ಮನುಷ್ಯನಿಗಷ್ಟೇ ಸೀಮಿತವಾಗಿಲ್ಲ. ಅದು ಪ್ರಾಣಿಗಳಲ್ಲೂ ಕಂಡುಬರುತ್ತದೆ. ಪ್ರಪಂಚದಲ್ಲಿ ತಮ್ಮ ಇರುವಿಕೆ ಎಷ್ಟೇ ಅಲ್ಪವಾದರೂ, ಇದ್ದಷ್ಟು ಕಾಲ ಸುಖವಾಗಿ ಬದುಕಬೇಕು ಎಂಬುದು ಎಪಿಕ್ಯೂರಿಯನ್ನರ ನೀತಿ ಸಿದ್ಧಾಂತ.

ತತ್ತ್ವಜ್ಞಾನಕ್ಕೆ ಒಂದು ಗುರಿ ಇರಬೇಕು. ತತ್ತ್ವಜ್ಞಾನ, ಬದುಕಿರುವಾಗಲೇ ಮಾನವ ಸುಖ ಪಡೆಯುವ ದಾರಿಯನ್ನು ತೋರಿಸಬೇಕು. ಕೇವಲ ಜ್ಞಾನದಿಂದ ಯಾವ ಪ್ರಯೋಜನವೂ ಇಲ್ಲ. ತತ್ತ್ವಶಾಸ್ತ್ರದಿಂದ ನಾವು ಕಲಿತ ಜ್ಞಾನ ನಮ್ಮ ಕಾರ್ಯಗಳಲ್ಲಿ ಇಳಿದು ಸುಖರಸದ ಬುಗ್ಗೆಯನ್ನು ಎಬ್ಬಿಸಬೇಕು. ಆಗಲೇ ತತ್ತ್ವಜ್ಞಾನಕ್ಕೆ ಬೆಲೆ ಬರುತ್ತದೆ. ಯಾವ ಶಾಸ್ತ್ರ ಕಾರ್ಯರೂಪಕ್ಕೆ ಇಳಿಯುವುದಿಲ್ಲವೋ, ಯಾವ ಶಾಸ್ತ್ರದಿಂದ ಸುಖ ದೊರೆಯುವುದಿಲ್ಲವೋ ಅಂತಹ ಶಾಸ್ತ್ರದ ಅಧ್ಯಯನ ನಿರರ್ಥಕ. ಅಂಥ ಶಾಸ್ತ್ರಗಳ ಸಾಲಿಗೆ ಗಣಿತ ಶಾಸ್ತ್ರ, ಸಂಗೀತ, ಜ್ಯಾಮಿತಿ, ಜ್ಯೋತಿಷ್ಯಶಾಸ್ತ್ರ ಮೊದಲಾದವುಗಳನ್ನು ಎಪಿಕ್ಯೂರಸ್ ಸೇರಿಸುತ್ತಾನೆ. ಆದರೆ ತರ್ಕಶಾಸ್ತ್ರವನ್ನು ಪ್ರತಿಯೊಬ್ಬನೂ ಆವಶ್ಯಕವಾಗಿ ಓದಬೇಕು. ಏಕೆಂದರೆ ಸುಖವನ್ನು ಪಡೆಯುವುದಕ್ಕೆ ಮೊದಲು ಸುಖವೆಂದರೇನು ಎಂಬುದು ನಮಗೆ ತಿಳಿದಿರಬೇಕು. ಸುಖದ ಮೂಲಗಳಾವುವು, ನೋವಿನಿಂದ ತುಂಬಿ ತುಳುಕುತ್ತಿರುವ ಸಂಸಾರದಲ್ಲಿದ್ದೂ ಸುಖವನ್ನು ಹೇಗೆ ಪಡೆಯಬೇಕು—ಮುಂತಾದ ಜ್ಞಾನವನ್ನು ಪಡೆದ ಮೇಲೆ ಅದನ್ನು ಕಾರ್ಯರೂಪಕ್ಕೆ ಇಳಿಸಿ ತದನಂತರ ಸುಖವನ್ನು ಪಡೆಯಬೇಕು. ಈ ಜ್ಞಾನಕ್ಕೆ ತರ್ಕಶಾಸ್ತ್ರವೇ ತಳಹದಿ. ಆದುದರಿಂದ ತರ್ಕಶಾಸ್ತ್ರದ ಅಧ್ಯಯನ ಅತ್ಯಾವಶ್ಯಕ.

ಸುಖ ಎರಡು ಬಗೆಯದು. ಒಂದು ಚಂಚಲವಾದ ಅಶಾಶ್ವತವಾದ ಸುಖ. ದೈಹಿಕ

ಸುಖಗಳು ಇದಕ್ಕೆ ಉದಾಹರಣೆಗಳು. ಆದರೆ ಮಾನಸಿಕ ಸುಖ ಮಹತ್ತ್ವವುಳ್ಳದ್ದು. ಸಿಹಿ ತಿಂಡಿಗಳನ್ನು ತಿಂದಾಗ ಉಂಟಾಗುವ ಸುಖಕ್ಕಿಂತ ಉತ್ತಮ ಸಾಹಿತ್ಯವನ್ನೋದಿದಾಗ ಒದಗುವ ಮಾನಸಿಕ ಸುಖವೇ ಶ್ರೇಷ್ಠವೆಂದು ಎಪಿಕ್ಯೂರಿಯನ್ನರು ಅಭಿಪ್ರಾಯಪಡುತ್ತಾರೆ.

೩

ಎಪಿಕ್ಯೂರಿಯನ್ನರಂತೆ, ಜೀವನದ ಗುರಿ ಸುಖವನ್ನು ಪಡೆಯುವುದಾಗಿರಬೇಕು ಎಂದು ಚಾರ್ವಾಕರೂ ಹೇಳುತ್ತಾರೆ. ಆದರೆ 'ಸುಖ' ಪದದ ಅರ್ಥ ಇಬ್ಬರಲ್ಲೂ ಭಿನ್ನವಾಗಿದೆ. ಚಾರ್ವಾಕರನ್ನು ನಾಸ್ತಿಕರು ಎಂದು ಕರೆಯುವುದು ಲೋಕರೂಢಿ. ನಾಸ್ತಿಕ ಎಂದರೆ ದೇವರ ಅಸ್ತಿತ್ವವನ್ನು ನಂಬದವನು, ತ್ರಿಕಾಲ ಅಬಾಧಿತವಾದ, ಅವಿನಾಶಿಯಾದ ಆತ್ಮತತ್ತ್ವದಲ್ಲಿ ನಂಬಿಕೆ ಇಡದವನು ಎಂದು ಅರ್ಥ. ದೇವರೇ ಇಲ್ಲ. ಇನ್ನು ದೇವಾಧಿದೇವನಾದ ಪರಮೇಶ್ವರನೆಲ್ಲಿ? ಪೂಜೆ ಪುನಸ್ಕಾರ, ಜಪ, ತಪ, ವ್ರತ, ಉಪವಾಸ ಮುಂತಾದ ಆಚಾರಗಳು ನಗೆಪಾಟಲಂತೆಯೇ ಸರಿ. ಈ ಈ ಲೋಕವನ್ನು ಬಿಟ್ಟು ಸ್ವರ್ಗನರಕಗಳು ಎಂಬ ಬೇರೆ ಲೋಕಗಳಿಲ್ಲ. ನಾವು ಬಯಸಿದ್ದು ನಮಗೆ ದೊರಕಿದರೆ ಅದೇ ಸ್ವರ್ಗ ; ನಿರಾಶರಾಗುವುದೇ ನರಕ. ಧರ್ಮ ಎಂಬುದು ಒಂದು ಮನೋರೋಗ. ಸದಾಚಾರ ಸಂಪನ್ನತೆ, ಆತ್ಮಸಾಕ್ಷಾತ್ಕಾರ ಮುಂತಾದವು ಅಪಾಢಭೂತಿಗಳ ಮಾತುಗಳು. ದೇಹ ಬಿಟ್ಟು ಆತ್ಮ ಎಂಬುದಿಲ್ಲ. ದೇಹವೇ ಎಲ್ಲಾ. ಭೂಮಿ, ನೀರು, ತೇಜಸ್ಸು ಮತ್ತು ವಾಯು ಎಂಬ ನಾಲ್ಕು ಭೂತಗಳು ಸಂಯೋಗವಾದಾಗ ಚೈತನ್ಯ ಉಂಟಾಗುತ್ತದೆ. ಅದೇ ಮನಸ್ಸು. ಮನುಷ್ಯ ಮರಣ ಹೊಂದಿದಾಗ ಆಯಾ ಭೂತಗಳ ಅಂಶಗಳು ಆಯಾ ಭೂತಗಳಿಗೆ ಹಿಂತಿರುಗುತ್ತವೆ. ಅದೇ ಮೋಕ್ಷ. ಸಾವು ಜೀವನದ ಕೊನೆ. ಪುನರ್ಜನ್ಮವಿಲ್ಲ. ಸಾವು ಬರುವುದರೊಳಗೆ ತಿಂದು ಕುಡಿದು ಮೆರೆಯಿರಿ, ಎಂಬುದು ಚಾರ್ವಾಕ ಸಿದ್ಧಾಂತದ ಸಾರಸರ್ವಸ್ವ.

೪

ಎಪಿಕ್ಯೂರಿಯನ್ನರು ಚಾರ್ವಾಕರಂತೆ ಭೌತಿಕವಾದಿಗಳಾದರೂ. ದೇವರ ಅಸ್ತಿತ್ವವನ್ನು ನಂಬುತ್ತಾರೆ. ಇದು ಈ ಪಂಗಡದ ವಿಶಿಷ್ಟ ಅಂಶ. ದೇವರು ಒಬ್ಬನಲ್ಲ; ನೂರಾರು, ಸಾವಿರಾರು. ಆದರೆ ಒಂದು ವಿಶಿಷ್ಟ ದೇವರು ಈ ಪ್ರಪಂಚವನ್ನು ಸೃಷ್ಟಿಸಿಲ್ಲ. ದೇವರು ಕೂಡ ಮಾನವರೇ. ಆದರೆ ಅವರು ಅತಿಮಾನವರು ಅಷ್ಟೆ. ಅವರಿಗೆ ಮಾನವರಂತೆ ದೇಹಗಳಿವೆ. ದೇವರುಗಳು ಆತ್ಮತೃಪ್ತರು. ಅವರಿಗೂ ಮಾನವರಿಗೂ ಯಾವ ಸಂಬಂಧವೂ ಇಲ್ಲ. ದೇವತೆಗಳು ತಮ್ಮ ತಮ್ಮ ಲೋಕಗಳಲ್ಲಿ ಸುಖದಿಂದ ಓಲಾಡುತ್ತಿರುತ್ತಾರೆ. ಅವರ ಹತ್ತಿರ ವ್ಯಸನಗಳು ಸುಳಿಯುವುದಿಲ್ಲ. ಮಾನವನ ಸುಖದುಃಖಗಳಿಂದ ಅವರು ಬಹು ದೂರ. ಎಪಿಕ್ಯೂರಿಯನ್ನರ ದೇವರ ವರ್ಣನೆ, ಅರಿಸ್ಟಾಟಲನ 'ಅಚಲನಾದ ಚಲನಕಾರ' (The unmoved mover) ಎಂಬ ದೇವರ ಕಲ್ಪನೆಯಂತೆ. ಆದುದರಿಂದ ದೇವತೆಗಳನ್ನು ಪೂಜಿಸುವುದರಿಂದ ಏನೂ ಉಪಯೋಗ ಇಲ್ಲ. ಅವರು ಅವರ ಪಾಡಿಗೆ ಇರುತ್ತಾರೆ ; ಮಾನವರನ್ನು ಸ್ವಲ್ಪವೂ ಲೆಕ್ಕಿಸುವುದಿಲ್ಲ. ದೇವರುಗಳು ಉಪಾಸನೆಗೆ ಯೋಗ್ಯರಲ್ಲ ; ಮಾನವರು ಉಪಾಸಕರೂ ಅಲ್ಲ, ಎಂಬುದು ಎಪಿಕ್ಯೂರಿಯನ್ನರ ಅಭಿಪ್ರಾಯ.

ಮೊದಲೇ ಹೇಳಿದಂತೆ ಎಪಿಕ್ಯೂರಿಯನ್ನರ ಮೇಲೆ ಡೆಮಾಕ್ರೈಟಸ್ಸನ ಪ್ರಭಾವ ಅಚ್ಚಳಿಯದೆ ಆಗಿದೆ. ಆತ್ಮಗಳೂ ಅಣುಗಳಿಂದ ಮಾಡಲ್ಪಟ್ಟವೆ. ಇವುಗಳಲ್ಲಿರುವ ಸೂಕ್ಷ್ಮ ಪದಾರ್ಥವೇ ಪ್ರತ್ಯಕ್ಷಕ್ಕೆ ಕಾರಣ. ಈ ಆತ್ಮಗಳಿಗೆ ಕೊನೆ ಉಂಟು. ಅಣುಗಳು ಸಂಯೋಗವಾದಾಗ ಆತ್ಮ ಉಂಟಾಗುತ್ತದೆ. ಅಣುಗಳ ವಿಯೋಗವೇ ಸಾವು. ಅದೇ ಕೊನೆ. ಅದರ ಅನಂತರ ಜನ್ಮಾಂತರ

ಗಳಿಲ್ಲ. ಆದುದರಿಂದ ಮಾನವ ಮುಂದಿನ ಲೋಕದ ಚಿಂತೆಯನ್ನು ಬಿಟ್ಟು ಈ ಲೋಕದಲ್ಲಿ ಇದ್ದಷ್ಟು ಕಾಲ ಸುಖವಾಗಿರಬೇಕು. ಇಲ್ಲಿ ನಾವು ಸುಖಿಸಿದರೆ ಅದೇ ಸ್ವರ್ಗ ; ದುಃಖಿಸಿದರೆ ಅದೇ ನರಕ. ಪರಲೋಕ ಇದೆ, ಜನ್ಮಾಂತರಗಳಿವೆ ಎಂದು ನಂಬುವುದೇ ನರಕ. ಏಕೆಂದರೆ ಈ ನಂಬಿಕೆ ದುಃಖಸಾಗರಕ್ಕೆ ಮಾನವನನ್ನು ತಳ್ಳಿ ಹಿಂಸಿಸುತ್ತವೆ.

ಎಪಿಕ್ಯೂರಿಯನ್ನರ 'ಸುಖ' ಚಾರ್ವಾಕರ 'ಸುಖ'ವಲ್ಲ ಎಂಬುದನ್ನು ನಾವು ಸದಾ ನೆನಪಿಡಬೇಕು. ಚಾರ್ವಾಕರಿಗೆ ಸುಖ ಎಂದರೆ ವಿಷಯಲಂಪಟತ್ವ, ಇಂದ್ರಿಯಭೋಗ. ಇಲ್ಲಿ ವೈರಾಗ್ಯಕ್ಕಾಗಲೀ, ವಿವೇಕಕ್ಕಾಗಲೀ ಸ್ಥಾನವಿಲ್ಲ. "ಸಾಲಮಾಡಿಯಾದರೂ ತುಪ್ಪವನ್ನು ತಿಂದು ತೇಗಿ ಭೋಗಜೀವನವನ್ನು ತುಂಬುಮನಸ್ಸಿನಿಂದ ಸವಿಯಿರಿ. ಋಣವನ್ನು ತೀರಿಸದಿದ್ದರೂ ಚಿಂತೆ ಇಲ್ಲ. ಸಾವು ಬರುವುದರೊಳಗೆ ಯಾವುದೇ ಮಾರ್ಗದಿಂದಲೆ ತಿಂದು ತೇಗಿ ಕುಡಿದು ಸುಖಿಸಿರಿ," ಎಂಬುದು ಚಾರ್ವಾಕರ ಲೋಕಬೋಧೆ. ಸದ್ಗುಣ ಅವರ ಪ್ರಕಾರ ಕೆಲಸಕ್ಕೆ ಬಾರದವನ ಅಸ್ತ್ರ.

ಆದರೆ ಎಪಿಕ್ಯೂರಿಯನ್ನರು ಚಾರ್ವಾಕರಂತೆ ಭೌತವಾದದ ಪರಾಕಾಷ್ಠೆಗೆ ಹೋಗುವುದಿಲ್ಲ. ಇವರಲ್ಲಿ ವೈರಾಗ್ಯ ವಿವೇಕಗಳಿಗೆ ವಿಪುಲಸ್ಥಾನ ಉಂಟು. ಅಪೇಕ್ಷಿಸಲ್ಪಟ್ಟ ವಸ್ತು ಸಿಕ್ಕಾಗ ಉಂಟಾಗುವ ಮಾನಸಿಕ ಸ್ಥಿತಿಯೇ ಸುಖ. ಒಂದು ಬಾರಿ ಇಂಥ ಸುಖವನ್ನು ಪಡೆದ ಮೇಲೆ ಮತ್ತೆ ಅಂಥ ಸುಖವನ್ನು ಅಪೇಕ್ಷಿಸದಿರುವುದೇ ನಿಜವಾದ ಸುಖ. ಒಂದು ವಸ್ತುವಿಗೆ ಆಸೆಪಟ್ಟು ಆ ವಸ್ತು ಸಿಕ್ಕಾಗ ಆಗುವ ಸುಖಕ್ಕಿಂತ ವಸ್ತುವಿನ ಸುಖವನ್ನೇ ನಿರ್ಲಕ್ಷಿಸುವುದು ಪರಮ ಸುಖ. ಇದೇ ನಿರಪೇಕ್ಷಸುಖ. ಎಪಿಕ್ಯೂರಿಯನ್ನರ ಈ 'ನಿರಪೇಕ್ಷ ಸುಖ' ಚಾರ್ವಾಕರಿಗೆ ಗೊತ್ತೇ ಇಲ್ಲ. ಅದನ್ನು ಅವರು ಹತ್ತಿರ ಸೇರಿಸರು. ಮೊದಲನೇ ವಿಧದ ಸುಖದಲ್ಲಿ ದುಃಖವೂ ಬೆರೆತಿರುತ್ತದೆ. ಆದರೆ ನಿರಪೇಕ್ಷ ಸುಖ ಹಾಗಲ್ಲ; ಅಲ್ಲಿ ಒಂದು ಬಗೆಯ 'ನಿಷ್ಕಾಮ' ಸುಖವಿರುತ್ತದೆ. ಚಾರ್ವಾಕರದು ವಿಷಯ ಲಂಪಟತ್ವವಾದರೆ ಎಪಿಕ್ಯೂರಿಯನ್ನರದು ವೈರಾಗ್ಯ ಜೀವನ. ಅತಿ ಚಿಂತನೆ ಮಾಡದೆ ವ್ಯಸನಗಳಿಂದ ಬಹು ದೂರವಿದ್ದು ಧರ್ಮ, ನೀತಿ, ನ್ಯಾಯಗಳನ್ನು ಬೆಳೆಸಿಕೊಳ್ಳಬೇಕು. ಧರ್ಮಜೀವನ ಸುಖಜೀವನಕ್ಕೆ ರಾಜಮಾರ್ಗ ಎಂಬುದು ಎಪಿಕ್ಯೂರಿಯನ್ನರ ಅಚಲ ನಂಬಿಕೆ.

೫

ಚಾರ್ವಾಕರಂತೆ ಎಪಿಕ್ಯೂರಿಯನ್ನರೂ ಅದೃಷ್ಟವಾದವನ್ನು ಪ್ರಬಲವಾಗಿ ವಿರೋಧಿಸುತ್ತಾರೆ. ಇಬ್ಬರೂ ಸ್ವಭಾವವಾದಿಗಳು. ಸುಖ, ದುಃಖ, ನೋವು, ನಲಿವು ಮುಂತಾದವುಗಳಿಗೆ ಆಯಾ ವಸ್ತುಗಳ ಸ್ವಭಾವವೇ ಕಾರಣ; ದೇವರಲ್ಲ; ಮತ್ತಾವ ಅತಿಮಾನುಷ ಶಕ್ತಿಯೂ ಅಲ್ಲ. ಮಾನವ ತಾಳಲಾರದ ನೋವಿನಿಂದ ಯಾತನೆ ಪಡುತ್ತಿದ್ದರೆ, ಆ ನೋವನ್ನು ನಿವಾರಿಸಲು ಅಸಾಧ್ಯವೆಂದು ಕಂಡುಬಂದರೆ, ಜೀವ ತೆಗೆದುಕೊಳ್ಳುವುದು ಸಾಧುವೆಂದು ಎಪಿಕ್ಯೂರಸ್ಸನ ಅಭಿಪ್ರಾಯ. ಆದರೆ ಇಂಥ ಘೋರ ಯಾತನೆ ಜ್ಞಾನಿಗೆ ಬರುವುದೇ ಇಲ್ಲ. ಏಕೆಂದರೆ ಅವನು ನಿರಪೇಕ್ಷ ಸುಖ ಶಾಂತಿಯಲ್ಲಿ ಯಾವಾಗಲೂ ತನ್ಮಯನಾಗಿರುತ್ತಾನೆ. ಅಂದರೆ ಅವನು ನೋವು ನಲಿವುಗಳ ಅಪೇಕ್ಷೆಯನ್ನೇ ತೊರೆದಿರುತ್ತಾನೆ. 'ಸ್ವಭಾವವಾದ' ಶಾಂತಿಯ ನೆಲೆ ಎಂದೂ, ಇದು ಚಾರ್ವಾಕದರ್ಶನದ ಮಹದುಪಕಾರವೆಂದೂ, ತಾನೂ ಸುಖವಾಗಿದ್ದು ನೆರೆಯವನನ್ನು ಸುಖವಾಗಿರುವುದಕ್ಕೆ ಅವಕಾಶ ಕಲ್ಪಿಸಿ, ಇಲ್ಲಸಲ್ಲದ ಕಲ್ಪನೆಗಳು ಮನಸ್ಸಿನಲ್ಲಿ ಏಳಲು ಬಿಡದೆ ಸರ್ವರೂ ಸುಖವಾಗಿರಬೇಕೆಂದು ಹೇಳುವ ಚಾರ್ವಾಕರ ದೃಷ್ಟಿ 'ಪ್ರಪಂಚ ಅನುಗ್ರಹ ದೃಷ್ಟಿ' ಎಂದೂ ಚಾರ್ವಾಕ ದರ್ಶನದ ಗುಣಗಳನ್ನು ವಿದ್ವಾಂಸರು ಗುರುತಿಸುತ್ತಾರೆ.

೬

ಇಲ್ಲಿ ನಾವು ಗಮನಿಸಬೇಕಾಗಿರುವುದು : ಎಪಿಕ್ಯೂರಿಯನ್ನರ ಭೌತವಾದಕ್ಕೂ (Materialism) ಅವರು ಪ್ರತಿಪಾದಿಸುವ ದೇವರ ಅಸ್ತಿತ್ವಕ್ಕೂ ಇರುವ ಔಚಿತ್ಯ, ಇದು ಸಮಂಜಸವೇ ಎಂಬ ಅಂಶ. ದೇವರಿದ್ದಾನೆ. ಆದರೆ ಅವನು ಸೃಷ್ಟಿಕರ್ತನಲ್ಲ; ಅವನಿಗೂ ಮಾನವರಿಗೂ ಯಾವ ಸಂಬಂಧವೂ ಇಲ್ಲ : ಅವನು ಉಪಾಸ್ಯನಲ್ಲ, ಮಾನವ ಉಪಾಸಕನಲ್ಲ–ಎಂಬ ಅವರ ಅಭಿಪ್ರಾಯವನ್ನು ಧಾರ್ಮಿಕ ಪ್ರವೃತ್ತಿಯುಳ್ಳ ಮಾನವ ಒಪ್ಪಲಾರ. ದೇವರಿದ್ದಾನೆ ಎಂದ ಮೇಲೆ ಅವನು ಮಾನವನಂತೆ ದೋಷಪೂರ್ಣನಲ್ಲ. ಸೃಷ್ಟಿ ಅವನ ಕ್ರಿಯೆ, ಲೀಲೆ. ಮಾನವರನ್ನು ಸೃಷ್ಟಿಮಾಡಿ ತಮ್ಮ ನೈಜಸ್ಥಿತಿಯನ್ನು ಪುನಃ ಪಡೆಯುವಂತೆ ಮಾಡುವುದೇ ದಯಾಪರನಾದ ಆತನ ಉದಾರ ಬುದ್ಧಿ ಎಂಬುದು ಧಾರ್ಮಿಕ ಮನೋವೃತ್ತಿಯುಳ್ಳ (Religious-minded) ಮಾನವನ ಅಚಲ ನಂಬಿಕೆ. ಭೌತಿಕವಾದವನ್ನು ಪ್ರತಿಪಾದಿಸಿಯೂ ದೇವರ ಅಸ್ತಿತ್ವವನ್ನೇಕೆ ಬಯಸಬೇಕು ? ಅಣುಗಳು ಸ್ವಭಾವದಿಂದ ಸ್ವತಃ ಚಲನೆಯುಳ್ಳವು. ಚಲಿಸುವ ಅಣುಗಳ ಸಂಯೋಗ ಅಥವಾ ಘರ್ಷಣೆಯೇ ವಸ್ತು ; ಅಣುಗಳ ವಿಯೋಗವೇ ವಸ್ತುವಿನ ನಾಶ–ಎಂದು ಒಪ್ಪುವ ಎಪಿಕ್ಯೂರಿಯನ್ನರು, ದೇವರ ಅಸ್ತಿತ್ವವನ್ನೂ ಹೇಳಿ ದೇವರಿಗೂ ಪ್ರಪಂಚಕ್ಕೂ ಯಾವ ಸಂಬಂಧವೂ ಇಲ್ಲ ಎಂದು ತಿಳಿಯಪಡಿಸುವುದು ಅವರ ಪ್ರಕೃತಿಭೌತಶಾಸ್ತ್ರದ (Metaphysics) ದೌರ್ಬಲ್ಯವನ್ನು ಎತ್ತಿ ತೋರಿಸುತ್ತದೆ. ಚಾರ್ವಾಕರಲ್ಲಿ ಈ ದೌರ್ಬಲ್ಯಕ್ಕೆ ಅವಕಾಶ ಇಲ್ಲ. ಆದರೆ 'ಸ್ವಭಾವವಾದ' ವನ್ನು ತಮ್ಮ 'ಅಣುವಾದ'ವನ್ನು ಉಪಯೋಗಿಸಿಕೊಳ್ಳುವುದರ ಮೂಲಕ ಎಪಿಕ್ಯೂರಿಯನ್ನರು ಚಾರ್ವಾಕರಿಗಿಂತ ಅತ್ಯಂತ ಸಮರ್ಥವಾಗಿ ವಿವರಿಸುತ್ತಾರೆ. ಚಾರ್ವಾಕರಿಗೆ 'ಅಣುವಾದ' ಹೊಸದು. ವಾಯು, ಅಗ್ನಿ, ನೀರು ಮತ್ತು ಪೃಥ್ವಿ—ಈ ನಾಲ್ಕು ಮಹಾಭೂತಗಳೇ ಅವರ ಭೌತಿಕ ಪ್ರಪಂಚದ ಸರ್ವಾಧಾರ.

ಲೋಕಾಯತರ, ನಾಸ್ತಿಕರ ಮತ್ತು ಶ್ರದ್ಧಾಹೀನರ ಮೂಲ ಸೂತ್ರಗ್ರಂಥಗಳು ನಮಗೆ ಉಪಲಬ್ಧವಿಲ್ಲವೆಂಬುದು ಭಾರತೀಯ ತತ್ತ್ವಶಾಸ್ತ್ರದ ವಿದ್ಯಾರ್ಥಿಗಳಿಗೆ ಚೆನ್ನಾಗಿಯೇ ವಿದಿತವಿದೆ. ಯಾವುದೇ ಸಿದ್ಧಾಂತ ಅಥವಾ ವಿಚಾರಸರಣಿಯನ್ನು ಅದರ ಕಡು ವಿರೋಧಿಗಳ ಪ್ರತಿಪಾದನೆಯನ್ನು ಮಾತ್ರ ಅವಲಂಬಿಸಿ ಅರಿಯಬೇಕೆಂದು ಒತ್ತಾಯ ಬಂದರೆ ಆ ಮಾರ್ಗವು ಅತ್ಯಂತ ಕ್ಷೇಮಕಾರಿಯಾದುದೇನೂ ಅಲ್ಲ. ಪೂರ್ವಗ್ರಹಗಳಿಂದಲೂ ವೈಯಕ್ತಿಕ ಮನೋವಿಕಲ್ಪಗಳಿಂದಲೂ ವಿಮುಕ್ತರಾದ ವಿರೋಧಿಗಳು ವಿರಳ. ವಿರೋಧಿಗಳ ಅಭಿಪ್ರಾಯಗಳೇ ಪೂರ್ವಪಕ್ಷಗಳು. ಇವುಗಳ ನಿರೂಪಣೆಯು ಅಸಮರ್ಪಕ ಹಾಗೂ ಸಹಾನುಭೂತಿ ಕಾಣದ ರೀತಿಯಿಂದ ಬರುವುವೇ ಸಾಧಾರಣವಾಗಿರುವುದರಿಂದ, ಇವುಗಳ ತತ್ತ್ವಶಾಸ್ತ್ರೀಯ ಬೆಲೆಯನ್ನು ಸರಿಯಾಗಿ ಕಟ್ಟಿ ಸಮಂಜಸವಾಗಿ ನಿರ್ಣಯಿಸುವುದೇನೂ ಸುಲಭವಲ್ಲ. ಸರ್ವಾಸ್ತಿವಾದಿ ಬೌದ್ಧರು, ಪಾಶುಪತರು ಮತ್ತು ಪಾಂಚರಾತ್ರರ ಸಿದ್ಧಾಂತಗಳು ಶಂಕರಾಚಾರ್ಯರ ಕೈಯಲ್ಲಿ ಹೇಗೆ ಮುಕ್ಕಾಗಿವೆಯೆಂಬುದನ್ನು ಅನುಲಕ್ಷಿಸಿದಾಗ, ಒಂದು ಸಿದ್ಧಾಂತವನ್ನು ಅದರ ವಿರೋಧಿಗಳ ಪ್ರತಿಪಾದನೆಯ ಮೇಲಿಂದಲೇ ಅಧ್ಯಯನ ಮಾಡಬೇಕಾದ ಪ್ರಸಂಗವನ್ನು ಈ ತೊಂದರೆಗಳ ಯೋಗ್ಯ ಪರಿಜ್ಞಾನದಿಂದಲೇ ಪರಿಗ್ರಹಿಸಬೇಕೆಂಬುದು ವಿಶದವಾಗುತ್ತದೆ.

—ದಕ್ಷಿಣಾರಂಜನ ಶಾಸ್ತ್ರೀ*

---

*ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂ. 3 (1975), ಪು. 7

ಡಾ. ಎಸ್. ಗುರುರಾಜಾಚಾರ್

ಕರ್ಣಾಟಕದ ಕೆಲವು ಖ್ಯಾತ ವರ್ತಕರು: ಕ್ರಿ.ಶ. 1300ರ ವರೆಗೆ

ಒಂದು ದೇಶದ ವಾಣಿಜ್ಯ ಅಲ್ಲಿಯ ಆರ್ಥಿಕಾಭಿವೃದ್ಧಿಯ ಸೂಚಿಯಿದ್ದಂತೆ. ಅಲ್ಲಿಯ ವರ್ತಕರು ದೇಶದ ಸಂಪತ್ತಿನ ಬೆನ್ನೆಲುಬಿನಂತೆ. ಕರ್ಣಾಟಕದಲ್ಲಿಯ ಆರ್ಥಿಕ ಜೀವನದೇಳಿಗೆಗೆ ಬಹುಪಾಲು ಕಾರಣ ಭೂತರಾದ ವರ್ತಕರು ಅಸಂಖ್ಯಾತರು. ಅವರು ಕನ್ನಡಮ್ಮನ ಮಕ್ಕಳೂ ಹೌದು; ಭಾರತದ ಅನ್ಯ ಪ್ರಾಂತ್ಯಗಳಿಂದ ಬಂದು ಕನ್ನಡದ ನೆಲದಲ್ಲೇ ನೆಲಸಿದವರೂ ಹೌದು. ಅಂತಹವರಲ್ಲಿ ಕೆಲವರನ್ನಾದರೂ ನಮ್ಮ ಶಾಸನ-ಸಾಹಿತ್ಯಗಳು ಸ್ಮರಿಸಿರುವುದು ಸಂತಸದ ವಿಷಯ.

ಇಲ್ಲಿಯ ವರ್ತಕರನೇಕರು ಅತ್ಯಂತ ಪ್ರಭಾವಶಾಲಿಗಳಾಗಿದ್ದರೆಂಬುದು ಹಲವಾರು ಶಾಸನಗಳಿಂದ ಸುಸ್ಪಷ್ಟ. ರಾಜ್ಯದ ಸಂಪೂರ್ಣ ವಾಣಿಜ್ಯ ಇವರ ಅಧೀನದಲ್ಲಿದ್ದುದರಿಂದ, ಸಹಜವಾಗಿಯೇ ಇವರು ಅತಿ ಶ್ರೀಮಂತರಾಗಿದ್ದವರು. ಶಾಸನಗಳು ಇವರನ್ನು ಧನದನಿಗೆ (=ಕುಬೇರ) ಹೋಲಿಸಿರುವುದೂ ಉಂಟು. ಉದಾ: ಬಿಜಾಪುರ ಜಿಲ್ಲೆಯ ತೇರಿದಾಳ ಪಟ್ಟಣದ ಪೇಟೆಯ ('ವಿಪಣಿಮಾರ್ಗ'ದ) ವರ್ಣನೆಯನ್ನೂ,[1] ಚಾಳುಕ್ಯ ಚಕ್ರವರ್ತಿ 3ನೆಯ ಸೋಮೇಶ್ವರನ 'ವಿಕ್ರಮಾಂಕ್ಯಾಭ್ಯುದಯಂ'[2] ಚಂಪೂ-ಕಾವ್ಯದಲ್ಲಿನ, ಕಲ್ಯಾಣ ನಗರದ 'ವಿಪಣಿಸದನ' ವರ್ಣನೆಯನ್ನೂ ನೋಡಬಹುದು.

ಇವರಲ್ಲನೇತರು 'ರಾಜಶ್ರೇಷ್ಠಿ'ಗಳೆನಿಸಿದ್ದವರು. ನಯಸೇನನ 'ಧರ್ಮಾಮೃತದಲ್ಲಿ[3] ಇಂತಹ ಹಲವು 'ರಾಜಶ್ರೇಷ್ಠಿ'ಗಳು ಕಾಣಸಿಗುತ್ತಾರೆ. ಹೊಯ್ಸಳ ವಿಷ್ಣುವರ್ಧನನ ಆಸ್ಥಾನದಲ್ಲಿ 'ರಾಜ ಶ್ರೇಷ್ಠ' ಪಟ್ಟವನ್ನಲಂಕರಿಸಿದ್ದ ಪೊಯ್ಸಳ-ಸೆಟ್ಟಿ ಮತ್ತು ನೇಮಿ-ಸೆಟ್ಟಿಯರ ಪ್ರಸ್ತಾಪ ಶ್ರವಣಬೆಳಗೊಳದಲ್ಲಿದೆ.[4]

ಕೆಲವು ಗಣ್ಯ ವರ್ತಕರು ರಾಜರ ಹಾಗೂ ಅವರ ಉನ್ನತ ಅಧಿಕಾರಿಗಳ ಮೇಲೆ ವರ್ಚಸ್ಸು ಬೀರಬಲ್ಲವರಾಗಿದ್ದು, ಅವರೊಡನೆ ವ್ಯಾಪಾರಾದಿ ವಹಿವಾಟು ನಡೆಸುತ್ತಿದ್ದವರು. ಸೋವಿ-ಸೆಟ್ಟಿಯು, ಕಲ್ಯಾಣಿ ಚಾಳುಕ್ಯ ದೊರೆ ಎರಡನೆಯ ಜಗದೇಕಮಲ್ಲ ಹಾಗೂ ಅವನ ಅಧಿಕಾರಿ ಬ್ರಹ್ಮದೇವ ದಂಡಾಧೀಶರೊಡನೆ ಅಂತಹ ವಹಿವಾಟು ನಡೆಸುತ್ತಿದ್ದವನೆಂಬುದು ಶಾಸನಗಳ ಹೇಳಿಕೆ.[5]

ಶಾಸನಗಳಲ್ಲಿ ಬರುವ ಕೆಲವು ವರ್ತಕರ ವರ್ಣನೆಗಳು ಗಮನಾರ್ಹವಾಗಿವೆ. ಕೆಲವರು ರಾಜಪುರುಷರ ಸ್ನೇಹವನ್ನು ಸಂಪಾದಿಸಿದ್ದವರು;[6] ಮತ್ತೆ ಕೆಲವರು ತಮ್ಮ ರಾಜರ 'ರಾಜ್ಯ

---

[1] *KI*, V, ನಂ. 21 (ಕ್ರಿ. ಶ. 1125)
[2] ಪು. 11–12
[3] I.,90; 2.159 ಇತ್ಯಾದಿ
[4] *EC*, II, 137 (ಕ್ರಿ.ಶ. 1177)
[5] *SII*, XV, Nos. 24 (ಕ್ರಿ.ಶ. 1142); 35 (ಕ್ರಿ.ಶ. 1147)
[6] *EC*, VII, Sh. 99 (ಕ್ರಿ.ಶ. 1127)

ಭ್ಯುದಯ' ಕ್ಕೆ ಕಾರಣರೆನಿಸಿದ್ದವರು.[7] ಇನ್ನು ಕೆಲವರು ತಮ್ಮ 'ಪುರ-ಮೂಲಸ್ತಂಭರಾಗಿದ್ದವರು.[8] ಶಾಸನಗಳಲ್ಲಿನ ಇಂತಹ ವರ್ಣನೆಗಳನ್ನು ಗಮನಿಸಿದಾಗ ಮಹಾಭಾರತದ ಈ ಉಕ್ತಿ ನೆನಪಿಗೆ ಬರುತ್ತದೆ: "ವರ್ತಕರ ವ್ಯಾಪಾರದ ಅಭಿವೃದ್ಧಿಯಲ್ಲಿ ರಾಜ ಸದಾ ಆಸಕ್ತನಾಗಿರಬೇಕು. ಏಕೆಂದರೆ ಅವನಿಂದ ರಾಜ್ಯ ಬಲಿಷ್ಠವಾಗುತ್ತದೆ, ವ್ಯವಸಾಯ ಊರ್ಜಿತವಾಗುತ್ತದೆ, ಸಂಪತ್ತು ಹೆಚ್ಚುತ್ತದೆ ....ರಾಜ್ಯದಲ್ಲಿ ವರ್ತಕರಿಗಿಂತಲೂ ಹೆಚ್ಚಿನ ಐಶ್ವರ್ಯ ಬೇರಾವುದೂ ಇಲ್ಲ".[9] ಹಲವು ವರ್ತಕರ ಧರ್ಮಪರಾಯಣತೆ, ಔದಾರ್ಯ ಮುಂತಾದ ಗುಣಗಳನ್ನು ಶಾಸನಗಳು ಮುಕ್ತಕಂಠದಿಂದ ಹೊಗಳಿವೆ. ಅಂತಹ ಒಂದೆರಡು ಹೆಸರುಗಳನ್ನು ಇಲ್ಲಿ ಪ್ರಸ್ತಾಪಿಸಬಹುದು.

ಪಟ್ಟಣಸ್ವಾಮಿ ನೊಕ್ಕಯ್ಯನನ್ನು 'ಸವಿರಮುಖಮಂಡನ', 'ಸಿರಿಗಾವಾಸ,' 'ಧರ್ಮದ ತವರ್ಮನೆ' ಮುಂತಾಗಿ ವರ್ಣಿಸುತ್ತದೆ ಒಂದು ಶಾಸನ.[10] ಈತ ಜಿನಾಲಯವನ್ನು ನಿರ್ಮಿಸಿ, ಅನೇಕ ಪಂಚಲೋಹದ ಪ್ರತಿಮೆಗಳನ್ನು ಮಾಡಿಸಿ, ಕೆರೆಗಳನ್ನು ಕಟ್ಟಿಸಿ ಕೀರ್ತಿಶೇಷನೆನಿಸಿದ್ದಾನೆ.

'ಶ್ರೀಮನ್ಮಹಾವಡ್ಡ ವ್ಯವಹಾರಿ'ಯೆನಿಸಿದ್ದ ಕುಲ್ಲಹಣರಾಹುತನಂತೂ 'ಧರ್ಮಾವತಾರ' 'ಸರ್ವಜೀವದಯಾಪರ'. ಈತನೂ, ಈತನ 'ಅರ್ಧಾಂಗ ಶರೀರಿ'ಯಾಗಿದ್ದ ಸಹಜಾದೇವಿಯೂ ಸೇರಿ ದೊಡ್ಡಗದ್ದವಳ್ಳಿಯಲ್ಲಿ (ಹಾಸನ ಜಿಲ್ಲೆ) ಮಹಾಲಕ್ಷ್ಮೀ ದೇವಾಲಯವನ್ನು ನಿರ್ಮಿಸಲಾಗಿ, ಆ ಊರು 'ಅಭಿನವ ಕೊಲ್ಲಾಪುರ'ವಾಯಿತಂತೆ :

10 ಸ್ವಸ್ತಿಶ್ರೀ ಭುವನ ಭವನವೆಳಾ ವಿನೀವಾ
11 ರಿ ಯಾತ್ರ ತನ್ನ ಧ್ಯಾಶೋದ್ಭವ ವಣಿತಕುಳತಿಳ
12 ಕ ಧರ್ಮ್ಮಾವತಾರ ಸರ್ವ್ವ ಜೀವದಯಾಪರರಪ್ಪ ॥ ಸ್ವಸ್ತಿ ಸ
13 ಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾ ವಡ್ಡವ್ಯವಹಾ
14 ರಿ ಕುಲ್ಲಹಣರಾಹುತರುಂ ಅರ್ಧಾಂಗ ಶರೀರಿಯರಪ್ಪ ಸ
15 ಹಜಾದೇವಿಯರುಂ ಶ್ರೀಮತು ಅಭಿನವ ಕೊಲ್ಲಾಪು
16 ರವಂಗೆಯ್ದು ಶ್ರೀಮನ್ಮಹಾಲಕ್ಷ್ಮೀದೇವಿಯ ಪ್ರಾ
17 ಸಾದವಂ ಗೆಯ್ದು..........................[11]

ಈ ಮಹಾಲಕ್ಷ್ಮೀದೇವಾಲಯ, ಹೊಯ್ಸಳ ಶೈಲಿಯ ವಾಸ್ತುಶಿಲ್ಪದಲ್ಲಿ ಒಂದು ವಿಶಿಷ್ಟವಾದ ಸ್ಥಾನ ಪಡೆದಿದೆ.

ಆಂತರಿಕ ಹಾಗೂ ವಿದೇಶೀ ವ್ಯಾಪಾರಗಳ ಮೂಲಕ ಕರ್ಣಾಟಕದ ಐಶ್ವರ್ಯವನ್ನು ಹೆಚ್ಚಿಸಿ, ತಾವೂ 'ಲಕ್ಷ್ಮೀಪುತ್ರ'ರೆನಿಸಿದವರೂ ಈ ವರ್ತಕವರೇಣ್ಯರೇ. ಇಂತಹ ಅನೇಕರಲ್ಲಿ ಚಟ್ಟಿಸೆಟ್ಟಿ ಮತ್ತು ಆತನ ಅನುಜ ದಾಸಿಸೆಟ್ಟಿ ಎರಡು ಹೆಸರು ಮಾತ್ರ. ಅರಸೀಕೆರೆಯ ಶಾಸನವೊಂದು[12] ಈ ವರ್ತಕ ಸಹೋದರರ ವೈಶಿಷ್ಟ್ಯವನ್ನು ಕೊಟ್ಟು, ಅವರ ವಾಣಿಜ್ಯ ವಹಿವಾಟಿನ ವೈಖರಿಯನ್ನು ಬಣ್ಣಿಸುತ್ತದೆ. "ಸೆಟ್ಟಿಯರನ್ವಯವೆಂತ ತೆಂದಡೆ" : ಮಾರಿಸೆಟ್ಟಿ ಮತ್ತು ಪೋಚಲೆ ದಂಪತಿಗಳಿಗೆ

---

[7] *Ibid.*, VII. Nr. 57 (ಕ್ರಿ.ಶ. ಸು 1077)

[8] *SII*, IX. i. 297 (ಕ್ರಿ.ಶ. 1077)

[9] ಎಂ. ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. 381 (ಅಡಿ ಟಿಪ್ಪಣಿ 116)

[10] *EC*, VIII. Nr. 57 (ಕ್ರಿ.ಶ. 1062)

[11] *E C* V. Hn 149 (ಕ್ರಿ.ಶ. 1113)

[12] *Ibid.*, Ak. 22 (ಕ್ರಿ.ಶ. 1188)

"ಕಮ್ಮಟದ ಚಟ್ಟಿಸೆಟ್ಟಿ ಗುಣಿದಾಸಿ ಸೆಟ್ಟಿಗಳ್ ಜನಿಸಿದರ್–"ಕಮ್ಮಟದ ಚಟ್ಟಿಸೆಟ್ಟಿಯನ್ನು ಕುರಿತು ವರ್ಣಿಸುತ್ತಾ, ''ತಾಂ ಭೂಮಿಗೆ ಚಟ್ಟಿಸೆಟ್ಟಿ ಧನದಂ ಧನವೇಳ್ಗೆಯೊಳೆನ್ತು ನೋಳ್ಪಡಂ'' ಎನ್ನುತ್ತದೆ ಶಾಸನ.

ಇನ್ನು ಆತನ ವಾಣಿಜ್ಯೋದ್ಯಮ :

37 ''ಹರಿಯಾ ಹಯಕ್ಕೆ ಕೋಡೆನಿಪ ಹೇ
38 ಷಯಚಯಂಗಳ ಸಿಂಧ್ರ ದಂತಿಯೊಳ್ಪೊರೆಯೆನಿಸಿಪ್ಪ
ದನ್ತಿಗಳನಭ್ರದೊಳಾದ ಸುಪಾಣಿ ಮುತ್ತಿನೊಳ್ ಸರಿಯೆನಿಸಿಪ್ಪ ಮುತ್ತುಗಳನೆ
39 ಯ್ದೆ ಬಹಿತ್ರದೆ ತಂದು ರಾಜರುಮಂಧರಣಿಪರ್ಗೊಲ್ದು
ಕಮ್ಮಟದ ಚಟ್ಟಿಪಸೆಟ್ಟಿ ಸಂತತಂ ॥''

ಈತ ಹಡಗುಗಳಲ್ಲಿ (= ಬಹಿತ್ರ) ಉತ್ತಮ ಜಾತಿಯ ಕುದುರೆಗಳು, ಆನೆಗಳು ಮತ್ತು ಮುತ್ತುಗಳನ್ನು ಆಮದು ಮಾಡಿಕೊಂಡು, ರಾಜರುಗಳಿಗೆ ಮಾರಾಟ ಮಾಡುತ್ತಿದ್ದನಂತೆ. ಈತನ ತಮ್ಮ ದಾಸಿಸೆಟ್ಟಿಯೂ ಅಷ್ಟೇ ಪ್ರಸಿದ್ಧ. ಈ ''ಅನುಪಮ ವಣಿಜಂ ದಾಸೆಯಂ ದೋಷದೂರಂ,'' ತನ್ನ ವಾಣಿಜ್ಯ ಜಾಲವನ್ನು ಇಡೀ ದೇಶದ ಉದ್ದಗಲಕ್ಕೂ ಹರಡಿದ್ದ. ದೇಶದ ಉತ್ತರದಿಂದ ತರಿಸಿದ 'ಭಾಂಡ'ಗಳನ್ನು ದಕ್ಷಿಣಕ್ಕೂ, ಪೂರ್ವದಿಂದ ಬಂದವುಗಳನ್ನು ಪಶ್ಚಿಮಕ್ಕೂ— ಹೀಗೆ ನಾನಾ ದಿಕ್ಕುಗಳಿಗೆ 'ಭಾಂಡ'ಗಳನ್ನು 'ಅಟ್ಟು'ತ್ತಿದ್ದ ಭಾರಿ ವರ್ತಕ ಈ ದಾಸಿಸೆಟ್ಟಿ.

ಇನ್ನು. ಭಾರತದ ಬೇರೆ ಬೇರೆ ಪ್ರಾಂತ್ಯಗಳಿಂದ ಬಂದು ಇಲ್ಲಿ ನೆಲಸಿದ್ದ ವರ್ತಕರನೇಕರು ಅಷ್ಟೇ ಪ್ರಖ್ಯಾತರೆನಿಸಿದ್ದರು. ಇವರಲ್ಲಿ, ಕೇರಳಪುತ್ರರು ಹೆಚ್ಚು ಗಮನವನ್ನು ಸೆಳೆಯುವಂತಹವರು ಒಂದೆರಡು ನಿದರ್ಶನಗಳನ್ನು ನೋಡಬಹುದು.

ಅರಸೀಕೆರೆಯ ಎರಡು ಶಾಸನಗಳಲ್ಲಿ[13] ದಾಮೋದರ ಸೆಟ್ಟಿಯ ಪ್ರಸ್ತಾಪವಿದೆ. ಈತ ಗೋವಿಂದ ಮತ್ತು ಸೆಜೆರು ನಂಗೆಯರ ಮಗ. ಹೊಯ್ಸಳ ದೊರೆ ಇಮ್ಮಡಿ ನರಸಿಂಹನ ಆಪ್ತ ರಾಜಶ್ರೇಷ್ಠಿ. ವಸ್ತುಗಳ ಹಾಗೂ ಪ್ರಾಣಿಗಳ (ಆನೆ, ಕುದುರೆ ಇತ್ಯಾದಿಗಳ) ಪರೀಕ್ಷೆಯಲ್ಲಿ ತಜ್ಞ. ಹಲವಾರು ದೇವಾಲಯಗಳನ್ನು ಕಟ್ಟಿಸಿ, ದೇವರ ವಿಗ್ರಹಗಳನ್ನು ಸ್ಥಾಪಿಸಿ, ಭೂಮಿ ದಾನಗಳನ್ನು ಮಾಡಿ, ಕೀರ್ತಿಶೇಷನೆನಿಸಿದ್ದಾನೆ.

ಕುಂಜಿಸೆಟ್ಟಿಯ ಪ್ರಸ್ತಾಪ ಅರಸೀಕೆರೆಯ ಮತ್ತೊಂದು ಶಾಸನದಲ್ಲಿದೆ.[14] ಈತ ಕೇವಲ ತಕ್ಕಡಿ–ಬಟ್ಟುಗಳನ್ನು ಹಿಡಿಯುವ ವರ್ತಕಸಾಮಾನ್ಯನಲ್ಲ ; ರಣರಂಗದಲ್ಲಿ ಕತ್ತಿಯನ್ನು ಹಿಡಿದು ಕಾದಾಡುವ ಯೋಧನೂ ಹೌದು. ಹೊಯ್ಸಳ ದೊರೆ ಇಮ್ಮಡಿ ಬಲ್ಲಾಳ ಉಚ್ಚಂಗಿಗೆ ಮುತ್ತಿಗೆ ಹಾಕಿದಾಗ, ಕುಂಜಸೆಟ್ಟಿ ದೊರೆಯ ಪರವಾಗಿ ಕಾದಾಡಿ, 'ಸುಭಟ ಪಟ್ಟ' ವನ್ನು ಗಿಟ್ಟಿಸಿದ 'ವೀರಬಣಂಜು'. ಈತನ 'ಅಳಿಯ'[15] ಕೊಂಡನಂಬಿ, ಇವನ ತಮ್ಮಂದಿರು ದಾಮೋದರ ಮತ್ತು ಕುಂಜನಂಬಿ.

---

[13] *Ibid.*, Ak. 82 (ಕ್ರಿ.ಶ. 1234) : XV, Ak. 217 (ಕ್ರಿ.ಶ, 1232)

[14] *Ibid.*, V, Ak, 108 (ಕ್ರಿ.ಶ. 1255)

[15] ಶಾಸನದಲ್ಲಿ ಕಾಣಿಸುವ ಈ 'ಅಳಿಯ' ಎಂಬ ಪದವನ್ನು ಮಗಳ ಗಂಡ (son-in-law ಎಂಬ ಅರ್ಥದಲ್ಲಿ ರೈಸ್ ಮುಂತಾದವರು ತೆಗೆದುಕೊಂಡಿರುವರು. ಆದರೆ, 'ಅಳಿಯ ಸಂತಾನ' ರೂಢಿಯಲ್ಲಿರುವ ಕೇರಳ ಪುತ್ರರಲ್ಲಿ, 'ಅಳಿಯ'ನನ್ನು 'ಸೋದರ (ಸಹೋದರಿಯ ಮಗ) ಅಳಿಯ' ಎಂದು ಅರ್ಥ ಮಾಡುವುದು ಹೆಚ್ಚು ಸೂಕ್ತವೆಂದು ನನ್ನ ಮಾನ್ಯ ಮಿತ್ರರಾದ ಡಾ. ಕೆ.ವಿ. ರಮೇಶ ಅವರು ಸಲಹೆ ಮಾಡುತ್ತಾರೆ.

ಕುಂಜನಂಬಿ ಎಲ್ಲ ವಿಧ ರತ್ನಗಳನ್ನು ಪರೀಕ್ಷಿಸುವಲ್ಲಿ ತಜ್ಞ. ಇಷ್ಟು ಮಾತ್ರವಲ್ಲ, ಒಬ್ಬ ಸುಪ್ರಸಿದ್ಧ ರಾಯಭಾರ ಕುಶಲಿ (diplomat). ದಕ್ಷಿಣದಲ್ಲಿನ ಹೊಯ್ಸಳ ಇಮ್ಮಡಿ ಬಲ್ಲಾಳ, ಉತ್ತರದಲ್ಲಿನ 'ಬಲ್ಲಹ' (= ವಲ್ಲಭ) ಅಂದರೆ ಕಳಚುರಿ ಸಂಕಮ—ಇವರಿಬ್ಬರ ನಡುವೆ ಸಂಧಿಯನ್ನು ಮಾಡಿಸಿದ 'ಸಂಧಿವಿಗ್ರಹ' ಚತುರನಂತೆ ಈತ. ಮಾಳವ, ಕಳಿಂಗ, ಚೋಳ ಮತ್ತು ಪಾಂಡ್ಯರಾಜರುಗಳೆಲ್ಲರ ಆವಶ್ಯಕತೆಗಳನ್ನು ಪೂರೈಸಬಲ್ಲ ಸಮರ್ಥ ವರ್ತಕ. ಇಡೀ ಹೊಯ್ಸಳ ರಾಜ್ಯದಲ್ಲಿ ಇವನಿಗೆ ಸರಿಸಾಟಿಯಾದ ಮತ್ತೊಬ್ಬ 'ಸೆಟ್ಟಿ'ಯಿರಲಿಲ್ಲವೆಂಬುದು ಶಾಸನದ ಹೇಳಿಕೆ.

ಕುಂಜನಂಬಿಯು 'ಅಳಿಯ' ಭಂಡಿನಂಬಿ. ಭಂಡಿ (= ಗಾಡಿ) ಭರ್ತಿ ತುಂಬಿದ ಹಣವನ್ನು ದಾನ ಮಾಡಿದ್ದರಿಂದ ಇವನಿಗೆ ಈ ಹೆಸರು.

ಬಳ್ಳಾರಿ ಜಿಲ್ಲೆಯ ಶಾಸನಗಳೂ ಕೆಲವು 'ಮಲೆಯಾಳ'[16] ವರ್ತಕರ ಬಗ್ಗೆ ಪ್ರಸ್ತಾಪ ಮಾಡಿವೆ. 'ಮಲೆಯಾಳ-ವಡ್ಡ-ವ್ಯವಹಾರಿ' ಕೊಮರ ಮೂರ್ಪ, ಬಾಗಲಿಯಲ್ಲಿನ ದೇವಾಲಯಕ್ಕೆ, ನಂದಾದೀಪಕ್ಕಾಗಿ 5 ಗದ್ಯಾಣಗಳನ್ನು ಕ್ರಿ.ಶ. 1108ರಲ್ಲಿ ದಾನಮಾಡಿದ್ದಾನೆ. 'ಮಹಾಮಲೆಯಾಳ-ವಡ್ಡ-ವ್ಯವಹಾರಿ' ಪೊನ್ನಮ್ಮರ್ಪಿಸೆಟ್ಟಿಯೂ ಅದೇ ಸ್ಥಳದ ದೇವಾಲಯವೊಂದಕ್ಕೆ ಕ್ರಿ.ಶ. 1113ರಲ್ಲಿ 14 ಗದ್ಯಾಣಗಳನ್ನು ದಾನಮಾಡಿರುವನು. ಹಾಗೆಯೇ, 'ಶ್ರೀಮಾನ್ ನಾನಾದೇಶಿ-ಮಲೆಯಾಳ-ವಡ್ಡ-ವ್ಯವಹಾರಿ' ನಂಬಿಗಣ್ಣ ಸೆಟ್ಟಿ ದುಗ್ಗತಿಯೆಂಬಲ್ಲಿ ದತ್ತಿಯೊಂದನ್ನು ಬಿಟ್ಟಿದ್ದಾನೆ (ಕ್ರಿ.ಶ. 1126ರಲ್ಲಿ).

ಈಗ ತಿಗುಳ (ತಮಿಳು) ದೇಶದ ವರ್ತಕರು ಕೇರಳ ಪುತ್ರರಂತೆ, ತಮಿಳು ನಾಡಿನ ಮಕ್ಕಳೂ ಸಹ ಇಲ್ಲಿನ ವಾಣಿಜ್ಯೋದ್ಯಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದು ಶಾಸನಗಳಿಂದ ಸ್ಪಷ್ಟವಾಗಿದೆ.

ಚೋಳದೇಶದಲ್ಲಿದ್ದ ರಾಜರಾಜ ವಳನಾಡಿನ 'ಬ್ರಹ್ಮದೇಯ' ಗ್ರಾಮವಾದ ಅಕ್ಕೂರಿನ ಪರಿಯಾಳುವ-ಸೆಟ್ಟಿ, ಹೆಂಜೇರುವಿನಲ್ಲಿ ದೇವಾಲಯವೊಂದನ್ನು ಕಟ್ಟಿಸಿ ಅದಕ್ಕೆ ಭೂಮಿಯನ್ನು ದತ್ತಿಯಾಗಿ ಬಿಟ್ಟಿರುವನು.[17]

ಧಾರವಾಡ ಜಿಲ್ಲೆಯ ಹಾನಗಲ್ಲಿನ, 12ನೆಯ ಶತಮಾನದ ಲಿಪಿಯಲ್ಲಿ ಬರೆದಿರುವ ಎರಡೇ ಸಾಲುಳ್ಳ ಶಾಸನ, ಅಲ್ಲಿಯ 'ತಿಗುಳ ಬೆವಹಾರಿಗಳ ಕೇರಿ'ಯನ್ನು ಪ್ರಸ್ತಾಪಿಸಿದೆ :

1 ಶ್ರೀಸನ್ನನ ಪಿಳ್ಳೆಯ ರಾಮೇಸ್ವರ ದೇವರ ತಿಗುಳ ಬೆ-
2 ವ ಹಾರಿಗಳ ಕೇರಿಯ ಸೀಮೆ॥[18]

ಬೀಮ ಬಳೆಗಾರಸೆಟ್ಟಿ 'ತೆಲುಂಗ ವಂಶ'ದವನು (ಮೂಲತಃ ತೆಲುಗು ದೇಶದವನು). ಈತ ಶಿವನ ಭಕ್ತ. ಜಗಳಿ ಅಗ್ರಹಾರದ 'ಪ್ರಭು' ಮತ್ತು 'ಪ್ರಜೆ'ಗಳ ಸಮ್ಮುಖದಲ್ಲಿ ಈತ ಐನೂರು ವೀರಬಣಂಜುಗಳಿಗೆ ಕೆಲವು ಭೂಮಿಗಳನ್ನು ದಾನಮಾಡಿದಂತೆ, ಸೊರಬದ (ಶಿವಮೊಗ್ಗ ಜಿಲ್ಲೆಯ) ಶಾಸನವೊಂದು ತಿಳಿಸುತ್ತದೆ.

[16] *SII*, IX i, Nos. 177; 189: and 215 respectively
[17] *Ibid*, No. 268 (ಕ್ರಿ.ಶ. 1162)
[18] *KI*, V, No. 105
[19] *MAR* (1938), No. 103 (ಕ್ರಿ.ಶ. 1077)

ಕಡೆಯದಾಗಿ, ಸೌರಾಷ್ಟ್ರದಿಂದ ಬಂದು ಕರ್ನಾಟಕದಲ್ಲಿ ನೆಲಸಿ, ಪ್ರಸಿದ್ಧ ವಚನಕಾರರ ಸಾಲಿನಲ್ಲಿರುವ ಶಿವಶರಣ ಆದಯ್ಯನ ಬಗ್ಗೆ ಒಂದೆರಡು ಮಾತುಗಳು. ಈತ ಸೌರಾಷ್ಟ್ರದ ಶ್ರೀಮಂತ ವರ್ತಕ ಕುಟುಂಬದಲ್ಲಿ, ಘೋರದತ್ತ ಮತ್ತು ಪುಣ್ಯವತಿಯರ ಮಗನಾಗಿ ಜನಿಸಿದ. ತಮ್ಮ ವಂಶದ ಕಸಬಾದ ವಾಣಿಜ್ಯದಲ್ಲಿ ಮಗನು ನಿರತನಾಗಬೇಕೆಂಬುದು ತಂದೆ ತಾಯಿಗಳ ಅಭಿಲಾಷೆ. ಅಂತೆಯೆ, ಆದಯ್ಯ ಪುಲಿಗೆರೆಗೆ (ಇಂದಿನ ಲಕ್ಷ್ಮೇಶ್ವರ, ಧಾರವಾಡ ಜಿಲ್ಲೆ) ಬಂದು ನೆಲೆಸಿ, ಬಹುಶಃ ಚಿನ್ನ ಬೆಳ್ಳಿಯ ವ್ಯಾಪಾರ ಮಾಡುತ್ತಿದ್ದಂತೆ ಕಾಣುತ್ತದೆ.[20]

---

[20] ಆದಯ್ಯನ ವಚನಗಳು, ಮುನ್ನುಡಿ, ಪು. iii-iv; ವಚನಗಳು, 294-96, ಪು. 167-68

ಹೊಯ್ಸಳ ಅರಸರ ಉದಾರ ನೀತಿಯಿಂದಾಗಿ ಎಲ್ಲ ಧರ್ಮಗಳು ರಾಜಾಶ್ರಯವನ್ನು ಪಡೆದುವು. ಆಳರಸರ, ಅರಸಿಯರ ಮತ್ತು ಅಧಿಕಾರಿಗಳ ಪ್ರೋತ್ಸಾಹದಿಂದ ಜೈನ, ಶೈವ ಮತಗಳು ಪುಷ್ಟವಾಗಿ ಬೆಳೆದುವು. ಧಾರ್ಮಿಕ ಕ್ಷೇತ್ರದಲ್ಲಿ ಈ ಕಾಲದ ಒಂದು ವೈಶಿಷ್ಟ್ಯವೆಂದರೆ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಮತದ ಉಗಮ. ಚೋಳ ರಾಜ್ಯದಲ್ಲಿಯ ಪ್ರತಿಕೂಲ ಪರಿಸ್ಥಿತಿಯಿಂದಾಗಿ ಹೊಯ್ಸಳ ರಾಜ್ಯಕ್ಕೆ ಬಂದ ರಾಮಾನುಜಾಚಾರ್ಯರಿಗೆ ಇಲ್ಲಿಯ ಅರಸರಿಂದ ಪ್ರೋತ್ಸಾಹ ದೊರೆಯಿತು. ವಿಷ್ಣುಭಕ್ತಿಯನ್ನೂ ವಿಷ್ಣುವಿಗೆ ಸಂಪೂರ್ಣ ಶರಣಾಗತಿಯನ್ನೂ ಬೋಧಿಸಿದ ಈ ಮತವು ಹೊಯ್ಸಳ ರಾಜ್ಯದಲ್ಲಿ ವಿಶೇಷವಾಗಿ ಪ್ರಚಾರವನ್ನು ಪಡೆಯಿತು. *

ಡಾ. ಪಾಂಡುರಂಗರಾವ ದೇಸಾಯಿ
ಡಾ. ಶ್ರೀನಿವಾಸ ರಿತ್ತಿ
ಡಾ. ಬಾ. ರಾ. ಗೋಪಾಲ

---

† ಪ್ರಾಚೀನ ಭಾರತದ ಚರಿತ್ರೆ, ಕರ್ನಾಟಕ ವಿಶ್ವವಿದ್ಯಾಲಯ (ಧಾರವಾಡ, 1973).ಪು.449

ಎಚ್. ಎಂ. ನಾಗರಾಜು

ತೊಣ್ಣೂರು

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿರುವ ತೊಣ್ಣೂರು, ಕರ್ನಾಟಕದ ಇತಿಹಾಸ ಪ್ರಸಿದ್ಧ ಸ್ಥಳಗಳಲ್ಲೊಂದು. ಇದು ಬಹು ದೀರ್ಘಕಾಲ ರಾಜಕೀಯ, ಧಾರ್ಮಿಕ ಚಟುವಟಿಕೆ ಮತ್ತು ಕಲಾರಾಧನೆಯ ಕ್ಷೇತ್ರವಾಗಿತ್ತೆಂದು ಐತಿಹಾಸಿಕ ಆಧಾರಗಳಿಂದ ತಿಳಿದುಬರುತ್ತದೆ. ಮುಖ್ಯವಾಗಿ ಕರ್ನಾಟಕದ ಮಹಾ ರಾಜ ವಂಶಗಳಲ್ಲೊಂದಾದ ಹೊಯ್ಸಳರ ಕಾಲದಲ್ಲಿ ಇದು ಪ್ರಾಂತೀಯ ರಾಜಧಾನಿಯ ಸ್ಥಾನವನ್ನು ಪಡೆದಿತ್ತು. ಶ್ರೀರಾಮಾನುಜರಂತಹ ದಾರ್ಶನಿಕರು ಈ ಸ್ಥಳದಲ್ಲಿ ತಂಗಿದ್ದರೆಂದು ಹೇಳಲಾಗಿದೆ. ಹೀಗೆ ಧಾರ್ಮಿಕ ದೃಷ್ಟಿಯಿಂದಲೂ ಪವಿತ್ರವಾಗಿರುವ ಸ್ಥಳ ಇದು. ವಿವಿಧ ಕಾಲಗಳಲ್ಲಿ ಕರ್ನಾಟಕದ ರಾಜರುಗಳು ಕಟ್ಟಿಸಿದ ದೇವಾಲಯಗಳು ಇಂದಿಗೂ ಕಲಾವೈಭವದಿಂದ ಮೆರೆಯುತ್ತಿವೆ. ಇಲ್ಲಿಯ ಅವಶೇಷಗಳು ಮತ್ತು ಶಾಸನಗಳಿಂದ ಇದು ಒಂದು ಕಾಲಕ್ಕೆ ಬಾಳಿದ ಊರಾಗಿತ್ತೆಂದು ತಿಳಿದುಬರುತ್ತದೆ. ಈ ಎಲ್ಲಾ ಕಾರಣಗಳಿಂದ ತೊಣ್ಣೂರು ನಾವು ಗಮನಿಸ ಬೇಕಾದ ಐತಿಹಾಸಿಕ ಸ್ಥಳವಾಗಿದೆ.

ತೊಣ್ಣೂರು ಮೇಲುಕೋಟೆ ಬೆಟ್ಟದ ದಕ್ಷಿಣ ತುದಿಯಲ್ಲಿ ಶ್ರೀರಂಗಪಟ್ಟಣದ ವಾಯುವ್ಯ ಭಾಗಕ್ಕೆ 16 ಕಿಮೀ. ದೂರದಲ್ಲಿದೆ, ಪಾಂಡವಪುರ ಮತ್ತು ನಾಗಮಂಗಲ ರಸ್ತೆಗೆ ಸುಮಾರು 3 ಕಿಮೀ. ದೂರವಲ್ಲಿದೆ. ಶಾಸನಗಳಲ್ಲಿ ಈ ಊರನ್ನು ಯಾದವಪುರ,[1] ಯಾದವನಾರಾಯಣ-ಚತುರ್ವೇದಿ ಮಂಗಲಂ[2] ಮತ್ತು ತೊಂಡನೂರು[3] ಎಂದು ಉಲ್ಲೇಖಿಸಲಾಗಿದೆ. ಹೊಯ್ಸಳರು ಯದುವಂಶಕ್ಕೆ[4] ಸೇರಿದವರೆಂದು ಹೇಳಿಕೊಂಡಿರುವುದರಿಂದ 'ಯಾದವಪುರ' ಎಂದು ಅವರ ವಂಶದ ಹೆಸರನ್ನೇ ಇಡಲಾಗಿತ್ತೆಂದು ತಿಳಿದುಬಂದಿದೆ. ಅಲ್ಲದೆ ತೊಣ್ಣಮಾರನೆಂಬವನು ಇಲ್ಲಿ ರಾಜ್ಯಭಾರ ಮಾಡಿದ್ದರಿಂದ ತೊಂಡನೂರು ಎಂಬ ಹೆಸರು ಬಂತೆಂದು ಐತಿಹ್ಯ ಉಂಟು. ಆ ತೊಂಡನೂರೇ ತೊಣ್ಣೂರಾಗಿರಬಹುದು.

ತೊಣ್ಣೂರಿನ ಇತಿಹಾಸವನ್ನು ಹೊಯ್ಸಳರ ಕಾಲದಿಂದೀಚೆಗೆ ಮಾತ್ರ ಗುರುತಿಸಬಹುದು. ಇಲ್ಲಿ ಹೊಯ್ಸಳರಿಗೆ ಸಂಬಂಧಿಸಿದಂತೆ ಮೂವತ್ತಕ್ಕೂ ಮಿಕ್ಕು ಶಾಸನಗಳು ದೊರೆಯುತ್ತಿವೆ. 1120ರಲ್ಲಿ ವಿಷ್ಣುವರ್ಧನ ಯಾದವಪುರ ತುವ್ವಳೇಶ್ವರ ದೇವಾಲಯಕ್ಕೆ ದತ್ತಿ ಬಿಟ್ಟಿರುವುದು ಶಾಸನ[5]ದಿಂದ ತಿಳಿದುಬರುತ್ತದೆ. ಇದರಿಂದ ಯಾದವಪುರ ಹಿಂದಿನಿಂದಲೂ ಸಾಕಷ್ಟು ಪ್ರಾಮುಖ್ಯ ಪಡೆದ ಸ್ಥಳವಾಗಿತ್ತೆಂದು ಹೇಳಬಹುದು. ಆದರೆ ಈ ದೇವಾಲಯ ಈಗ ಇಲ್ಲ. ವಿಷ್ಣುವರ್ಧನ ಅನೇಕ

1 *EC,* III, Sr. 43; My. 16; M.A.R, 1932, Pp. 189
2 *EC,* III, Sr. 76; XIV, Sr, 244 and Sr. 235
3 *EC,* XIV, Sr. 230, Sr, 152, Sr. 61
4 *EC,* VI, Kl. 22
5 *EC,* III, Sr. 43

ಸಲ ಯಾದವಪುರದಲ್ಲಿ ವಾಸ್ತವ್ಯ ಹೂಡಿದ್ದನೆಂದು ಶಾಸನಗಳು ತಿಳಿಸುತ್ತವೆ.[6] ಲಕ್ಷ್ಮೀನಾರಾಯಣ ದೇವಾಲಯ ಬಹುಶಃ ತೊಣ್ಣೂರಿನ ಅತ್ಯಂತ ಪ್ರಾಚೀನ ದೇವಾಲಯ. ಇದನ್ನು ವಿಷ್ಣುವರ್ಧನನ ಆಜ್ಞೆಯ ಮೇರೆಗೆ ಸುರಿಗೆಯ ನಾಗಯ್ಯ ಎಂಬ ಅಧಿಕಾರಿ ಕಟ್ಟಿಸಿದನೆಂದು ಲಕ್ಷ್ಮೀಗುಡಿಯ ಎದುರು ಕಂಬದ ಮೇಲಿರುವ ಶಾಸನದಿಂದ ತಿಳಿದುಬರುತ್ತದೆ. ವಿಷ್ಣುವರ್ಧನ 1114ರಲ್ಲಿ ತಲಕಾಡು ಯುದ್ಧದಲ್ಲಿ ಚೋಳರ ಮೇಲೆ ವಿಜಯ ಸಾಧಿಸಿದ ನೆನಪಿಗಾಗಿ ಈ ದೇವಾಲಯವನ್ನು ಕಟ್ಟಿಸಿದ.[7] ಇನ್ನೊಂದು ಶಾಸನ[8]ದಿಂದ ರಾಮಾನುಜರು ಈ ಸ್ಥಳಕ್ಕೆ ಭೇಟಿ ಕೊಟ್ಟಿದ್ದಕ್ಕೆ ನಿದರ್ಶನ ದೊರೆಯುತ್ತದೆ. ಇದರಿಂದ ಈ ಊರು ಶ್ರೀವೈಷ್ಣವ ಪಂಥದ ಮುಖ್ಯ ಕ್ಷೇತ್ರವಾಗಿತ್ತೆಂದೂ ಹೇಳಬಹುದು. ಈ ಸ್ಥಳದಲ್ಲಿ ಶ್ರೀರಾಮಾನುಜರು ಬಿಟ್ಟಿದೇವನನ್ನು ವೈಷ್ಣವ ಮತಕ್ಕೆ ಪರಿವರ್ತಿಸಿದರೆಂದು ಪರಂಪರೆಯಿಂದ ತಿಳಿದುಬರುತ್ತದೆ.

ಇಲ್ಲಿನ ಕೆರೆಯನ್ನು ರಾಮಾನುಜರ ಆಜ್ಞೆಯ ಮೇಲೆ ಕಟ್ಟಲಾಯಿತೆಂದೂ 'ತಿರುಮಲ ಸಾಗರ' ಎಂಬ ಹೆಸರಿಡಲಾಯಿತೆಂದೂ ಒಂದು ಶಾಸನದಿಂದ ವ್ಯಕ್ತವಾಗುತ್ತದೆ.[9] ಈ ಕೆರೆಯ ನಿರ್ಮಾಣದ ಬಗ್ಗೆ ಒಂದು ಪವಾಡದ ಕತೆಯೂ ಇದೆ. ಅದರ ಪ್ರಕಾರ ಒಂದು ಸಾರಿ ಕೆರೆ ತುಂಬಿ ಹೊರಗೆ ಹರಿದು ಹೋಗಲು ಅವಕಾಶವಿಲ್ಲದೆ ಒಡೆಯುವ ಸ್ಥಿತಿಗೆ ಬಂದಿತ್ತಂತೆ. ಆಗ ಗ್ರಾಮಸ್ಥರೆಲ್ಲರೂ ಆಚಾರ್ಯರನ್ನು ಪ್ರಾರ್ಥಿಸಲು ಅವರು ತಮ್ಮ ಕೈಯಲ್ಲಿದ್ದ ಆಯುಧದಿಂದ ಬಂಡೆಯನ್ನು ಸೀಳಿದರಂತೆ. ಆಗ ಆ ಜಾಗದಲ್ಲಿ ನೀರು ಹರಿಯಲು ಪ್ರಾರಂಭಿಸಿ ಕೆರೆಗೆ ಅಪಾಯ ತಪ್ಪಿತಂತೆ. ಈಗಲೂ ಆ ಕೋಡಿಯ ಭಾಗ ಕೊಡಲಿಯಿಂದ ಸೀಳಿದಂತೆ ಕಾಣುತ್ತದೆ. ಇಂದಿಗೂ ಈ ಕೆರೆಯಲ್ಲಿ ನೀರು ಸ್ವಲ್ಪವೂ ಕಡ್ಡಿಕಸವಿಲ್ಲದೆ ಸ್ವಚ್ಛವಾಗಿರುತ್ತದೆ. ಇದಕ್ಕೆ ಕಾರಣ ಕೆರೆಯ ಯಾವ ಭಾಗದಲ್ಲಿ ಕಸಬಿದ್ದರೂ ಪೂರ್ವದ ಅಂಚಿಗೇ ತೇಲಿ ಬರುತ್ತದೆ. ಇನ್ನೊಂದು ವೈಶಿಷ್ಟ್ಯವೆಂದರೆ ಕೆರೆಯ ಒಂದೇ ಬದಿಯಲ್ಲಿ ಮರಳು ಶೇಖರವಾಗುವುದು. ಇದನ್ನು ಅಲ್ಲಿಯ ಜನ ಮರಳು ಕೋಟೆ ಎಂದೇ ಕರೆಯುತ್ತಾರೆ. ಇನ್ನೊಂದು ಶಾಸನದಲ್ಲಿ ಈ ಕೆರೆಯನ್ನು 'ಯಾದವ ಸಮುದ್ರ' ಎಂದು ಕರೆಯಲಾಗಿದೆ. ಚಾಳುಕ್ಯ-ಹೊಯ್ಸಳ ಕಾಲದ ಶಾಸನಗಳು, ವಿಗ್ರಹಗಳು ಇಲ್ಲಿಯ ಮೆಟ್ಟಿಲುಗಳಲ್ಲಿ ಕಂಡುಬರುತ್ತವೆ. ಗಜೇಂದ್ರ ಮೋಕ್ಷ, ನಳ ಇತ್ಯಾದಿ ವಿಗ್ರಹಗಳನ್ನು ನೋಡಬಹುದು. ಟಿಪ್ಪು ಸುಲ್ತಾನ ಈ ಕೆರೆಯನ್ನು ಪುನಃ ಜೀರ್ಣೋದ್ಧಾರ ಮಾಡಿದಂತೆ ಕಂಡುಬರುತ್ತದೆ. ದಖ್ಖನಿನ ಸುಬೇದಾರನ ಮಗನಾದ ನಾಸಿರ್ ಜಂಗ್ 1746ರಲ್ಲಿ ಇಲ್ಲಿಗೆ ಭೇಟಿ ಕೊಟ್ಟು ಈ ಕೆರೆಯ ಸ್ವಚ್ಛತೆಯನ್ನು ಕಂಡು ಬೆರಗಾಗಿ ಇದಕ್ಕೆ 'ಮೋತೀ ತಲಾಬ್' ಎಂದು ನಾಮಕರಣ ಮಾಡಿದ. ಟಿಪ್ಪು ಪ್ರತಿನಿತ್ಯ ಕುಡಿಯುವ ನೀರನ್ನು ಇಲ್ಲಿಂದ ತರಿಸಿಕೊಳ್ಳುತ್ತಿದ್ದನಂತೆ. ಈ ಸ್ಥಳ ಪವಾಡ ಕ್ಷೇತ್ರವೆಂದು ವಿವಿಧ ಬಾಧೆಗೊಳಗಾದ ಜನ ಪರಿಹಾರಕ್ಕಾಗಿ ಇಂದಿಗೂ ಇಲ್ಲಿಗೆ ಬರುತ್ತಾರೆ.

ತೊಣ್ಣೂರಿನ ಈಶಾನ್ಯದಲ್ಲಿರುವ ಕೈಲಾಸೇಶ್ವರ ಮತ್ತು ಗೋಪಾಲಕೃಷ್ಣಸ್ವಾಮಿ ದೇವಾಲಯಗಳು 1ನೆಯ ನರಸಿಂಹನ (1158) ಕಾಲದಲ್ಲಿ ನಿರ್ಮಿತವಾದವು. ಕೃಷ್ಣದೇವಾಲಯವನ್ನು ಕಾರ್ಯಕುಡಿಯ ಕೊತ್ತಾಡಿ ದಂಡನಾಯಕ 1158ರಲ್ಲಿ ನಿರ್ಮಿಸಿದ. ಇಮ್ಮಡಿಯ ಬಲ್ಲಾಳನ ಕಾಲದಲ್ಲಿ

[6] *EC,* III, My. 16:MAR, 1932, P. 189: MAR, 1944, p. 57
[7] MAR, 1912, p. 11; & 1932, p. 3
[8] *EC,* XIV Sr. 235
[9] *EC,* IV Kr. 14
[10] *EC,* II, Sr. 62

ದೊಡ್ಡ ನವರಂಗವನ್ನೂ ಮುಖಮಂಟಪವನ್ನೂ ಪ್ರಾಕಾರ ಮಹಾದ್ವಾರಗಳನ್ನೂ ಸೇರಿಸಲಾಯಿತು.

1326ರಲ್ಲಿ ಮುಸಲ್ಮಾನರ ದಾಳಿಯಿಂದ ದೋರಸಮುದ್ರ ಪತನವಾದ ಅನಂತರ 3ನೆಯ ಬಲ್ಲಾಳ ತೊಣ್ಣೂರು ಮತ್ತು ತಿರುವಣ್ಣಾಮಲೈಗಳಿಂದ ರಾಜ್ಯಭಾರ ಮಾಡುತ್ತಿದ್ದನೆಂದು ರೈಸ್ ಅಭಿಪ್ರಾಯ ಪಡುತ್ತಾರೆ.

ಹೊಯ್ಸಳರ ಅನಂತರ ಹೈದರ್ ಅಲಿಯ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದ ಒಂದು ಶಾಸನವನ್ನು ಬಿಟ್ಟರೆ ಇನ್ನಾವ ಶಾಸನಗಳೂ ಇಲ್ಲಿ ದೊರೆಯುವುದಿಲ್ಲ. ಆದರೂ ಇಲ್ಲಿಯ ದೇವಾಲಯಗಳ ವಾಸ್ತು ಶಿಲ್ಪಶೈಲಿಯನ್ನು ಗಮನಿಸಿದರೆ ವಿಜಯನಗರ ಮತ್ತು ಮೈಸೂರು ರಾಜರುಗಳೂ ಇಲ್ಲಿ ಮುಖಮಂಟಪ, ಕಲ್ಯಾಣಮಂಟಪ ಮೊದಲಾದವುಗಳನ್ನು ಕಟ್ಟಿಸಿದ್ದರೆಂದು ವೇದ್ಯವಾಗುತ್ತದೆ. ಅಲ್ಲದೆ ತೊಣ್ಣೂರಿನಲ್ಲಿ ಮೈಸೂರಿನ ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಒಂದು ಮಸೀದಿ ಪ್ರವರ್ಧಮಾನ ಸ್ಥಿತಿಯಲ್ಲಿತ್ತೆಂದೂ ಅಲ್ಲಿಯ ದಾನಕಾರ್ಯಕ್ಕಾಗಿ ಅವರು ಹೈದರ್ ಅಲಿಗೆ ಚಟ್ಟಮಗೆರೆ ಎಂಬ ಗ್ರಾಮವನ್ನು ದತ್ತಿ ಕೊಟ್ಟರೆಂದೂ ದಾಖಲೆ ಇದೆ.[11] ಇದರಿಂದ ಮೈಸೂರಿನ ರಾಜರೂ ಈ ಊರಿನ ಅಭಿವೃದ್ಧಿಗೆ ಕಾರಣರಾದರೆಂದು ವೇದ್ಯವಾಗುತ್ತದೆ.

ಈಗ ಇಲ್ಲಿ ಒಟ್ಟು ನಾಲ್ಕು ದೇವಾಲಯಗಳು ಉಳಿದಿವೆ. ಅವುಗಳೆಂದರೆ ಲಕ್ಷ್ಮೀನಾರಾಯಣ ದೇವಾಲಯ, ಗೋಪಾಲಕೃಷ್ಣದೇವಾಲಯ, ಕೈಲಾಸೇಶ್ವರ ಮತ್ತು ನರಸಿಂಹ ದೇವಾಲಯಗಳು. ಲಕ್ಷ್ಮೀನಾರಾಯಣ ದೇವಾಲಯ ಐದುನೂರು ಅಂಕಣಗಳಷ್ಟು ವಿಶಾಲವಾಗಿದೆ. ಗರ್ಭಗುಡಿಯಲ್ಲಿ ಗರುಡ ಪೀಠದ ಮೇಲೆ ಆರು ಅಡಿ ಎತ್ತರದ ನಾರಾಯಣ ವಿಗ್ರಹವಿದೆ. ಗರ್ಭಗುಡಿಯ ಚಾವಣಿಯ ಮಧ್ಯದಲ್ಲಿ ಪದ್ಮ ಮೂಲೆಗಳಲ್ಲಿ ಸಿಂಹಲಲಾಟಗಳು ಇವೆ. ಸುಕನಾಸಿ ದ್ವಾರದ ಮೇಲೆ ಗಜಲಕ್ಷ್ಮಿ ಇದೆ. ನವರಂಗದ ಬಳಪದ ಕಲ್ಲಿನ ಕಂಬಗಳು ಬೇಲೂರಿನ ದೇವಾಲಯದಲ್ಲಿರುವ ಕಂಬಗಳಂತೆ ಸುಂದರವಾಗಿವೆ. ಚಾವಣಿಯಲ್ಲಿ ಅಷ್ಟದಿಕ್ಪಾಲಕರು, ಚಿತ್ರ ಮಧ್ಯದಲ್ಲಿ ಪದ್ಮ ಸಿಂಹಲಲಾಟಗಳಿವೆ. ಹೊರಗೋಡೆಗಳನ್ನು ಕಣಶಿಲೆಯಲ್ಲಿ ಕಟ್ಟಿದ್ದರೂ ಅವು ಬೇಲೂರು ರೀತಿಯಲ್ಲಿವೆ. ವಿಜಯನಗರ ಕಾಲದಲ್ಲಿ ವಿಮಾನದ ಮೇಲಿರುವ ಇಟ್ಟಿಗೆಯ ಗೋಪುರ, ದೊಡ್ಡ ಮುಖ ಮಂಟಪದ ಐವತ್ತು ಸ್ತಂಭಗಳ ಶಾಲೆ, ಮಹಾದ್ವಾರ, ಕೋಟೆಯಂತಿರುವ ಪ್ರಾಕಾರದ ಗೋಡೆ ನಿರ್ಮಿತವಾದುವು. ಪಾಳೆಯಗಾರರ ಕಾಲದಲ್ಲಿ ನಲವತ್ತು ಸ್ತಂಭಗಳ ಪಾತಾಳಅಂಕಣ ರಚಿತವಾಯಿತು. ಹೊರಗಿನ ಪ್ರಾಕಾರದ ದಕ್ಷಿಣ ಗೋಡೆಯ ಹತ್ತಿರ ಲಕ್ಷ್ಮೀ ದೇವಾಲಯದ ಗರ್ಭಗುಡಿ ರಂಗಮಂಟಪಗಳು ವಿಷ್ಣುವರ್ಧನನ ಕಾಲದಲ್ಲೇ ನಿರ್ಮಿತವಾದುವು. ದೇವಸ್ಥಾನದ ಹಿಂಭಾಗದಲ್ಲಿ ಸುತ್ತಲೂ ಪೌಳಿ ಇದೆ. ಈಗ ಪೌಳಿಯಲ್ಲಿ ಸಣ್ಣಸಣ್ಣ ಗರ್ಭಗುಡಿಗಳಿದ್ದು ವಿಗ್ರಹಗಳಿದ್ದ ಗುರುತುಗಳಿವೆ. ಈಗ ಅವೆಲ್ಲವೂ ಬರಿದಾಗಿವೆ. ಮಹಾದ್ವಾರದ ಮುಂದೆ ಕಣಶಿಲೆಯ ಹದಿನಾರು ಮೂಲೆಗಳ ಗರುಡಸ್ತಂಭವಿದೆ.

ಗೋಪಾಲಕೃಷ್ಣ ದೇವಾಲಯದ ರಂಗಮಂಟಪದಲ್ಲಿ ಕಲ್ಲಿನ ಹದಿನಾರು ಕಂಬಗಳಿವೆ. ದೇವಾಲಯದ ಗರ್ಭಗೃಹ ಸುಕನಾಸಿ ರಂಗಮಂಟಪಗಳನ್ನು ಕಣಶಿಲೆಯಿಂದ ಕಟ್ಟಿರುವರು. ಹೊರಗಿನ ಗೋಡೆಗಳ ಮೇಲೆ ಕೀರ್ತಿ ಮುಖ ಮಕರಗಳ ಸಾಲುಗಳಿವೆ. ವಿಮಾನವನ್ನು ಚೋಳರ ರೀತಿಯಲ್ಲಿ ದೊಡ್ಡ ಇಟ್ಟಿಗೆಗಳಿಂದ ಕಟ್ಟಿರುವರು. ಗರ್ಭಗೃಹದಲ್ಲಿ ಮೂರು ವಿಗ್ರಹಗಳಿವೆ. ಸುಖಾಸನದಲ್ಲಿ ಕುಳಿತಿರುವ ವಿಷ್ಣು ಅಭಯ ಚಕ್ರಶಂಖ ಹಿಡಿದು ಮತ್ತೊಂದು ಕೈಯನ್ನು ತೊಡೆಯ ಮೇಲಿಟ್ಟಿರುವನು. ತಲೆ ದೊಡ್ಡದಾಗಿದೆ. ಬಹುಶಃ ಅಲಂಕೃತನಾಗಿ ಕುಳಿತಿರುವ ಬಾಲಕೃಷ್ಣನನ್ನು ತೋರಿಸಲು ಶಿಲ್ಪಿ ಯತ್ನಿಸಿದ್ದಾನೆ ಇದರ ಎರಡು ಪಕ್ಕಗಳಲ್ಲೂ ಸತ್ಯಭಾಮೆ ಮತ್ತು ರುಕ್ಮಿಣಿಯರ ವಿಗ್ರಹ

[11] *EC*, IV Kr. 18 and 20

ಗಳಿವೆ. ಈ ದೇವಿಯರ ವಿಗ್ರಹಗಳು ಲೋಹದಿಂದ ರಚಿತವಾಗಿದೆ. ಇವನ್ನು ವಿಜಯನಗರದ ಅರಸರ ಕಾಲದಲ್ಲಿ ರೂಪಿಸಿದಂತೆ ಕಂಡುಬರುತ್ತದೆ. ದೇವಾಲಯದ ಹೊರಗಡೆ ಪೂರ್ವದಲ್ಲಿ ವಸಂತ ಮಂಟಪ, ಮಾಸ್ತಿ ಕಲ್ಲು, ಹದಿನೆಂಟು ಅಡಿ ಎತ್ತರದ ಚೆನ್ನಾಗಿ ಅಲಂಕರಿಸಿರುವ ದ್ವಾರ ಇವೆ.

ಕೈಲಾಸೇಶ್ವರ ದೇವಾಲಯದಲ್ಲಿ ಎರಡೂವರೆ ಅಡಿ ಎತ್ತರದ ಲಿಂಗವಿದೆ. ನವರಂಗದ ಪಶ್ಚಿಮ ಭಾಗದಲ್ಲಿ ಅರು ದುಂಡಾದ ಕಂಬಗಳು, ಪೂರ್ವ ಭಾಗದಲ್ಲಿ ಹದಿನಾರು ಮೂಲೆಗಳ ನಾಲ್ಕು ಕಂಬಗಳು ಇವೆ. ಪೂರ್ವದ ಮುಖಮಂಟಪದಲ್ಲಿ ಎರಡು ಅಷ್ಟ ಕೋನ ಸ್ತಂಭಗಳಿವೆ. ಹೊರಗಿನ ಗೋಡೆಯ ಮೇಲೆ ಹೊಯ್ಸಳರ ಕಾಲದ ಅನೇಕ ಕನ್ನಡ ತಮಿಳು ಗ್ರಂಥ ಶಾಸನಗಳಿವೆ.

ನಾರಾಯಣ ದೇವಾಲಯಕ್ಕೆ ಉತ್ತರದಲ್ಲಿ ಗುಡ್ಡದ ಮೇಲೆ ೧೩ನೆಯ ಶತಮಾನದ ನರಸಿಂಹ ದೇವಸ್ಥಾನವಿದೆ. ಇಲ್ಲಿರುವ ಮೂಲ ವಿಗ್ರಹ ಯೋಗಮುದ್ರೆಯಲ್ಲಿದೆ. ಯೋಗ ಪಟ್ಟವನ್ನು ಮೊಣಕಾಲುಗಳ ಮೇಲೆ ಕಟ್ಟಿ ಪದ್ಮ ಪೀಠದ ಮೇಲೆ ನರಸಿಂಹ ಬಾಯ್ತೆರೆದು ಕುಳಿತಿದ್ದಾನೆ. ನವರಂಗದಲ್ಲಿ ಅನೇಕ ಕಣಶಿಲೆಗಳಿವೆ. ಇದರ ಆಗ್ನೇಯ ಮೂಲೆಯಲ್ಲಿ ಪಾಠಶಾಲೆ, ಈಶಾನ್ಯದಲ್ಲಿ ಶ್ರೀರಾಮಾನುಜರ ವಿಗ್ರಹ[12] ಇವೆ. ಸುಂದರವಾದ ರಾಮಾನುಜರ ವಿಗ್ರಹವನ್ನು ಗಾರೆಯಿಂದ ಮಾಡಿರುವರು. ಶ್ರೀ ರಾಮಾನುಜರು ಪದ್ಮಾಸನದಲ್ಲಿ ಕುಳಿತು ದಂಡವನ್ನು ಹಿಡಿದಿರುವರು. ತಲೆಯ ಮೇಲೆ ಏಳು ಹೆಡೆಯ ಆದಿಶೇಷನಿದ್ದಾನೆ. ಈ ವಿಗ್ರಹ ರಾಮನುಜರ ಸಮಕಾಲೀನ ಎಂದು ನಂಬಿಕೆ ಇದ್ದರೂ ಈಚಿನದೆಂದು ಕಂಡುಬರುತ್ತದೆಂದು ಅಭಿಪ್ರಾಯ ಪಡಲಾಗಿದೆ.[13]

ಹೀಗೆ ತೊಣ್ಣೂರು ಅಥವಾ ಯಾದವಪುರ ಐತಿಹಾಸಿಕ ಮಹತ್ತ್ವ ಪಡೆದ ಊರುಗಳಲ್ಲೊಂದಾಗಿದೆ. ನಮ್ಮ ಇತರ ಯಾವುದೋ ಪ್ರಾಚೀನ ಸ್ಥಳಗಳ ಸ್ಥಿತಿಯಂತೆಯೇ ಇದರ ಗತ ಕಾಲದ ಕಲೆಯನ್ನು ತಿಳಿಸುವ ಸುದೀರ್ಘ ಕಥನಗಳು ನಮಗೆ ದೊರೆಯುವುದಿಲ್ಲ. ಆದರೂ ಇಲ್ಲಿ ದೊರೆಯುವ ಬಾಹ್ಯ ಕುರುಹುಗಳು ಮತ್ತು ಶಿಲಾಶಾಸನಗಳ ಆಧಾರದಿಂದಲೇ ಇದರ ಸ್ಥೂಲ ಪರಿಚಯವನ್ನು ಮಾಡಿಕೊಳ್ಳಬಹುದು. ಇದರಿಂದ ಹಿಂದಿನ ರಾಜವಂಶಗಳು ತಮ್ಮ ರಾಜ್ಯದ ಮುಖ್ಯ ಸ್ಥಳಗಳಲ್ಲಿ ಆಡಳಿತವನ್ನು ಸುವ್ಯವಸ್ಥೆಗೊಳಿಸಿದಂತೆಯೇ ಧರ್ಮ, ಕಲೆ ಮತ್ತು ಆರ್ಥಿಕ ರಂಗಗಳಿಗೂ ಪ್ರೋತ್ಸಾಹ ನೀಡುತ್ತಿದ್ದುದಕ್ಕೆ ಪುರಾವೆಗಳು ದೊರಕುತ್ತವೆ. ಈ ಐತಿಹಾಸಿಕ ಸ್ಥಳ ಇಂದಿಗೂ ಸಂದರ್ಶನೀಯ ಸ್ಥಳವಾಗಿದೆ. ಹಿರಿಯರ ಸಾಧನೆಗಳನ್ನು ಕಲ್ಲಿನಲ್ಲಿ ಹಿಡಿದಿಟ್ಟಿದೆ.

---

12 ಈ ಸ್ಥಳದಲ್ಲೇ ರಾಮಾನುಜರು ಜೈನರೊಂದಿಗೆ ವಾದ ಮಾಡಿದುದು ಎಂದು ನಂಬಲಾಗಿದೆ.

13 'ಹೊಯ್ಸಳರ ವಾಸ್ತುಶಿಲ್ಪ,' ಪು. 93

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

ಮಾನವಿಕ ಕರ್ಣಾಟಕ

ಪ್ರಬುದ್ಧ ಕರ್ಣಾಟಕ

ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ .... ನಾಲ್ಕು ರೂಪಾಯಿ

ಇತರರಿಗೆ .... ಆರು ರೂಪಾಯಿ

ಸಂಸ್ಥೆಗಳಿಗೆ .... ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್

'ಪ್ರಸಾರಾಂಗ'

ಮಾನಸ ಗಂಗೋತ್ರಿ, ಮೈಸೂರು-೫೭೦ ೦೦೬.